# ಯುಗದರ್ಶಿ

ರಮ್ಜಾನ್ ವ್ರತಾನುಷ್ಠಾನ

ಇಸ್ಲಾಮ್ ಮತ್ತು ಸ್ತ್ರೀಯರ ಹಕ್ಕುಗಳು

ದೈವವನ್ನು ಅರಿತುಕೊಳ್ಳುವ ಮಾರ್ಗಗಳು

ಮಹಾತ್ಮಾ ಶ್ರೀಕೃಷ್ಣ

ಯೇಸುಕ್ರಿಸ್ತರು ಮೃತರಾದುದು ಎಲ್ಲಿ?


**ತ್ರೈಮಾಸಿಕ**

ಅಕ್ಟೋಬರ್ — ಡಿಸೆಂಬರ್
1975

ಇಖಾ-ಫತಹ್ 1354

ಬೆಲೆ: ರೂ. 1-00.


"ಒಂದು ಪಂಗಡದವರಿಗೆ ನಿಮ್ಮ ಮೇಲಿರುವ ವಿರೋಧವು ಅವರೊಡನೆ ಅನೀತಿಯಿಂದ ವರ್ತಿಸುವರೆ ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ನೀತಿಯಿಂದ ಪ್ರವರ್ತಿಸಿರಿ. ಅದು ಭಯಭಕ್ತಿಗೆ ಅತ್ಯಂತ ಸಮೀಪಸದ್ದಾಗಿದೆ."

—ಪವಿತ್ರ ಖುರ್‌ಆನ್.

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು-575001.

ಸಂಪುಟ: 1 ಸಂಚಿಕೆ: 3

ಅಕ್ಟೋಬರ್—ಡಿಸೆಂಬರ್ 1975/ಇಖಾ—ಫತಹ್ 1354

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ. ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು.

## ವಿಷಯ ಸೂಚಿಕೆ:

ಹಝ್‌ರತ್ ಅಹ್ಮದರ ಉಪದೇಶಗಳು

ರಮ್ಜಾನ್ ವ್ರತಾನುಷ್ಠಾನ

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಇಸ್ಲಾಮ್ ಮತ್ತು ಸ್ತ್ರೀಯರ ಹಕ್ಕುಗಳು

ನಾನು ಮುಸ್ಲಿಂ; ನನ್ನ ಮತ ಇಸ್ಲಾಂ

ದೈವವನ್ನು ಅರಿತುಕೊಳ್ಳುವ ಮಾರ್ಗಗಳು

ಮಹಾತ್ಮ ಶ್ರೀಕೃಷ್ಣ

ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಸಂಪೂರ್ಣ ಬೆಂಬಲ

ಅಹ್ಮದಿಯಾ ವಾರ್ತೆಗಳು

ಸಂಪಾದಕರಿಗೆ ಪತ್ರ

ಪುಸ್ತಕ ವಿಭಾಗ—ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

بسم الله الرحمن الرحيم

نحمده ونصلي على رسوله الكريم

# ಯುಗಕರ್ತ್ರಿ

ಸಂಪುಟ: 1 | ಅಕ್ಟೋಬರ್ 1975 / ಇಖಾ 1354 | ಸಂಚಿಕೆ: 3



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

“ಆಹಾರವನ್ನು ಕಡಿಮೆ ಮಾಡುವುದು, ಹಸಿವನ್ನು ಸಹಿಸುವುದು ಎಂಬುದು ಆತ್ಮದ ಸಂಸ್ಕಾರಕ್ಕೂ ಉನ್ನತಿಗೂ ಅತ್ಯಾವಶ್ಯಕವಾದ ಒಂದು ಕರ್ಮವಾಗಿದೆ. ಅದು ಆತ್ಮದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಭಕ್ಷ್ಯಪೇಯಗಳಿಂದ ಮಾತ್ರವಲ್ಲ ಜೀವಿಸುವುದು. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತ ಸಹ ಇದೆ. ಶಾಶ್ವತವಾದ ಪಾರತ್ರಿಕ ಜೀವಿತವನ್ನು ಅಲಕ್ಷ್ಯ ಮಾಡುವುದರಿಂದಾಗಿ ಓರ್ವನು ಪರಮಾತ್ಮನಿಂದ ಬೇರ್ಪಟ್ಟು ಅವನ ಅನಿಷ್ಟಕ್ಕೆ ಸ್ವಯಂ ಗುರಿಯಾಗುತ್ತಾನೆ.

‘‘ವ್ರತಾನುಷ್ಠಾನದ ಉದ್ದೇಶ ಒಂದು ಕ್ಲಪ್ತಕಾಲದ ವರೆಗೆ ಪಾನಾಶನಾದಿಗಳನ್ನು ವರ್ಜಿಸಿ ಹಸಿವನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ಎಲ್ಲಾ ವಿಧ ದೋಷಗಳಿಂದ ದೂರವಿದ್ದು ವ್ರತಾನುಷ್ಠಾನಿಯು ದೈವಸ್ಮರಣೆಯಲ್ಲಿ ಹೆಚ್ಚು ಸಮಯವನ್ನು ವ್ಯಯಿಸಬೇಕಾದುದು ಅತ್ಯಾವಶ್ಯಕವಾಗಿದೆ. ಪವಿತ್ರನಬಿ (ಮುಹಮ್ಮದ್ ಪೈಗಂಬರ್) ರಮ್ಜಾನ್ ಮಾಸದಲ್ಲಿ ಬಹಳ ಹೆಚ್ಚು ದೈವಾರಾಧನೆಯಲ್ಲಿ ಮಗ್ನನಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ಕಾಲದಲ್ಲಿ ಭಕ್ಷ್ಯಪೇಯ ಸಂಬಂಧವಾದ ವಿಚಾರಗಳಿಂದ ವಿರಮಿಸಿ ಆ ಬಗೆಯ ಕಾರ್ಯಗಳನ್ನು ಉಪೇಕ್ಷಿಸಿ ಶ್ರದ್ಧೆಯನ್ನೆಲ್ಲಾ ಪರಮಾತ್ಮನ ಕಡೆಗೆ ಇರಿಸಬೇಕಾಗಿದೆ. ಭೌತಿಕವಾದ ಭಕ್ಷ್ಯ ವಸ್ತುಗಳು ಲಭಿಸಿ ಆಧ್ಯಾತ್ಮಿಕ ಆಹಾರವನ್ನು ಕುರಿತು ಚಿಂತಿಸದ ಮನುಷ್ಯನನ್ನು ಭಾಗ್ಯಹೀನನೆಂದೇ ಹೇಳಬಹುದು. ಆಹಾರವನ್ನು ಸೇವಿಸುವುದರಿಂದ ಶರೀರಕ್ಕೆ ಬಲವೂ ಓಜಸ್ಸೂ ಲಭಿಸುವಂತೆ ಆತ್ಮಿಕಾಹಾರದ ಮೂಲಕ ಆತ್ಮಕ್ಕೆ ರಕ್ಷಣೆಯೂ ಆತ್ಮಶಕ್ತಿಗಳಿಗೆ ಚೈತನ್ಯವೂ ಲಭಿಸುತ್ತದೆ. ಎಲ್ಲಾ ವಿಧ ಸಫಲತೆಗಳ ಬಾಗಿಲು ದೈವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯ ಲಬ್ಧಗಾಗಿ ಅವನಿಂದಲೇ ಸಹಾಯವನ್ನು ಯಾಚಿಸಬೇಕಾಗಿದೆ.’’

—ಹಝ್ರತ್ ಅಹ್ಮದ್.

# ರಮ್ಜಾನ್ ವ್ರತಾನುಷ್ಠಾನ

ಲೇಖಕ:
ಮುಹಮ್ಮದ್ ಯೂಸುಫ್

ರಮ್ಜಾನ್ ಮಾಸದಲ್ಲಿಡೀ ಎಲ್ಲಾ ಮುಸ್ಲಿಮರು ವ್ರತವನ್ನನುಷ್ಠಿಸಬೇಕೆಂಬುದು ಇಸ್ಲಾಂ ಧರ್ಮದ ಅನುಶಾಸನವಾಗಿದೆ. ಪ್ರಾತ:ಕಾಲದ ನಸುಕಿಗೆ ಮುಂಚಿತವಾಗಿ ಆಹಾರವನ್ನೇನಾದರೂ ಸೇವಿಸಿ ವ್ರತದ ಇಂಗಿತದಿಂದ ಭಕ್ತಿಭರಿತವಾದ ಜೀವನವನ್ನು ನಡೆಸುವುದಾಗಿದೆ ಇಸ್ಲಾಮಿಕ ವ್ರತಾನುಷ್ಠಾನ. ನಸುಕಿನ ಬೆಳಕು ಹರಿದ ಮೊದಲ್ಗೊಂಡು ಸೂರ್ಯಾಸ್ತಮಾನದ ವರೆಗಿನ ಕಾಲ ಎಲ್ಲಾ ವಿಧದ ಆಹಾರ ಪಾನೀಯಾದಿಗಳನ್ನೂ ಧೂಮ್ರಪಾನ, ನಸ್ಯ ಸೇವನೆ, ಹಾಗೆಯೇ ಪತಿ ಪತ್ನಿಯರು ತಮ್ಮ ದೈಹಿಕ ಸಂಬಂಧವನ್ನು ಪರಿತ್ಯಜಿಸಬೇಕಾದದ್ದು ಇಸ್ಲಾಮಿಕ ವ್ರತಾನುಷ್ಠಾನದ ನಿಯಮವಾಗಿದೆ. ಮನುಷ್ಯನು ಪರಮಾತ್ಮನ ದಯಾಪುರಸ್ಸರವಾದ ಸ್ನೇಹಕ್ಕೆ ಪಾತ್ರನಾಗಲಿಕ್ಕೂ ದೇವರ ಸಾನ್ನಿಧ್ಯವನ್ನು ಪಡೆಯಲಿಕ್ಕೂ ಇಸ್ಲಾಂ ಧರ್ಮ ನಿರ್ದೇಶಿಸುವ ಕರ್ಮಗಳಲ್ಲಿ ವ್ರತಾನುಷ್ಠಾನವು ಒಂದಾಗಿದೆ. ಇಸ್ಲಾಂ ಮತದ ತತ್ವ ಪ್ರಕಾರ ಮುಕ್ತಿ ಲಬ್ಧಿಗಾಗಿ ಭಕ್ತಿ ವಿಶ್ವಾಸಗಳಂತೆ ಬಾಹ್ಯಕರ್ಮಗಳೂ ಅತ್ಯಾವಶ್ಯಕ. ಪವಿತ್ರ ಖುರ್‌ಆನ್‌ನಲ್ಲಿಯೂ ಪೈಗಂಬರರ ನುಡಿಗಳಲ್ಲಿಯೂ ಭಕ್ತಿ ವಿಶ್ವಾಸಗಳನ್ನು ಪ್ರತಿಪಾದಿಸುವಾಗ ಸಂಬಂಧಪಟ್ಟ ಕರ್ಮಗಳು ಭಕ್ತಿಯ ಅಖಂಡವಾದ ಭಾಗಗಳೆಂಬಂತೆ ಪ್ರತಿಪಾದಿಸಲ್ಪಟ್ಟಿರುತ್ತವೆ.

ದೈವಪ್ರೀತಿಗಾಗಿ ಯಾವ ತ್ಯಾಗವನ್ನು ಮಾಡಬೇಕೆಂಬ ಪರಿಶುದ್ಧ ಬೋಧವು ವ್ರತದಿಂದ ಉಂಟಾಗುತ್ತದೆ. ಅಗತ್ಯ ಬಂದಲ್ಲಿ ತನ್ನ ದೇಹವನ್ನೂ ಧನವನ್ನೂ ಮಾತ್ರವಲ್ಲ ತನ್ನ ಸರ್ವಸ್ವವನ್ನೂ ದೇವರಿಗಾಗಿ ಬಲಿಯರ್ಪಿಸುವುದು ಬಹು ದೊಡ್ಡ ಭಾಗ್ಯವೆಂದು ಯಥಾರ್ಥ ಮುಸ್ಲಿಂ ತಿಳಿಯುತ್ತಾನೆ. ಈ ರೀತಿಯ ತ್ಯಾಗಕ್ಕೆ ಸನ್ನದ್ಧನಾಗದ ಓರ್ವನು ದೈವಪ್ರೀತಿಗೆ ಪಾತ್ರನಾಗಲು ಅರ್ಹನಲ್ಲ.

ವ್ರತಕಾಲದಲ್ಲಿ ಒಬ್ಬ ಮುಸ್ಲಿಂ ಆಹಾರ ಪಾನೀಯಗಳಿಲ್ಲದೆಯೂ ಪತ್ನಿಯಿಂದ ದೂರವಿರಲೂ ಅಭ್ಯಸಿಸುತ್ತಾನೆ. ಅದರಿಂದಾಗಿ ದೈವಪಥದಲ್ಲಿ ಹಸಿವು, ಬಾಯಾರಿಕೆಯನ್ನು ಸಹಿಸಲಿಕ್ಕೂ ಪತ್ನಿಪುತ್ರಾದಿಗಳಿಂದ ಬೇರ್ಪಡಬೇಕಾಗಿ ಬಂದರೆ ಅವನು ಉತ್ಸಾಹದಿಂದ ಅದಕ್ಕೂ ಸಿದ್ಧನಾಗುತ್ತಾನೆ. ದೈವಪ್ರೀತಿಯನ್ನು ಅಪೇಕ್ಷಿಸಿ ಒಂದು ಕ್ಲಪ್ತ ಸಮಯದ ತನಕ ಭಕ್ಷ್ಯಪೇಯಗಳನ್ನೂ ತನ್ನ ಪತ್ನಿಯನ್ನೂ ತ್ಯಜಿಸುವುದರಿಂದಾಗಿ, ಅಗತ್ಯ ಬಂದಾಗ ಅದಕ್ಕಿಂತ ಹೆಚ್ಚನ್ನು ಮಾಡಲಿಕ್ಕೂ ಅವನು ಸನ್ನದ್ಧನಾಗುವನೆಂದು ಸ್ಪಷ್ಟವಾಗುತ್ತದೆ.

ಲೋಭ, ಮೋಹ, ಕ್ರೋಧ ಮೊದಲಾದ ಅರಿಷಡ್ವರ್ಗಗಳು ಎಲ್ಲಾ ಪಾಪಗಳಿಗೆ ಮೂಲ ಕಾರಣ. ವ್ರತಾನುಷ್ಠಾನದಿಂದ ಇವು ನಿಯಂತ್ರಿಸಲ್ಪಡುತ್ತವೆ. ಲೋಭದಿಂದ ಓರ್ವನು ಅನ್ಯಾಯವಾಗಿ ಅನ್ಯರ ಸಂಪತ್ತನ್ನು ಆಶಿಸುವನು; ಮೋಹದಿಂದ ಅನೇಕ ಚಪಲ ಪ್ರವೃತ್ತಿಗಳಿಗೆ ವಶನಾಗುವನು; ಕ್ರೋಧವನ್ನು ನಿಯಂತ್ರಿಲಾರದೆ ಇರಿತಕ್ಕೂ ಕೊಲೆಪಾತಕಕ್ಕೂ ಕಾರಣನಾಗುವನು. ಆದರೆ ತಾನು ಸ್ವತ: ಸಂಪಾದಿಸಿದ ಹಾಗೂ ತನಗೆ ಅವಕಾಶವಿರುವ ಭಕ್ಷ್ಯವಸ್ತುಗಳನ್ನೂ ತನ್ನ ಪ್ರೀತಿಯ ಧರ್ಮಪತ್ನಿಯನ್ನೂ ದೈವಪ್ರೀತಿಗಾಗಿ ಉಪೇಕ್ಷಿಸಲು ಸಾಧ್ಯವಾದ ಓರ್ವನಿಗೆ ತನಗವಕಾಶವಿಲ್ಲದ ಅನ್ಯರ ಸಂಪತ್ತಿನಲ್ಲಾಗಲೀ ಸ್ತ್ರೀಯಲ್ಲಾಗಲೀ ಮೋಹವುಂಟಾಗಲಾರದಷ್ಟೆ? ಅವನ ಈ ಸ್ವಭಾವದ ಫಲವಾಗಿ ತನ್ನ ಕ್ರೋಧವನ್ನು ನಿಯಂತ್ರಿಸುವ ಶಕ್ತಿಯೂ ಅವನಿಗೆ ಲಭಿಸುವುದು. ಹೀಗೆ ವ್ರತಾನುಷ್ಠಾನದಿಂದ ಸದ್ಗುಣಗಳು ಸಿದ್ಧಿಸುತ್ತವೆ.

ಮನುಷ್ಯನ ಕೆಲವು ಚಟಗಳು ಆರೋಗ್ಯಕ್ಕೆ ಹಾನಿಕರವೂ ಸತ್ಕರ್ಮಗಳಿಗೆ ಪ್ರತಿಬಂಧಕವೂ ದುಷ್ಕರ್ಮಗಳಿಗೆ ಕಾರಣವೂ ಆಗುತ್ತವೆ. ವ್ರತಾನುಷ್ಠಾನದಿಂದ ಈ ರೀತಿಯ ದುಷ್ಚಟಗಳನ್ನು ನಿವಾರಿಸಲಿಕ್ಕೂ ಆಧ್ಯಾತ್ಮಿಕ ಔನ್ನತ್ಯವನ್ನು ಪಡೆಯಲಿಕ್ಕೂ ಸಾಧ್ಯವಾಗುತ್ತದೆ. ಉದಾಹರಣೆಗೆ ಬೀಡಿ–ಸಿಗರೇಟು ಸೇದುವುದು, ಅಥವಾ ಇನ್ನಿತರ ಧೂಮ್ರಪಾನ ಇಂತಹ ದುಷ್ಚಟಗಳನ್ನು ಸ್ವಲ್ಪ ಸಮಯದ ವರೆಗಾದರೂ ದೈವಹಿತಕ್ಕಾಗಿ ತ್ಯಜಿಸು[illegible] ಓರ್ವನು ಅವುಗಳನ್ನು ಸಂಪೂರ್ಣವಾಗಿ ವರ್ಜಿಸಲು ಶಕ್ತನಾಗುವನು. ಬದುಕಲು ಅತ್ಯಾವಶ್ಯಕವೂ ಉಪಯೋಗಿಸಲು ವಿರೋಧವೂ ಇಲ್ಲದ ವಸುಗಳನ್ನೇ ತ್ಯಜಿಸುವ ವ್ರತಾನುಷ್ಠಾನಿಗೆ ಇಂತಹ ಅನವಶ್ಯಕವೂ ದೋಷಕರವೂ ಆದ ವಸ್ತುಗಳನ್ನು ಪರಿತ್ಯಜಿಸಲು ಪ್ರಯಾಸವಾಗದು.

ವ್ರತಾನುಷ್ಠಾನವು ವಿಧಿಸಲ್ಪಟ್ಟದ್ದು "ನೀವು 'ಮುತ್ತಖೀ'ಗಳಾಗಿರಲಿಕ್ಕೆ ಆಗಿದೆ'' ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. 'ಮುತ್ತಖೀ' ಎಂಬ ಅರಬಿ ಪದದ ಅರ್ಥ ಕಷ್ಟಾನುಭವದಿಂದ ವಿಮೋಚಿತನು; ಪಾಪದಿಂದ ಮುಕ್ತಿಹೊಂದಿದವನು; ಆಧ್ಯಾತ್ಮಿಕ ಉನ್ನತಿಯನ್ನು ಪಡೆದವನು ಎಂದಾಗಿವೆ.

ಧನಿಕರು ಸದಾ ಒಳ್ಳೆ ಒಳ್ಳೆಯ ಭಕ್ಷ್ಯ ಭೋಜನಾದಿಗಳನ್ನು ಯಥೇಷ್ಟವಾಗಿ ತಿನ್ನುವುದರಿಂದಾಗಿ ಹಸಿವು ಎಂದರೆ ಏನೆಂದು ಸಹ ಅವರಿಗೆ ತಿಳಿಯಲು ಸಾಧ್ಯವಿಲ್ಲ. ಆದುದರಿಂದ ದಾರಿದ್ರ್ಯದುಃಖಕ್ಕೆ ಸಿಲುಕಿ ಬಳಲುವ ಬಡವರ ಮೇಲೆ ಅವರಿಗೆ ಅನುಕಂಪವುಂಟಾಗಲು ಕಾರಣವಿಲ್ಲ. ಆದರೆ ಇಸ್ಲಾಮಿಕ ನಿಯಮ ಪ್ರಕಾರ ರಾಜ–ಪ್ರಜೆ, ಧನಿಕ–ದರಿದ್ರ ಎಂಬ ಭೇದಭಾವವಿಲ್ಲದೆ ಸಕಲರೂ ವ್ರತವನ್ನನುಷ್ಠಿಸಬೇಕಾದುದರಿಂದ ಎಲ್ಲರಿಗೂ ಹಸಿವಿನ ಕಠಿಣತೆಯನ್ನು ಅನುಭವಿಸಲು ಸಾಧ್ಯವಾಗುತ್ತದೆ. ಅದರ ಪರಿಣಾಮವಾಗಿ ಧನಿಕರಿಗೆ ದರಿದ್ರರ ಮೇಲೆ ಕರುಣೆಯುಂಟಾಗಿ, ಅವರಿಗೆ ಬೇಕಾದ ಸಹಾಯ ಸಹಕಾರಗಳನ್ನು ನೀಡಲು ಪ್ರೇರಿತರಾಗುತ್ತಾರೆ. ಹಾಗೆ ವ್ರತವು ಬಡಜನರ ಸಂರಕ್ಷಣೆಗೂ ಸಮುದಾಯ ಕ್ಷೇಮಕ್ಕೂ ಕಾರಣವಾಗುತ್ತದೆ. ಮನುಷ್ಯನು ಆಲಸಿಯೂ ಸುಖಲೋಲುಪನೂ ಆಗಿರಲಿಕ್ಕೆ ಇಸ್ಲಾಂ ಸುತರಾಂ ಸಮ್ಮತಿಸುವುದಿಲ್ಲ. ತದ್ವಿರುದ್ಧವಾಗಿ ಅವನು ಕ್ಲೇಶಗಳನ್ನು ಅನುಭವಿಸಲು ಪ್ರಾಪ್ತನೂ ಶ್ರಮಶೀಲನೂ ಆಗಿರಬೇಕೆಂದು ಇಸ್ಲಾಂ ಉಪದೇಶಿಸುತ್ತದೆ. ವ್ರತದಿಂದ ಈ ಉದ್ದೇಶವು ಸಾಧಿಸಲ್ಪಡುತ್ತದೆ. ಒಂದು ಸಮುದಾಯದ ಸರ್ವರೂ ಶ್ರಮಶಾಲಿಗಳೂ ಸಹನಾ ಶಕ್ತಿಯುಳ್ಳವರೂ ಆಗಿದ್ದರೆ. ಅದು ಸಂಕಷ್ಟಗಳನ್ನು ಎದುರಿಸಲಿಕ್ಕೂ ಅಭಿವೃದ್ಧಿಯನ್ನು ಪಡೆಯಲಿಕ್ಕೂ ಶಕ್ತವಾಗುತ್ತದೆ. ರಮ್ಜಾನ್ ಚಾಂದ್ರಮಾಸವಾದುದರಿಂದ ಕೆಲವೊಮ್ಮೆ ಅದು ಅತೀ ಶೀತಕಾಲದಲ್ಲಿಯೂ ಕೆಲವೊಮ್ಮೆ ಅತೀ ಉಷ್ಣಕಾಲದಲ್ಲಿಯೂ ಬರುತ್ತದೆ. ಋತುಭೇದದಿಂದಾಗಿ ಒಂದು ಕಾಲದಲ್ಲಿ ಇಲ್ಲದ ಕಷ್ಟಕ್ಲೇಶಗಳನ್ನು ಇನ್ನೊಂದು ಕಾಲದಲ್ಲಿ ವ್ರತಾನುಷ್ಠಾನಿಯು ಅನುಭವಿಸಬೇಕಾಗುತ್ತದೆ. ಹೀಗೆ ಅವನು ವರ್ಷದ ಎಲ್ಲಾ ಋತುಗಳಲ್ಲಿ ಬರುವ ಪ್ರತಿಕೂಲಗಳನ್ನೂ ಕಷ್ಟಕ್ಲೇಶಗಳನ್ನೂ ಸಹಿಸಲು ತರಬೇತಿಯನ್ನು ಪಡೆಯುವನು.

ಮನುಷ್ಯನು ಇಂದ್ರಿಯೇಚ್ಛೆಗೆ ಅಧೀನನಾಗುವುದು ಸಹಜ. ಲೌಕಿಕಾಸಕ್ತಿಯಲ್ಲಿ ಮುಳುಗಿದವನಿಗೆ ಅದರಿಂದ ಮೇಲೇಳುವುದು ಅಷ್ಟು ಸುಲಭವಲ್ಲ. ಆದರೆ ಇಚ್ಛಾನಿರೋಧವನ್ನು ಅಭ್ಯಸಿಸಿದ ವ್ರತಾನುಷ್ಠಾನಿಗೆ ಐಹಿಕೇಚ್ಛೆಗಳನ್ನು ನಿಯಂತ್ರಿಸಲಿಕ್ಕೂ ದುಷ್ಪ್ರವೃತ್ತಿಯ ಕಡೆಗೆ ಚಲಿಸುವ ಮನಸ್ಸನ್ನೂ ಹಿಡಿದು ನಿಲ್ಲಿಸಲಿಕ್ಕೂ ಸಾಧ್ಯವಾಗಿ ಪಾಪಕರ್ಮಗಳಿಂದ ದೂರವಾಗುವನು.

ಲೌಕಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯಿಲ್ಲದ ವ್ರತಾನುಷ್ಠಾನಿ ಹಗಲು ಹೊತ್ತಿನಲ್ಲಿಡೀ ದೇವರ ಧ್ಯಾನದಲ್ಲಿಯೂ ಮತ್ತಿತರ ಸತ್ಕರ್ಮಗಳಲ್ಲಿಯೂ, ಹಾಗೆಯೇ ರಾತ್ರಿ ಹೊತ್ತಿನಲ್ಲಿ ಹೆಚ್ಚು ನಿದ್ರಿಸದೆ ಪ್ರಾರ್ಥನೆಗಳಲ್ಲಿಯೂ ಮಗ್ನನಾಗುತ್ತಾನೆ. ಅದರ ಪರಿಣಾಮವಾಗಿ ಆತ್ಮಶುದ್ಧಿಯನ್ನು ಪಡೆದ ಅವನಿಗೆ ಕ್ರಮೇಣ ಆತ್ಮಪುರೋಗತಿಯು ಲಭಿಸುವುದು.

ವ್ರತವನ್ನು ಆಚರಿಸುವುದರಿಂದಾಗಿ ಮನುಷ್ಯರು ಪರಮಾತ್ಮನೊಡನೆ ಕೃತಜ್ಞತೆಯುಳ್ಳವರಾಗುತ್ತಾರೆ. ಆಯುರಾರೋಗ್ಯದಿಂದ ಇರುವವನಿಗೆ ಆರೋಗ್ಯದ ಮಹತ್ವವನ್ನೂ ದೃಷ್ಟಿಸರಿಯುಳ್ಳವನಿಗೆ ಕಣ್ಣಿನ ಮಹತ್ವವನ್ನೂ ಅವು ನಷ್ಟವಾದಾಗ ಮನವರಿಕೆಯಾಗುವಷ್ಟು ಬೇರೆ ಯಾವ ಸಂದರ್ಭದಲ್ಲೂ ತಿಳಿಯಲು ಸಾಧ್ಯವಿಲ್ಲವಷ್ಟೆ? ಹಾಗೆಯೇ ಮನುಷ್ಯನ ಜೀವಿತಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ವ್ರತವನ್ನಾಚರಿಸುವವನು ವ್ರತಕಾಲದಲ್ಲಿ ತ್ಯಜಿಸಿದಾಗ ಅವನಿಗೆ ಅವುಗಳ ಮಹತ್ವವೇನೆಂಬುದು ಬಹಳ ವ್ಯಕ್ತವಾಗಿ ಅರಿವಾಗುತ್ತದೆ. ಆಗ ಅವನು ಆ ಸರ್ವದಾತನಾದ ಪರಿಪಾಲಕನಿಗೆ ಕೃತಜ್ಞತೆಯನ್ನು ಸೂಚಿಸುತ್ತಾನೆ.

ಹೀಗೆ ಪರಮಾತ್ಮನ ಪ್ರೀತಿಯನ್ನು ಗಳಿಸುವ ಉದ್ದೇಶದಿಂದ ವರ್ಷದಲ್ಲಿ ಒಂದು ತಿಂಗಳು ಎಡೆಬಿಡದೆ ಹಗಲು ಹೊತ್ತಿನಲ್ಲಿ ವ್ರತವನ್ನಾಚರಿಸಿ ಇಚ್ಛಾ ನಿಯಂತ್ರಣವನ್ನು ಮಾಡುತ್ತಿದ್ದರೆ ಈ ಸ್ವಭಾವವು ಒಂದು ಸ್ಥಿರಗುಣವಾಗಿ ಮಾರ್ಪಟ್ಟು ದೈವವಿರೋಧವಾದ ಏನನ್ನೂ ಆಶಿಸದಂತೆಯೂ ಪಡೆಯದಂತೆಯೂ ಪ್ರವರ್ತಿಸದಂತೆಯೂ ತಡೆಯುವ ಆತ್ಮಶಕ್ತಿಯು ಲಭಿಸಿ ಸಮಾಧಾನವೂ ಸ್ಥಿರತೆಯೂ ಅವನಲ್ಲಿ ಸ್ಥಾಯಿಯಾಗಿ ವಿರಾಜಿಸುವುವು.

———

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ನಿಮ್ಮ ಕರ್ಮಗಳನ್ನು ತೀರ್ಮಾನಿಸುವುದು ನಿಮ್ಮ ಇಂಗಿತಗಳಿಂದಾಗಿವೆ.

2. ಓರ್ವನು ಮಾತಿನಲ್ಲೂ ಪ್ರವೃತ್ತಿಯಲ್ಲೂ ವಿಚಾರದಲ್ಲೂ ಸತ್ಯವಂತನಾಗಿದ್ದರೆ ಮಾತ್ರವೇ ಅವನು ಯಥಾರ್ಥ ಸತ್ಯವಂತನಾಗುತ್ತಾನೆ.

3. ನೀನು ನಿನ್ನ ಸೃಷ್ಟಿಕರ್ತನನ್ನು ಪ್ರೀತಿಸುತ್ತೀಯಾ? ಹಾಗಿದ್ದರೆ ನೀನು ಮೊದಲಿಗೆ ನಿನ್ನ ಸಮ ಸೃಷ್ಟಿಗಳನ್ನು ಪ್ರೀತಿಸು.

4. ಮನುಷ್ಯ ಜಾತಿಯ ಮೇಲೆ ಕರುಣೆಯಿಲ್ಲದವನೊಡನೆ ಪರಮಾತ್ಮನಿಗೂ ಕರುಣೆಯಿಲ್ಲ. ಸತ್ಯವೂ ಶುದ್ಧವೂ ಕರುಣೆಯೂ ಕೂಡಿದ ಹೃದಯವಿರುವವರು ಆ ಸರ್ವಾನಂದಪ್ರದವಾದ ಸ್ವರ್ಗವನ್ನು ಪ್ರವೇಶಿಸುವರು. ದೈವಸೃಷ್ಟಿಗಳೊಡನೆಯೂ ತನ್ನ ಸ್ವಂತ ಮಕ್ಕಳೊಡನೆಯೂ ಕರುಣೆಯಿಲ್ಲದವನ ಮೇಲೆ ಪರಮಾತ್ಮನೂ ಕರುಣೆ ತೋರಿಸಲಾರನು.

5. ವಿಧವೆಯರನ್ನು ಸಂರಕ್ಷಿಸಿರಿ; ನಿಸ್ಸಹಾಯಕರಿಗೆ ಸಹಾಯ ಮಾಡಿರಿ.

6. ದಾನಧರ್ಮಗಳಲ್ಲಿ ಒಂದು ಅತಿಥಿ ಸತ್ಕಾರವಾಗಿದೆ.

7. ಸಣ್ಣ ಮಕ್ಕಳನ್ನು ವಾತ್ಸಲ್ಯದಿಂದ ನೋಡದವನು ಮತ್ತು ಹಿರಿಯರನ್ನು ಬಹುಮಾನಿಸದವನು ನಮ್ಮ ಪೈಕಿಯವನಲ್ಲ.

8. ದಣಿದವನನ್ನು ಉಪಚರಿಸುವುದು ಮತ್ತು ದು:ಖಿತನ ದು:ಖವನ್ನು ನಿವಾರಿಸುವುದು ತಕ್ಕ ಪ್ರತಿಫಲವುಳ್ಳದ್ದಾಗಿವೆ.

9. ಅಗತ್ಯ ಬಂದಾಗ ಸಹಜೀವಿಗಳಿಗೆ ನೆರವಾಗುವವನಿಗೂ ಆಕ್ರಮಿಸಲ್ಪಟ್ಟವರಿಗೆ ಸಹಾಯ ಮಾಡುವವನಿಗೂ ದುರ್ಘಟ ಕಾಲದಲ್ಲಿ ಪರಮಾತ್ಮನು ಸಹಾಯ ಮಾಡುವನು.

10. ಪರಮಾತ್ಮನ ಅತ್ಯಂತ ಪ್ರೀತಿಗೆ ಪಾತ್ರನಾದವನು ಯಾರು? ಅವನ ಸೃಷ್ಟಿಗಳಿಗೆ ಅತೀ ಹೆಚ್ಚು ಗುಣವನ್ನುಂಟುಮಾಡುವವನು.

11. ತನ್ನ ಸಹೋದರನ ಆವಶ್ಯಕತೆಗಳನ್ನು ಪೂರ್ತಿಗೊಳಿಸಲು ಪ್ರಯತ್ನಿಸುವವನ ಪಾಪಗಳನ್ನು ಪರಮಾತ್ಮನು ಕ್ಷಮಿಸುವನು.

12. ಮನುಷ್ಯರಲ್ಲಿ ಅತ್ಯಂತ ಒಳ್ಳೆಯವನು ಮನುಷ್ಯ ವರ್ಗಕ್ಕೆ ಒಳಿತನ್ನುಂಟು ಮಾಡುವವನಾಗಿದ್ದಾನೆ.

13. ಪರಮಾತ್ಮನ ಕುಟುಂಬ ಅವನ ಸೃಷ್ಟಿಜಾಲವಾಗಿದೆ; ಆದುದರಿಂದ ಅವನ ಸೃಷ್ಟಿಗಳಿಗೆ ಸಾಧ್ಯವಿದ್ದಷ್ಟು ಗುಣವನ್ನುಂಟುಮಾಡಲು ಪ್ರಯತ್ನಿಸುವವನು ಪರಮಾತ್ಮನಿಗೆ ಅತ್ಯಂತ ಪ್ರೀತಿಯುಳ್ಳವನಾಗಿದ್ದಾನೆ.

14. ಅಗತ್ಯವಿದ್ದವರಿಗೆ ಒಳಿತನ್ನುಂಟು ಮಾಡುವವನಿಗೆ ಪರಮಾತ್ಮನು ಈ ಲೋಕದಲ್ಲೂ ಪರಲೋಕದಲ್ಲೂ ಒಳಿತನ್ನುಂಟುಮಾಡುವನು.

15. ಬಡಬಗ್ಗರ ಮತ್ತು ದರಿದ್ರರ ಸಂತೃಪ್ತಿಯಲ್ಲಿ ನನ್ನ ಸಂತೃಪ್ತಿಯನ್ನು ಅರಸಿರಿ.

16. ಒಂದು ಖರ್ಜೂರದ ಅರ್ಧವಾಗಿದ್ದರೂ ದಾನಧರ್ಮ ದ್ವಾರಾ ದೈವಕೋಪವನ್ನು ತಪ್ಪಿಸಿರಿ.

17. ಎಲೈ ಆಯಿಷಾ! ಒಂದು ಖರ್ಜೂರದ ಅರ್ಧವಾಗಿದ್ದರೂ ಏನನ್ನಾದರೂ ಕೊಡದೆ ಬಡವರನ್ನು ಒಮ್ಮೆಯೂ ಭವತಿ ಹಿಂತಿರುಗಿಸಬಾರದು.

# ಇಸ್ಲಾಮ್ ಮತ್ತು ಸ್ತ್ರೀಯರ ಹಕ್ಕುಗಳು

— ಲೇಖಕ: ಸಿದ್ದೀಖ್ ಅಶ್ರಫಲಿ H. A. —

1975ರ ವರ್ಷ ಪ್ರಪಂಚದಲ್ಲೆಲ್ಲಾ ಮಹಿಳಾ ವರ್ಷವೆಂದು ಆಚರಿಸಲಾಗುತ್ತಿದೆ. ಪ್ರಪಂಚದ ವಿವಿಧ ದೇಶಗಳಲ್ಲಿ ಇದನ್ನು ಬೇರೆ ಬೇರೆ ರೂಪದಲ್ಲಿ ಆಚರಿಸಲಾಗುತ್ತಿದೆ. ಕೆಲವೆಡೆ ಹೆಂಗಸರಿಗೆ ಬೇರೆಯೇ ಬ್ಯಾಂಕ್ ಸ್ಥಾಪಿತವಾಗುತ್ತಿವೆ. ಕೆಲವೆಡೆ ಮಹಿಳಾ ಸಹಕಾರ ಸಂಘಗಳು ಸ್ಥಾಪಿತವಾದುವು. ಕೆಲವೆಡೆ ಹೆಂಗಸರಿಗೆ ಪುರುಷನಿಗೆ ಸಮಾನವಾದ ಹಕ್ಕು ಕೊಡಲು ಘೋಷಣೆಗಳು ಎದ್ದುವು. ಆರ್ಥಿಕ ಅಭಿವೃದ್ಧಿಗೆ ಹೆಂಗಸರೂ ಪುರುಷನ ಜೊತೆ ಕೆಲಸ ಮಾಡಬೇಕೆಂಬ ಬೇಡಿಕೆಗಳು ಬಂದುವು. ಹೆಂಗಸರ ವಿದ್ಯಾಭ್ಯಾಸಕ್ಕೆ ಪುರುಷರ ವಿದ್ಯಾಭ್ಯಾಸಕ್ಕಿಂತ ಕಡಿಮೆ ಗಮನ ಕೊಡುವ ಕಾರಣ ಹೆಂಗಸರ ವಿದ್ಯಾಭ್ಯಾಸಕ್ಕೆ ಹೆಚ್ಚು ಶ್ರದ್ಧೆ ಕೊಡಬೇಕೆಂಬ ಬೇಡಿಕೆಗಳು ಮುಂದಿರಿಸಲ್ಪಡುತ್ತಿವೆ. ಈ ವಿಷಯದಲ್ಲಿ ಲೇಖನಗಳು ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿದ್ದು ಕೆಲವರು ಹೆಂಗಸರಿಗೆ ಮೊದಲೇ ಹೆಚ್ಚು ಹಕ್ಕುಗಳು ದೊರೆತಿರುವ ಕಾರಣ ಪುನ: ಅವರಿಗೆ ಹೆಚ್ಚಿನ ಹಕ್ಕುಗಳನ್ನಿತ್ತರೆ ಮನುಷ್ಯ ವಂಶಕ್ಕೆ ಹಾನಿಕರವೆಂಬ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ಈ ವಿಷಯದಲ್ಲಿ ಮುಖ್ಯವಾದ ಸಂಗತಿಯೇನೆಂದರೆ ಹೆಂಗಸರ ಹಕ್ಕುಗಳ ಕುರಿತು ಮಾತಾಡುವವರ ಬಳಿಯಲ್ಲಿಯೂ ಇದರ ಕುರಿತು ನಿಶ್ಚಿತ ಮತ್ತು ಸರಿಯಾದ ಕಾರ್ಯಕ್ರಮವಿಲ್ಲ. ಹೆಂಗಸರಿಗೆ ಸಹ ತಮಗೆ ಯಾವ ಹಕ್ಕುಗಳನ್ನು ಆವಶ್ಯಪಡಬೇಕೆಂಬ ಪ್ರಜ್ಞೆ ಇರುವ ಹಾಗೆ ಕಾಣುವುದಿಲ್ಲ. ಅವರೊಳಗೆಯೇ ಹಲವಾರು ಭಿನ್ನಾಭಿಪ್ರಾಯಗಳಿವೆ. ಇತ್ತೀಚೆಗೆ ನಡೆದ ಒಂದು ಅಂತಾರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಅವರೊಳಗೆ ಕೈಗೆ ಕೈ ಹತ್ತಿಕೊಂಡಿತು.

ಹಕ್ಕುಗಳ ಕುರಿತು ಚರ್ಚಿಸುವ ಮೊದಲು ಹೆಂಗಸರ ಸರಿಯಾದ ಸ್ಥಾನದ ನಿರ್ಣಯ ಬಹಳ ಅತ್ಯಾವಶ್ಯಕವಾಗಿದೆ. ಹೆಂಗಸರು ಮಗಳಾಗಿ, ತಾಯಿಯಾಗಿ, ಪತ್ನಿಯಾಗಿ ವಿವಿಧ ಸ್ಥಾನಗಳನ್ನು ಸಮಾಜದಲ್ಲಿ ಪಡೆಯುತ್ತಾಳೆ. ಈ ಸ್ಥಾನಕ್ಕೆ ಅನುಸರಿಸಿ ಅವಳ ಹಕ್ಕುಗಳು ವಿವಿಧವಾಗುತ್ತವೆ. ಈ ಸಂಗತಿ ನಾವು ಗಮನದಲ್ಲಿಡದಿದ್ದರೆ ನಾವು ಅತಿರೇಕವಾಗಿ ಅಥವಾ ಬಹಳ ಮಿತವಾಗಿ ಹೆಂಗಸರ ಹಕ್ಕುಗಳ ಕಾಪಾಡುವಿಕೆಯಲ್ಲಿ ಸರಿಯಾದ ವಿಧಿಯನ್ನು ಕಲ್ಪಿಸುವುದರಲ್ಲಿ ಅಸಮರ್ಥರಾಗುತ್ತೇವೆ.

ಸ್ತ್ರೀಯು ಪ್ರಕೃತಿಗನುಗುಣವಾಗಿ ಬಲಹೀನೆ ಎಂಬುದು ಅಂಗೀಕರಿಸಲ್ಪಟ್ಟ ಒಂದು ಸಂಗತಿಯಾಗಿದೆ. ಈ ವಿಷಯದಲ್ಲಿ ಹೆಂಗಸರನ್ನು "ಅಬಲೆ" ಎಂಬ ಶಬ್ದವೇ ವರ್ಣಿಸುತ್ತಿದೆ. ಇದೇ ಕಾರಣದಿಂದ ಆಕೆಯ ಹಕ್ಕುಗಳು ಅಪಹರಿಸಲ್ಪಡುತ್ತಿವೆ. ಈ ಕಾರಣದಿಂದಲೇ ಹೆಂಗಸರ ಹಕ್ಕುಗಳ ಸಂರಕ್ಷಣೆಯ ಪ್ರಶ್ನೆ ಉದ್ಭವಿಸುತ್ತದೆ.

ಹೆಂಗಸರ ಹಕ್ಕುಗಳ ಪ್ರಶ್ನೆಯ ಸಂದರ್ಭದಲ್ಲಿ ಹೆಂಗಸರ ಪ್ರಕೃತಿದತ್ತವಾದ ಕೆಲವು ನ್ಯೂನತೆಗಳನ್ನು ಪರಿಗಣಿಸಬೇಕಾಗುತ್ತದೆ. ಇವುಗಳನ್ನು ಪರಿಗಣಿಸದೆ ಸ್ತ್ರೀ ಪುರುಷರು ಸಮಾನರೆಂಬ ಸುಳ್ಳು ಘೋಷಣೆ ಹೊರಡಿಸಿದರೆ ಅದು ಹೆಂಗಸರ ಹಕ್ಕನ್ನು ಕಾಪಾಡುವಂತಹದ್ದಲ್ಲ ಅದರಿಂದ ಹೆಂಗಸರ ಹಕ್ಕುಗಳಿಗೆ ಹಾನಿ ಬರುವುದು.

ಹೆಂಗಸರ ಹಕ್ಕುಗಳ ಕುರಿತು ಇಸ್ಲಾಮ್ ಕಲಿಸಿರುವ ಪಾಠಗಳ ಕುರಿತು ನಾನು ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಅವುಗಳ ಸಂರಕ್ಷಣೆಗಾಗಿ ಇಸ್ಲಾಂ ಮಾಡಿದ ಏರ್ಪಾಡನ್ನು ವಿವರಿಸುವೆನು. ಇಸ್ಲಾಮ್ ಸ್ತ್ರೀಯರಿಗೆ ಅವರ ಹಕ್ಕುಗಳನ್ನು ಕೊಡಬೇಕೆಂದು ಪುರುಷನಿಗೆ ಒತ್ತಾಯಿಸಿ ಬಲಹೀನರಾದ ಸ್ತ್ರೀಯರು ತಮ್ಮ ಹಕ್ಕಿಗಾಗಿ ಬಲಿಷ್ಟರಾದ ಪುರುಷರೊಂದಿಗೆ ಹೋರಾಡುವುದನ್ನು ತಪ್ಪಿಸಿ, ಯಥಾರ್ಥ ಮುಸ್ಲಿಮನ ಕರ್ತವ್ಯ ಬಲಹೀನರ ಹಕ್ಕುಗಳ ಕಾಪಾಡುವಿಕೆ ಎಂಬುದನ್ನು ವ್ಯಕ್ತಗೊಳಿಸಿ ಪ್ರಪಂಚದಲ್ಲಿ ಸುಖ-ಸಂತೋಷ ನೆಲೆಗೊಳ್ಳುವಂತೆ ಏರ್ಪಾಡು ಮಾಡಿದೆ.

ಇದೇ ತತ್ವವನ್ನನುಸರಿಸಿ ಹೆಂಗಸರ ಕುರಿತು ಇಸ್ಲಾಮ್ ಉಪದೇಶಿಸಿರುವುದೇನೆಂದರೆ "ಅರ್ರಿಜಾಲು ಖವ್ವಾಮೂನ ಅಲನ್ನಿಸಾ'' (ಪವಿತ್ರ ಖುರ್‌ಆನ್: ಸೂರತ್‌ನಿಸಾ: 34). ಎಂದರೆ ಪುರುಷರು ಹೆಂಗಸರ ಹಕ್ಕುಗಳ ಪಾಲಕರು.

ಗಂಡಸರು ತಮ್ಮ ಸ್ಥಾನವನ್ನು ಗುರುತಿಸಿದರೆ ಒಮ್ಮೆಯೂ ಹೆಂಗಸರ ಮೇಲೆ ದಬ್ಬಾಳಿಕೆ ನಡೆಯದು. ಈಗ ಹೆಂಗಸರ ಹಕ್ಕುಗಳನ್ನು ಅಪಹರಿಸಲಾಗುತ್ತಿದೆ ಎಂಬ ಪ್ರಶ್ನೆಗಿಂತ ಗಂಡಸರು ತಮ್ಮ ಸ್ಥಾನವನ್ನು ಪರಿಗಣಿಸಿ ಹೆಂಗಸರ ಹಕ್ಕುಗಳನ್ನು ಕಾಪಾಡುವುದಿಲ್ಲವೇಕೆಂಬ ಪ್ರಶ್ನೆ ಗಮನಾರ್ಹವಾಗಿದೆ.

ಇಸ್ಲಾಂ ಪೂರ್ಣವಾಗಿ ಹೆಂಗಸರ ಹಕ್ಕುಗಳನ್ನು ಕಾಪಾಡಿದೆ. ಅವರಿಗೆ, ಮತೀಯವಾಗಿ ಮತ್ತು ಆಧ್ಯಾತ್ಮಿಕವಾಗಿ ಪುರುಷರಿಗೆ ಸಮಾನರೆಂದು ಘೋಷಿಸಿ, ಸಾಮಾಜಿಕವಾಗಿ ಪ್ರತ್ಯೇಕ ಸ್ಥಾನವನ್ನು ದಯಪಾಲಿಸಿದೆ. ಆಕೆಗೆ ಸ್ವಯಮಧಿಕಾರವಿರುವ ಸಂಗತಿಗಳನ್ನು ವ್ಯಕ್ತಿಗೊಳಿಸಿ ಆಕೆಯ ವಿವಿಧ ರೂಪದಲ್ಲಿ ಆಕೆಗಿರುವ ವಿವಿಧ ಹಕ್ಕುಗಳನ್ನು ಪವಿತ್ರ ಖುರ್–ಆನಿನಲ್ಲಿ ವಿವರಿಸಿ ಅದು ಸ್ಥಿರವಾಗಿ ನೆಲೆಗೊಳ್ಳುವಂತೆ ಮಾಡಿದೆ.

ಪವಿತ್ರ ಖುರ್-ಆನ್ ಬುನಾದಿಯಾಗಿ ಸ್ತ್ರೀ-ಪುರುಷರ ಸಮಾನತೆಯನ್ನು ಘೋಷಿಸಿ ಮನುಷ್ಯ ವರ್ಗದ ಅಭಿವೃದ್ಧಿಗೆ ಪುರುಷರ ಮತ್ತು ಸ್ತ್ರೀಯರ ಪರಸ್ಪರ ಸಹಾಯದ ಆವಶ್ಯಕತೆಗಳನ್ನು ಹೇಳಿದೆ. ಪವಿತ್ರ ಖುರ್ ಆನಿನಲ್ಲಿ ಈ ರೀತಿ ಇದೆ:

''ಯಾ ಅಯ್ಯುಹನ್ನಾಸುತ್ತಖೂ ರಬ್ಬಕುಮು ಲ್ಲದೀ ಖಲಖಕುಮ್ ಮಿನ್ ನಫ್ಸಿನ್ ವಾಹಿದ ವ ಖಲಖ ಮಿನ್‌ಹಾ ಝವುಜಹಾ (ಸೂರತ್ ನಿಸಾ:1)

"ಮಾನವರೇ ನೀವು ದೈವ ಭಯವುಳ್ಳವರಾಗಿರಿ. ಅತನು ನಿಮ್ಮನ್ನು ಒಂದು ಜೀವಿಯಿಂದ ಸೃಷ್ಟಿಸಿ, ಅದರಿಂದ ಅದರದೇ ಜಾತಿಯ ಜೋಡಿಯನ್ನು ಮಾಡಿದನು''

ಅಹ್ಮದಿಯಾ ಸಂಘಟನೆಯ ಎರಡನೆಯ ಖಲೀಫರು ತಮ್ಮ ಗ್ರಂಥ "ಪಸಾಯಿಲುಲ್‌ಖುರ್-ಆನ್''ನಲ್ಲಿ ಈ ವಚನವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಿರುವರು:

''ಈ ವಚನದಿಂದ ವ್ಯಕ್ತವಾಗುವುದೇನೆಂದರೆ ದೇವರು ಮಾನವತೆಯನ್ನು ಒಂದೇ ಮೂಲ ವಸ್ತುವನ್ನಾಗಿ ಪರಿಗಣಿಸಿ ಹೇಳಿರುವನು. ಮಾನವತೆ ಪುರುಷ ಮತ್ತು ಸ್ತ್ರೀಯರ ಐಕ್ಯತೆಯಿಂದ ಉಂಟಾಗುತ್ತದೆ. ಅದರ ಅರ್ಧಭಾಗ ಪುರುಷ ಮತ್ತು ಅರ್ಧಭಾಗ ಸ್ತ್ರೀ ಎಂದು ಹೇಳಬಹುದು. ಆದರೆ ಇವೆರಡು ಸೇರಿದರೆ ಮಾತ್ರ ಪರಿಪೂರ್ಣ ಮಾನವತೆ ಉಂಟಾಗುವುದು.

ಮಾನವತೆ ಪೂರ್ಣವಾಗಬೇಕಾದರೆ ಸ್ತ್ರೀ-ಪುರುಷರೆಂಬ ಅಂಶಗಳು ಒಂದಾಗಬೇಕು. ಇಲ್ಲದಿದ್ದರೆ ಮಾನವೀಯತೆ ಪೂರ್ಣವಾಗಲಾರದು. ಮಾನವತೆ ಪೂರ್ಣವಾಗದಿದ್ದರೆ ಮಾನವನು ಪರಿಪೂರ್ಣವಾಗಲಾರನು.'' (ಪಸಾಯಿಲುಲ್ ಖುರ್–ಆನ್ ಪುಟ 170)

ಮಾನವೀಯತೆ ಪರಿಪೂರ್ಣವಾಗಬೇಕಾದರೆ ಪುರುಷರು ಸ್ತ್ರೀಯರನ್ನು ಸಮಾನರಾಗಿ ಕಾಣಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ.

"ಹುನ್ನ ಲಿಬಾಸುಲ್ಲಕುಮ್ ವ ಅಂತುಮ್ ಲಿಬಾಸುಲ್ಲಹುನ್ನ'' (ಸೂರತ್ ಬಖರ: 188) ಎಂದರೆ "ಹೆಂಗಸರು ನಿಮಗೆ ಉಡುಗೆಯಾಗಿದ್ದಾರೆ, ಅವರಿಗೆ ನೀವು ಉಡುಗೆಯಾಗಿದ್ದೀರಿ.'' ಆದುದರಿಂದ ಶಾಂತಿ ಸಮಾಧಾನಕ್ಕಾಗಿ ಪರಸ್ಪರ ಸಹಕಾರಿಗಳಾಗಬೇಕಾಗಿದೆ.

ಯಾವ ರೀತಿ ಬಟ್ಟೆ ಮನುಷ್ಯರಿಗೆ ಸೌಂದರ್ಯ ಮತ್ತು ಗೌರವವನ್ನು ನೀಡುವುದೋ ಮತ್ತು ನಗ್ನತೆಯನ್ನು ಮುಚ್ಚುತ್ತದೆಯೋ ಇದೇ ರೀತಿ ಗಂಡು ಹೆಣ್ಣಿಗೂ ಹೆಣ್ಣು ಗಂಡಿಗೂ ಬಟ್ಟೆಯಾಗಿದೆ.

ಇಸ್ಲಾಮ್ ಹದಿನಾಲ್ಕು ನೂರು ವರ್ಷಗಳ ಮೊದಲೇ, ಮನುಷ್ಯನು ಅಭಿವೃದ್ಧಿ ಪಥದಲ್ಲಿ ಪ್ರವೇಶಿಸುವ ಮೊದಲೇ ಸ್ತ್ರೀಯರ ಹಕ್ಕುಗಳ ಸಂರಕ್ಷಣೆಗೆ ಮುಂದಾಗಿದೆ.

ಇಸ್ಲಾಮ್ ಲೋಕದಲ್ಲಿ ಬಂದಾಗ ಹೆಂಗಸರ ಹಕ್ಕುಗಳ ಕುರಿತು ಯಾರಿಗೂ ಶ್ರದ್ಧೆ ಇರಲಿಲ್ಲ. ಅವರನ್ನು ಹಲವು ವಿಧದಲ್ಲಿ ಹಿಂಸಿಸಲಾಗುತ್ತಿತ್ತು. ಪವಿತ್ರ ನಬಿಯವರು ಜನಿಸಿದ ಅರೇಬಿಯದಲ್ಲಿ ಸಹ ಹೆಂಗಸರ ಸ್ಥಿತಿ ಬಹಳ ಹಾಳಾಗಿದ್ದಿತು. ಹೆಂಗಸರ ಜೊತೆ ಮೃಗಗಳ ರೂಪದಲ್ಲಿ ವರ್ತಿಸಲಾಗುತ್ತಿತ್ತು. ಯಾರ ಮನೆಯಲ್ಲಾದರೂ ಹುಡುಗಿ ಜನಿಸಿದರೆ ಅದನ್ನು ನಾಚಿಕೆಯ ಕಾರಣವಾಗಿ ಪರಿಗಣಿಸಲಾಗುತ್ತಿತ್ತು. ಕೆಲವರು ಸ್ವಹಸ್ತದಿಂದ ಹುಡುಗಿಯರನ್ನು ಜೀವಂತ ದಫನ ಮಾಡುತ್ತಿದ್ದರು. ಗಂಡಸರು ಬೇಕಾದಷ್ಟು ಹೆಂಡಿರನ್ನು ಇಟ್ಟುಕೊಳ್ಳಬಹುದಿತ್ತು. ಇಷ್ಟ ಬಂದಾಗ ಬಿಡಬಹುದಿತ್ತು. ಹೆಂಗಸರನ್ನು ಕೇಳುವವರಿರಲಿಲ್ಲ. ಈ ವಿಷಮ ಅವಸ್ಥೆಯಲ್ಲಿ ಇಸ್ಲಾಮ್ ಬಂದು ಒಂದು ಕ್ರಾಂತಿ ಉಂಟು

ಮಾಡಿತು. ಅದು ತನ್ನ ಪಾಠಗಳ ಮೂಲಕ ಮಾತ್ರವಲ್ಲ ಕಾರ್ಯರೂಪದಲ್ಲಿ ಸಹ ಹೆಂಗಸರ ಹಕ್ಕುಗಳ ಸಂರಕ್ಷಣೆಗೆ ಒಂದು ಪ್ರತ್ಯೇಕ ಏರ್ಪಾಡು ಮಾಡಿತು ಮತ್ತು ಸಮಾಜದಲ್ಲಿ ಹೆಂಗಸರಿಗೆ ಮರ್ಯಾದೆಯ ಸ್ಥಾನವನ್ನು ದಯಪಾಲಿಸಿತು.

ಇಸ್ಲಾಮಿನ ಆಗಮನ ಹೆಂಗಸರ ಯಥಾರ್ಥ ಸ್ವಾತಂತ್ರ್ಯ ಮತ್ತು ಅವರ ಸ್ಥಾನ ಮಾಹಾತ್ಮೆ ಮತ್ತು ಅವರ ಶಕ್ತಿ ಸಾಮರ್ಥ್ಯಗಳ, ಆತ್ಮಿಕ ಮತ್ತು ಶಾರೀರಿಕ ಬೆಳವಣಿಗೆಗಳ ಪ್ರೇರಕವಾಯಿತು. ಮನುಷ್ಯರೆಂಬ ರೂಪದಲ್ಲಿ ಸ್ತ್ರೀ ಪುರುಷರು ಸಮಾನರಾಗಿದ್ದು ಇಬ್ಬರಿಗೂ ಸಮಾನ ಹಕ್ಕುಗಳು ಕೊಡಲ್ಪಟ್ಟುವು. ಯಾವ ಕರ್ಮಗಳನ್ನು ಮಾಡುವುದರಿಂದ ಪುರುಷನು ಶ್ರೇಷ್ಠ ಸ್ಥಾನ ಪಡೆಯಬಹುದೋ ಅದೇ ಕರ್ಮಗಳನ್ನು ಮಾಡುವುದರಿಂದ ಸ್ತ್ರೀಯು ಸಹ ಆ ಸ್ಥಾನ ಪಡೆಯಬಲ್ಲಳು. ಸ್ತ್ರೀಯರು ಅಬಲೆಯರಾದ ಕಾರಣ ಅವರಿಗೆ ಜವಾಬ್ದಾರಿಗಳ ಭಾರ ಕಮ್ಮಿಗೊಳಿಸಿ ರಿಯಾಯತಿಗಳು ಹೆಚ್ಚು ಕೊಡಲಾಗಿವೆ. ಉದಾಹರಣೆಗೆ ಒಂದು ಸಂಸಾರದ ಮನೆ ಖರ್ಚಿನ ಭಾರ ಇಸ್ಲಾಮ್ ಪುರುಷನ ಮೇಲೆ ಹೊರಿಸಿದೆ. ಇದರಿಂದಾಗಿ ಇಸ್ಲಾಮ್ ಸ್ತ್ರೀಯ ಸ್ಥಾನ ಅಥವಾ ದಾಂಪತ್ಯದಲ್ಲಿ ಸ್ತ್ರೀಯ ಮಹತ್ವ ಕಮ್ಮಿಮಾಡಿಲ್ಲ. ಆಕೆಯ ಪ್ರಕೃತಿಯನ್ನು ಪರಿಗಣಿಸಿ ಒಂದು ರಿಯಾಯತಿ ಕೊಡಲಾಗಿದೆ. ಇದೇ ಸಂದರ್ಭದಲ್ಲಿ ಮಕ್ಕಳ ಪರಿಪಾಲನೆಯ ಪ್ರಥಮ ಜವಾಬ್ದಾರಿ ಸ್ತ್ರೀಯ ಹೊಣೆಯನ್ನಾಗಿ ಮಾಡಲಾಗಿದೆ. ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿ ಸ್ತ್ರೀಯು ಸಮಾಜದ ಮತ್ತು ರಾಷ್ಟ್ರೀಯ ಜೀವನದಲ್ಲಿ ಒಂದು ಪ್ರಾಮುಖ್ಯ ಕರ್ತವ್ಯ ನಿರ್ವಹಿಸುತ್ತಾಳೆ. ಸ್ತ್ರೀಯ ಈ ಕಾರ್ಯವನ್ನು ಪ್ರಶಂಶಿಸಿ ಇಸ್ಲಾಮಿನ ಸ್ಥಾಪಕರು "ಸ್ವರ್ಗವು ತಾಯಿಯ ಪಾದದಡಿಯಲ್ಲಿದೆ'' ಎಂದು ಹೇಳಿರುವರು. ಮನುಷ್ಯರಿಗೆ ದೇವರ ತೃಪ್ತಿಯು ಸ್ವರ್ಗವು ಕರಹಸ್ತವಾಗುವುದಕ್ಕಿಂತ ಹೆಚ್ಚಿನ ಸಂತೃಪ್ತಿ ಏನಿದೆ? ಇದರಿಂದ ಮಾತೆಯ ಸೇವೆಯ ಕುರಿತು ಇಸ್ಲಾಮ್ ಪ್ರಬೋಧಿಸುವುದರೊಂದಿಗೆ ಸ್ತ್ರೀಯ ಶ್ರೇಷ್ಠ ಸ್ಥಾನವನ್ನು ಇಸ್ಲಾಮ್ ವ್ಯಕ್ತಗೊಳಿಸಿದೆ.

ಇಸ್ಲಾಮ್ ಸ್ತ್ರೀ ಪುರುಷರ ಇರುವಿಕೆ ಒಬ್ಬರಿನ್ನೊಬ್ಬರಿಗೆ ಅಗತ್ಯವೆಂದು ಪರಿಗಣಿಸಿದೆ. ಮನುಷ್ಯನ ಆಧ್ಯಾತ್ಮಿಕ ಮತ್ತು ಸ್ವಭಾವ ಸಂಬಂಧೀ ಜೀವನಗಳ ಪರಿಪೂರ್ಣತೆಗೆ ವೈವಾಹಿಕ ಜೀವನ ಅತ್ಯಾವಶ್ಯವೆಂದು ಪರಿಗಣಿಸಿದೆ. ಇಸ್ಲಾಮಿನ ಸ್ಥಾಪಕರು ಒಬ್ಬ ಮನುಷ್ಯನ ಯಥಾರ್ಥ ವಿಶ್ವಾಸದ ಅರ್ಧಾಂಶ ಆತನ ವಿವಾಹಕ್ಕೆ ಸಂಬಂಧಿಸಿದುದಾಗಿ ಹೇಳಿರುವರು. ಎಂದರೆ ಒಬ್ಬ ವ್ಯಕ್ತಿ ವಿವಾಹಿತನಾಗಿ ತನ್ನ ವಿಶ್ವಾಸವನ್ನು ಪೂರ್ಣಗೊಳಿಸುವ ಕಡೆಗೆ ಸಾಗುತ್ತಾನೆ ಎಂದು.

ಹೆಂಗಸರ ಹಕ್ಕುಗಳ ಸಂರಕ್ಷಣೆಗೆ ಇಸ್ಲಾಮಿನ ಸ್ಥಾಪಕರು ಬಹಳ ಒತ್ತಾಯಿಸಿರುವರು. ಅವರನ್ನು ತನ್ನ ಯಜಮಾನನೆಂದೂ ನಾಯಕರೆಂದೂ ಸ್ವೀಕರಿಸಿದವರು ಅವರ ಆಜ್ಞೆಗಳನ್ನು ಎಂದಿಗೂ ಉಲ್ಲಂಘಿಸರು. ಒಮ್ಮೆ ಅವರು ಹೀಗೆಂದರು:

"ಖೈರುಕುಮ್ ಖೈರುಕುಮ್ ಲೀ ಅಹ್ಲಿಹೀ''
"ನಿಮ್ಮಲ್ಲಿ ಶ್ರೇಷ್ಠರು ತಮ್ಮ ಸಹಧರ್ಮಿಣಿಯೊಂದಿಗೆ ಉತ್ತಮವಾಗಿ ವರ್ತಿಸುವವರು.''

ಒಮ್ಮೆ ಮಹಮ್ಮದ್ ಪೈಗಂಬರರು ಹೇಳಿದರು: "ದೇವರು ಯಾರಿಗಾದರೂ ಎರಡು ಹುಡುಗಿಯರನ್ನು ದಯಪಾಲಿಸಿದರೆ ಅವರನ್ನು ಸರಿಯಾಗಿ ಸಂರಕ್ಷಿಸಿ ಅವರ ವಿದ್ಯಾಭ್ಯಾಸದ ಏರ್ಪಾಡುಮಾಡಿ ದೊಡ್ಡದಾದ ನಂತರ ಮದುವೆಯ ಏರ್ಪಾಡು ಮಾಡಿದರೆ ಮತ್ತು ಅವರಿಬ್ಬರಲ್ಲಿ ಯಾವುದೇ ವ್ಯತ್ಯಾಸ ಮಾಡದೆ ಇದ್ದರೆ ಅಂತಹ ವ್ಯಕ್ತಿಗೆ ಸ್ವರ್ಗವು ಖಂಡಿತ.''

ಹುಡುಗಿಯರನ್ನು ಸಾಕಿ ಸಲಹುವುದರಲ್ಲಿ ಪೈಗಂಬರರ ಆದರ್ಶವು ಬಹಳ ಉತ್ತಮವಾಗಿದ್ದು ಯಾವಾಗಲೂ ಅವರ ಸುಖ ಸಂತೋಷದ ಕುರಿತು ಜಾಗರೂಕರಾಗಿರುತ್ತಿದ್ದರು. ಅವರ ಮಗಳು ಫಾತಿಮ ಅವರ ಸಮೀಪ ಬಂದಾಗ ಅವರೆದ್ದು ಆಕೆಯನ್ನು ಆದರದಿಂದ ಬರಮಾಡಿಕೊಂಡು ತಮ್ಮ ಸಮೀಪ ಕುಳ್ಳಿರಿಸಿ ಸುಖ ದುಃಖ ವಿಚಾರಿಸುತ್ತಿದ್ದರು. ಇದರಿಂದ ಅವರು ಸ್ತ್ರೀಯರನ್ನು ಬಹಳ ಆದರಿಸುತ್ತಿದ್ದರೆಂದೂ ಅವರಲ್ಲಿ ಸ್ವಯಂ ಕೀಳುಭಾವನೆ ತಲೆದೋರದಂತೆ ಮಾಡುತ್ತಿದ್ದರೆಂದೂ ವ್ಯಕ್ತವಾಗುತ್ತದೆ.

ಇದೇರೀತಿ ಒಮ್ಮೆ ಪವಿತ್ರ ನಬಿಯವರ ಬಳಿಗೆ ಅವರ ಬಾಲ್ಯ ಕಾಲದಲ್ಲಿ ಮೊಲೆ ಹಾಲುಕೊಟ್ಟ ಸ್ತ್ರೀ ಬಂದಾಗ ಅವರು ಎದ್ದು ಆದರಿಸಿ ತಮ್ಮ ಶಾಲನ್ನು ಹಾಸಿ ಕುಳ್ಳಿರಿಸಿದರು. ಪವಿತ್ರ ಖುರ್–ಆನ್ ಸ್ತ್ರೀಯರ ಹಕ್ಕುಗಳ ಕುರಿತು ವಿವರಿಸಿದ್ದು ಅವರ ಕುರಿತು "ನಿಸಾ'' ಎಂಬ ಒಂದು ಅಧ್ಯಾಯವೇ ಇದೆ. ಇದರಲ್ಲಿ ಸ್ತ್ರೀಯರ ಕುರಿತು ಆಜ್ಞೆಗಳು ಇವೆ.

ಪವಿತ್ರ ಖುರ್‌–ಆನ್ ಹಝ್ರತ್ ಮರಿಯಮ ರನ್ನು ಮತ್ತು ಫಿರ್‌ಔನರ ಪತ್ನಿ ಹಝ್ರತ್ ಆಸಿಯ ರನ್ನು ಯಥಾರ್ಥ ವಿಶ್ವಾಸಿಗಳಿಗೆ ಮಾದರಿಯನ್ನಾಗಿ ಮಾಡಿ ಅವರ ಆಧ್ಯಾತ್ಮಶ್ರೇಷ್ಠತೆಯನ್ನು ವ್ಯಕ್ತಗೊಳಿಸಿದೆ. (ಸೂರತ್ ತಹ್‌ರೀಮ್: 11, 12.)

ಸ್ತ್ರೀಯರ ವಿದ್ಯಾಭ್ಯಾಸದ ಕುರಿತು ಸಹ ಇಸ್ಲಾಂ ಬಹಳ ಒತ್ತಾಯಿಸಿದೆ. ವಿದ್ಯಾಭ್ಯಾಸ ಪಡೆಯುವುದು ಸ್ತ್ರೀಯ ಮೂಲಭೂತ ಹಕ್ಕನ್ನಾಗಿ ಮಾಡಿದೆ. ಇಸ್ಲಾಮಿನ ಆರಂಭ ಕಾಲದಲ್ಲಿ ಸಹ ಮುಸ್ಲಿಂ ಸ್ತ್ರೀಯರಿಗೆ ವಿದ್ಯಾಭ್ಯಾಸ ಗಳಿಸುವ ಬಹಳ ಅಭಿಲಾಷೆ ಇದ್ದಿತು. ಹೆಂಗಸರು ಸಾಧ್ಯವಿದ್ದಷ್ಟು ವಿದ್ವತ್ ಸಭೆಗಳಲ್ಲಿ ಭಾಗವಹಿಸುತ್ತಿದ್ದರು. ಕೆಲವು ಸ್ತ್ರೀಯರು ವಿದ್ಯೆಯಲ್ಲಿ ಎಷ್ಟು ಮುಂದುವರಿದಿದ್ದರೆಂದರೆ ಹಝ್ರತ್ ಆಯಿಷಾ ಮತ್ತು ಕೆಲವು ಸ್ತ್ರೀಯರಿಂದ ಜನರು ದೂರ ದೂರದಿಂದ ಬಂದು ವಿದ್ಯೆ ಕಲಿಯುತ್ತಿದ್ದರು.

ಒಮ್ಮೆ ಪವಿತ್ರ ನಬಿಯವರ ಬಳಿಗೆ ಒಬ್ಬ ಸ್ತ್ರೀ ಬಂದು ಪುರುಷರಿಗೆ ಏರ್ಪಡಿಸುವ ವಿದ್ವತ್ ಸಭೆಗಳಲ್ಲಿ ಸ್ತ್ರೀಯರಿಗೆ ಬರಲು ಮನೆ ಕೆಲಸದಿಂದ ಅನಾನುಕೂಲವಾಗುವುದರಿಂದ ಸ್ತ್ರೀಯರಿಗೆ ಪ್ರತ್ಯೇಕ ಏರ್ಪಾಡು ಮಾಡಬೇಕೆಂದು ಆವಶ್ಯಪಟ್ಟಾಗ ಪವಿತ್ರ ನಬಿಯವರು ಈ ಕೋರಿಕೆ ನೆರವೇರಿಸಿ ಪ್ರತ್ಯೇಕ ದಿನ ಮತ್ತು ಸಮಯ ನಿಶ್ಚಯಿಸಿದರು.

ಆರ್ಥಿಕವಾಗಿ ಇಸ್ಲಾಮ್ ಸ್ತ್ರೀಯರಿಗೆ ಪೂರ್ಣ ಅಧಿಕಾರ ಕೊಟ್ಟಿದೆ. ಆಕೆ ತನ್ನ ಸಂಪತ್ತನ್ನು ತನ್ನಿಷ್ಟದಂತೆ ಖರ್ಚು ಮಾಡಲು ಪತಿಯ ಅನುಮತಿಗೆ ಕಾಯಬೇಕಾಗಿಲ್ಲ.

ಇಸ್ಲಾಮ್ ಸ್ತ್ರೀಯರ ಸಮ್ಮತಿ ಇಲ್ಲದ ಮದುವೆಯನ್ನು ನಿಷಿದ್ಧಗೊಳಿಸಿದೆ. ಹೆತ್ತವರು ಆಕೆಯನ್ನು ಬಲಾತ್ಕಾರಿಸಲಾರರು. ಸ್ತ್ರೀ ಕನ್ಯೆಯಾಗಲೀ ವಿಧವೆಯಾಗಲೀ ಆಕೆಯ ಸಮ್ಮತಿ ಇಲ್ಲದೆ ವಿವಾಹ ಮಾಡಬಾರದೆಂದು ಮುಹಮ್ಮದ್ ಪೈಗಂಬರರು ಹೇಳಿರುವರು.

ಇದೇ ರೀತಿ ವಿಧವೆಯರ ಸಂರಕ್ಷಣೆಗೆ ಇಸ್ಲಾಂ ಏರ್ಪಾಡು ಮಾಡಿದೆ. ಪ್ರತ್ಯೇಕವಾಗಿ ಸಮುದಾಯದ ಸೇವೆಗಾಗಿ ಆತ್ಮಾರ್ಪಣೆ ಮಾಡಿದವರ ವಿಧವೆಯರಿಗಾಗಿ ಪ್ರತ್ಯೇಕ ಸಂರಕ್ಷಣೆ ಇದೆ. ಅವರ ಪುನರ್ ವಿವಾಹವನ್ನು ಪ್ರೋತ್ಸಾಹಿಸಲಾಗಿದೆ.

ಸ್ತ್ರೀಯರಿಗೆ ತಮ್ಮ ಮಾತಾಪಿತೃಗಳ ಆಸ್ತಿಯಲ್ಲಿ ಹಕ್ಕನ್ನೂ ಇಸ್ಲಾಮ್ ಕೊಟ್ಟಿದೆ. ಇದರ ಪೂರ್ಣ ವಿವರ ಪವಿತ್ರ ಖುರ್‌ಆನಿನ ಸೂರ "ನಿಸಾ"ದಲ್ಲಿ ಇದೆ. ಸ್ತ್ರೀಯರನ್ನು ಬಹಳ ಚೆನ್ನಾಗಿ ಕಾಣಬೇಕೆಂದು ಇಸ್ಲಾಂ ಉಪದೇಶಿಸಿದೆ. ಅವರ ನಾಜೂಕು ಸ್ವಭಾವವನ್ನು ಪರಿಗಣಿಸಿ ಅವರನ್ನು ಯಾವುದಕ್ಕಾದರೂ ಒತ್ತಾಯ ಮಾಡುವುದನ್ನು ನಿಷೇಧಿಸಲಾಗಿದೆ. ಪವಿತ್ರ ಖುರ್‌ಆನ್ ಹೀಗೆನ್ನುತ್ತದೆ: "ವ ಆಷಿರೂಹುನ್ನ ಬಿಲ್ ಮಅರೂಫಿ" ಅಂದರೆ "ನೀವು ಸ್ತ್ರೀಯರೊಡನೆ ಒಳ್ಳೆಯ ರೀತಿಯಲ್ಲಿ ವರ್ತಿಸಿರಿ." (ಸೂರ: ನಿಸಾ: ವಚನ 20)

ಈ ರೀತಿ ಇಸ್ಲಾಮ್ ಸ್ತ್ರೀಯರ ಹಕ್ಕುಗಳ ಸಂರಕ್ಷಣೆಗೆ ಕಾರ್ಯಕ್ರಮಗಳನ್ನು ನಿರೂಪಿಸಿದೆ. ಸ್ತ್ರೀಯರ ಸರಿಯಾದ ಭಾವನೆಗಳ ಅಭಿವೃದ್ಧಿಗೆ ಬೇಕಾದ ಕಾರ್ಯಗಳನ್ನು ನಿರೂಪಿಸಿದೆ. ಸ್ತ್ರೀಯ ಪವಿತ್ರ ಗುಣಗಳ ಅಭಿವೃದ್ಧಿಗೆ ಬೇಕಾದ ಸ್ವಾತಂತ್ರ್ಯಗಳನ್ನು ದಯಪಾಲಿಸಿದೆ.

ಒಂದು ಸಂಶಯದ ಕುರಿತು ಇಲ್ಲಿ ವಿವರಣೆ ಕೊಡಲು ನಾನಿಚ್ಛಿಸುತ್ತೇನೆ. ಇಸ್ಲಾಮ್ ಸ್ತ್ರೀ ಸ್ವಾತಂತ್ರ್ಯದ ಕುರಿತು ಮತ್ತು ಅವರಿಗೆ ಹಕ್ಕುಗಳನ್ನು ದಯಪಾಲಿಸುವ ಕುರಿತು ಇಷ್ಟು ಒತ್ತಾಯಿಸುವುದಾದರೆ ಈಗ ಮುಸ್ಲಿಮ್ ಸ್ತ್ರೀಯರ ಸ್ಥಿತಿ ಇಷ್ಟು ಹಾಳು ಏಕೆ? ಈಗ ಮುಸ್ಲಿಮ್ ಸ್ತ್ರೀಯರು ಸಮಾಜದಲ್ಲಿ ಇಷ್ಟು ಏಕೆ ಹಿಂದುಳಿದಿದ್ದಾರೆ? ಅವರ ವಿದ್ಯಾಭ್ಯಾಸ ಮತ್ತಿನ್ನಿತರ ಮಟ್ಟ ಇಷ್ಟು ಅಧಃಪತನ ಹೊಂದಲು ಕಾರಣವೇನು?

ಈ ಪ್ರಶ್ನೆಗಳ ಪರಿಹಾರ ಇನ್ನೊಂದು ಪ್ರಶ್ನೆಯ ಮುಖಾಂತರ ನೀಡಬಹುದು. ಇಂದಿನ ಮುಸ್ಲಿಮ್ ಸ್ತ್ರೀಯರ ವಿಷಯವಿರಲಿ ಮುಸ್ಲಿಮ್ ಗಂಡಸರ ಸ್ಥಿತಿ ಎಷ್ಟು ಉತ್ತಮವಿದೆ? ಇಂದಿನ ಮುಸ್ಲಿಮ್ ಸ್ತ್ರೀ ಪುರುಷರು ಇತರ ಜನಾಂಗಗಳಿಗೆ ಹೋಲಿಸಿದರೆ ಬಹಳ ಹಿಂದುಳಿದಿದ್ದಾರೆ. ಇದಕ್ಕೆ ಇಸ್ಲಾಮ್ ಜವಾಬ್ದಾರಿಯಾಗಿದೆಯೇ? ಎಂದಿಗೂ ಇಲ್ಲ. ಮುಸ್ಲಿಮರ ಅಧಃಪತನ ಅವರು ಇಸ್ಲಾಮಿನ ಉಪದೇಶಗಳನ್ನು ತೊರೆದುದಾಗಿದೆ.

ಇದೇರೀತಿ ಹೆಂಗಸರ ಅಧಃಪತನಕ್ಕೆ ಸಹ ಇಸ್ಲಾಮ್ ಕಾರಣವಲ್ಲ. ಇಸ್ಲಾಮ್ ಹೆಂಗಸರನ್ನು ಎಲ್ಲಾ ವಿಧದಲ್ಲಿ ಮುಂದೆ ಕೊಂಡುಹೋಗಲು ಪ್ರಯತ್ನಿಸಿತು. ಇಸ್ಲಾಮಿನ ಆರಂಭದ ಚರಿತ್ರೆ ಇದಕ್ಕೆ ಸಾಕ್ಷಿಯಾಗಿದೆ.

ಮುಸ್ಲಿಮರು ಇಸ್ಲಾಮಿನ ಉಪದೇಶಗಳ ಪ್ರಕಾರ ನಡೆಯುತ್ತಿರುವಾಗ ಮುಸ್ಲಿಮ್ ಸ್ತ್ರೀಯರು ಎಲ್ಲಾ ಕಾರ್ಯ ರಂಗಗಳಲ್ಲೂ ಮುಸ್ಲಿಮ್ ಗಂಡಸರಿಗೆ ಸಹಕಾರವನ್ನಿತ್ತು ಮಾಡಿದ ಕಾರ್ಯಗಳು ಇಂದಿಗೂ ಹೆಂಗಸರಿಗೆ ಪ್ರಪಂಚದಲ್ಲೆಲ್ಲಾ ಅನುಕರಣೀಯವಾಗಿದೆ. ವಿದ್ಯಾಭ್ಯಾಸ ರಂಗದಲ್ಲೂ ಸ್ತ್ರೀಯರ ಸ್ಥಾನ ಉನ್ನತವಾಗಿದ್ದಿತು. ಹಝ್‌ರತ್ ಆಯಿಷಾ (ರ.ಅ.)ರ ಕುರಿತು ಪವಿತ್ರಪೈಗಂಬರರ ವಚನ ಶ್ರದ್ಧಾರ್ಹವಾಗಿದೆ: "ಮತದ ಅರ್ಧಾಂಶ ಆಯಿಷಾ (ರ. ಅ.) ರವರಿಂದ ಕಲಿಯಿರಿ'' ಎಂಬ ನಬಿವಚನವನ್ನನುಸರಿಸಿ ದೊಡ್ಡ ದೊಡ್ಡ ಮನುಷ್ಯರು ಅವರಿಂದ ವಿದ್ಯೆ ಕಲಿತರು. ಅವರ ಅಭಿಪ್ರಾಯಕ್ಕೆ ಬುದ್ಧಿವಂತರಲ್ಲಿ ಪ್ರತ್ಯೇಕ ಪ್ರಭಾವವಿದ್ದಿತು. ಇಂದೂ ಸಹ ಮತದ ವಿಷಯದಲ್ಲಿ ಅವರ ಅಭಿಪ್ರಾಯಗಳು ಆದರಣೀಯವೂ ಸ್ವೀಕೃತವೂ ಆಗಿದೆ. ಒಂದು ಯುದ್ಧದಲ್ಲಿ ಅವರು ಸೈನ್ಯದ ಆಧಿಪತ್ಯ ವಹಿಸಿದ್ದರೆಂಬುದರಿಂದ ಅವರ ಮಹತ್ವವನ್ನು ತಿಳಿಯಬಹುದು.

ಇದೇ ರೀತಿ ಚರಿತ್ರೆಯಲ್ಲಿ ಇತರ ಮುಸ್ಲಿಮ್ ಸ್ತ್ರೀಯರ ಕುರಿತು ಅವರು ಯುದ್ಧಗಳಲ್ಲಿ ಭಾಗವಹಿಸಿ ಗಾಯಗೊಂಡವರ ಗಾಯಗಳಿಗೆ ಮದ್ದು ಹಚ್ಚುವ ಮತ್ತು ನೀರು ಕುಡಿಸುವ ಕಾರ್ಯ ಮಾಡುತ್ತಿದ್ದರೆಂದು ತಿಳಿದುಬರುತ್ತಿದೆ.

ಪವಿತ್ರ ನಬಿಯವರು ಕೆಲವು ಸಾರಿ ಪ್ರಧಾನ ಸಮಸ್ಯೆಗಳನ್ನು ಬಗೆಹರಿಸಲು ತಮ್ಮ ಪತ್ನಿಯರ ಸಲಹೆಗಳನ್ನು ಕೇಳುತ್ತಿದ್ದರಲ್ಲದೆ ಅವರ ಸಲಹೆಗಳ ಪ್ರಕಾರ ಹಲವಾರು ಸಾರಿ ಕಾರ್ಯ ನಿರೂಪಿಸುತ್ತಲೂ ಇದ್ದರು.

ಈಗ ಮುಸ್ಲಿಮ್ ಸ್ತ್ರೀಯರು ಅಡಿಗೆ ಮನೆಯ ಅಲಂಕಾರವಾಗಿದ್ದರೆ ಅದಕ್ಕೆ ಇಸ್ಲಾಮ್ ಹೊಣೆಯಲ್ಲ. ಇಸ್ಲಾಮ್ ಸ್ತ್ರೀಯರನ್ನು ಬಹಳ ಅಧಃಪತನ ಸ್ಥಿತಿಯಿಂದ ಮೇಲೆತ್ತಿ ಉನ್ನತ ಸ್ಥಾನದಲ್ಲಿರಿಸಲು ಪ್ರಯತ್ನಿಸಿದ್ದಿತು ಮತ್ತು ಅದರ ಫಲವಾಗಿ ಮುಸ್ಲಿಮ್ ಸ್ತ್ರೀಯರು ಚರಿತ್ರೆಯಲ್ಲಿ ಗಳಿಸಿದ ಸ್ಥಾನ ಈಗಿನ ಮುಂದುವರಿದ ಕಾಲದಲ್ಲಿ ಸಹ ಅನುಸರಣೀಯವಾಗಿದೆ.

ಈ ಲೇಖನವನ್ನು ಈ ಕೆಳಗಿನ ಸಾರಾಂಶದೊಂದಿಗೆ ಮುಕ್ತಾಯಗೊಳಿಸುತ್ತೇನೆ:

1. ಹೆಂಗಸರ ಹಕ್ಕುಗಳ ಸಂರಕ್ಷಣೆಯ ಕುರಿತು ಪ್ರಪಂಚ ಈಗ ಸ್ವರವನ್ನು ಮೇಲೆತ್ತಲು ನಿರ್ಬಂಧಿತವಾಗಿದೆ. ಇಸ್ಲಾಮ್ ಹದಿನಾಲ್ಕು ನೂರು ವರ್ಷ ಮೊದಲು ಇದಕ್ಕಾಗಿ ಬೇಕಾದ ಏರ್ಪಾಡು ಮಾಡಿದೆ.

2. ಲೋಕವು ಹೆಂಗಸರ ಹಕ್ಕುಗಳನ್ನು ನಿರ್ಣಯಿಸಲು ಪ್ರಯತ್ನಗಳನ್ನು ಈಗ ಕೈಗೊಳ್ಳುತ್ತಲಿವೆ. ಇಸ್ಲಾಮ್ ಅವರ ಹಕ್ಕುಗಳನ್ನು ನಿರ್ಣಯಿಸಿ ವಿವರಿಸಿದೆ.

3. ಇಸ್ಲಾಮ್ ಸ್ತ್ರೀಯರಿಗೆ ಅತಿಹೆಚ್ಚು ಹಕ್ಕುಗಳು ಅಥವಾ ಅತಿಕಮ್ಮಿ ಹಕ್ಕುಗಳನ್ನು ಕೊಡದೆ ಒಂದು ಮಧ್ಯಮ ಮಾರ್ಗವನ್ನು ಸ್ವೀಕರಿಸಿದೆ.

ಸರ್ವವನ್ನೂ ತಿಳಿದ ದೇವರು ಇಸ್ಲಾಮಿಗೆ ಅನುಗ್ರಹಿಸಿದ ಉಪದೇಶಗಳ ಪ್ರಕಾರವೇ ಲೋಕವು ಸ್ತ್ರೀಯರಿಗೆ ಕೊಡಬೇಕಾದ ಹಕ್ಕುಗಳನ್ನು ನಿರ್ಣಯಿಸುವುದೆಂದು ನಮ್ಮ ವಿಶ್ವಾಸವಾಗಿದೆ. ಅದು ಮಧ್ಯಮ ಮಾರ್ಗವಾಗಿದೆ.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

"ಮೈತ್ರಿ ಸಂದೇಶ"

"..... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು ......'' — ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ ......'' — ನವಭಾರತ

ಪುಟಗಳು: 48. ಬೆಲೆ: ಒಂದು ರೂಪಾಯಿ

—— : ಬರೆಯಿರಿ :——

The Editor,
'Yugarashmi' Kannada Quarterly
23/1008, Ansari Road,
Bunder, Mangalore–575001.

# ನಾನು ಮುಸ್ಲಿಂ; ನನ್ನ ಮತ ಇಸ್ಲಾಂ


## ಸರ್ ಮುಹಮ್ಮದ್ ಝಫರುಲ್ಲಾ ಖಾನ್

(ಮಾಜಿ ಅಧ್ಯಕ್ಷ, ಜಾಗತಿಕ ನ್ಯಾಯಾಲಯ, ಹೇಗ್)




ಲೇಖಕರು

'ಬಿಸ್‌ಮಿಲ್ಲಾಹಿರ್ರಹ್ಮಾನಿರ್ರಹೀಂ'– ನಮ್ಮ ಪೂರ್ಣವಾದ ಬೆಳವಣಿಗೆಗೆ ಆವಶ್ಯವಾದ ಸಕಲ ಸಹಾಯೋಪಾದಿಗಳನ್ನು ಸೃಷ್ಟಿಸಿದವನೂ ನಮ್ಮ ಪ್ರವೃತ್ತಿಗಳಿಗೆ ಅತ್ಯಂತ ಉತ್ತಮ ರೀತಿಯಲ್ಲಿ ಪ್ರತಿಫಲವನ್ನು ಕೊಡುವವನೂ ಆಗಿರುವ ಪರಮಾತ್ಮನ ನಾಮದೊಂದಿಗೆ.

'ಇಸ್ಲಾಂ' ಎಂದರೆ ದೈವಾಭೀಷ್ಟಕ್ಕೆ ವಿಧೇಯನಾಗಿದ್ದುಕೊಂಡು ಶಾಂತಿಯನ್ನು ಪಡೆಯುವುದು ಎಂದರ್ಥವಾಗುತ್ತದೆ.

ನಾನು ಪರಮಾತ್ಮನನ್ನು ನಂಬುತ್ತೇನೆ:

ಪರಮಾತ್ಮನು ಏಕನಾಗಿದ್ದಾನೆ; ಎಲ್ಲಾ ವಸ್ತುಗಳೂ ಅವನದಾಗಿವೆ. ಅವು ಸಂರಕ್ಷಣೆಗಾಗಿ ಅವನನ್ನು ಆಶ್ರಯಿಸಿಕೊಂಡಿವೆ. ಅವನಿಗೆ ಸಹಾಯದ ಅಗತ್ಯವಿಲ್ಲ. ಅವನಿಗೆ ಸಂತಾನವಿಲ್ಲ. ಅವನಿಗೆ ಪಾಲುದಾರರಿಲ್ಲ; ಅವನಿಗೆ ತುಲ್ಯನೂ ಇಲ್ಲ.

ನಾನು 'ಮಲಕು' (ದೈವದೂತ)ಗಳನ್ನು ನಂಬುತ್ತೇನೆ:

ಪರಮಾತ್ಮನು ತನ್ನ ಸೃಷ್ಟಿಗಳೊಡನೆ ಮಾತನಾಡುವುದು ಮತ್ತು ಇತರ ಹಲವು ಕಾರ್ಯಗಳನ್ನು ಮಾಡುವುದು ಈ ಶಕ್ತಿಗಳ ಮುಖಾಂತರವಾಗಿದೆ.

ಮನುಷ್ಯ ವರ್ಗದ ಸುಧಾರಣೆಗಾಗಿ ಹಲವು ಕಾಲಘಟ್ಟಗಳಲ್ಲಿ ಪರಮಾತ್ಮನು ಕರುಣೆದೋರಿದ ದಿವ್ಯ ಪ್ರಕಟನೆಗಳಲ್ಲಿ (revelations) ನಾನು ನಂಬಿಕೆಯುಳ್ಳವನಾಗಿದ್ದೇನೆ.

ಮೊದಲಿನ ಪ್ರಕಟನೆಗಳು (revelations) ಪರಿಮಿತವಾಗಿದ್ದವು. ಅವು ಒಂದು ಪ್ರತ್ಯೇಕ ಗೋತ್ರದ, ಅಥವಾ ರಾಷ್ಟ್ರದ, ಅಥವಾ ಜನತೆಯ ಅವಶ್ಯಗಳಿಗೆ ಅನುಯೋಜ್ಯವೂ ಅವರಿಗೆ ಮಾತ್ರವಿರುವ ಮಾರ್ಗದರ್ಶನಗಳು ಒಳಗೊಂಡವೂ, ಹಾಗೆ ಆ ಗೋತ್ರವೋ, ರಾಷ್ಟ್ರವೋ. ಜನತೆಯೋ ಉಂಟುಮಾಡಿದ ಪರಿವರ್ತನೆಗೆ ಅನುರೂಪವಾದ ರೀತಿಯಲ್ಲಿ ಪರಿಮಿತವಾಗಿದ್ದವು. ಅಂತ್ಯವೂ ಪರಿಪೂರ್ಣವೂ ಸಾರ್ವತ್ರಿಕವೂ ಆದ ದಿವ್ಯ ಪ್ರಕಟಣೆ (revelations)ಪವಿತ್ರಖುರ್‌ಆನ್ ಆಗಿದೆ. ಮನುಷ್ಯವರ್ಗದ ಮಾರ್ಗದರ್ಶನಕ್ಕಾಗಿ ಇಸ್ಲಾಮಿನ ಪವಿತ್ರ ಪ್ರವಾದಿ ಮುಹಮ್ಮದ್ ಪೈಗಂಬರ (ಸ.)ರಿಗೆ ನೇರವಾಗಿ ಲಭಿಸಿದ ದಿವ್ಯ ಪ್ರಕಟನೆಗಳನ್ನು ಬರೆದು ಜೋಪಾನವಾಗಿಟ್ಟದ್ದಾಗಿದೆ ಖುರ್‌ಆನ್.

ನಾನು ಪರಮಾತ್ಮನ ಪ್ರವಾದಿಗಳನ್ನು ನಂಬುತ್ತೇನೆ: ಅವರೆಲ್ಲರನ್ನು–ನೋಹಾ, ಅಬ್ರಹಾಂ. ಮೋಶೆ, ಯೇಸು, ಬುದ್ಧ, ಕೃಷ್ಣ, ಮುಹಮ್ಮದ್ ನಬಿ(ಸ.) ಎಲ್ಲರನ್ನು ನಾನು ನಂಬುತ್ತೇನೆ. ಯೇಸು ಯೆಹೂದ್ಯರೆಡೆಯಲ್ಲಿ ಕೊನೆಯದಾಗಿ ನಿಯೋಗಿಸಲ್ಪಟ್ಟ ಸದ್ವೃತ್ತನಾದ ಓರ್ವ ಪ್ರವಾದಿಯಾಗಿದ್ದರು. ಅವರನ್ನು ಶಿಲುಬೆಗೆ ಏರಿಸಲಾಗಿತ್ತು. ಆದರೂ ಶಿಲುಬೆಯ ಮೇಲೆ ಅವರು ಮೃತಪಡಲಿಲ್ಲ. ಜೀವವಿರುವಾಗಲೇ ಅವರನ್ನು ಶಿಲುಬೆಯಿಂದ ಇಳಿಸಲಾಗಿತ್ತು. (ಅವರು ಆ ಸಂದರ್ಭದಲ್ಲಿ ಮೂರ್ಛಿತರಾಗಿದ್ದರೂ) ಅದರ ನಂತರ ಅವರನ್ನು ಸ್ನೇಹಪುರಸ್ಸರದಿಂದ ಶುಶ್ರೂಷೆ ಮಾಡಲಾಯಿತು. ಹಾಗೆ ತನ್ನ ಆರೋಗ್ಯವನ್ನು ಅವರು ತಿರುಗಿ ಪಡೆದು ಜೀವಿತಯಾಪನವನ್ನು ಮುಂದುವರಿಸಿದರು. ತದನಂತರ ಅವರು ಸಿರಿಯಾ, ಇರಾಕ್, ಇರಾನ್, ಅಫಘಾನಿಸ್ಥಾನ್,

ಕಾಶ್ಮೀರ್ ಎಂಬೀ ಸ್ಥಳಗಳಲ್ಲಿ ಸಂಚರಿಸಿ ಚದರಿಹೋದ ಇಸ್ರಾಯಿಲ್ ಸಂತತಿಗಳಿಗೆ ಸತ್ಯಪ್ರಬೋಧನೆಯನ್ನು ನೀಡಿದರು. ಅವರು ಕಾಶ್ಮೀರದಲ್ಲಿ ಮೃತಪಟ್ಟರು; ಅವರನ್ನು ಶ್ರೀನಗರದಲ್ಲಿ ದಫನ ಮಾಡಲಾಯಿಯಿತು. ಅವರ ಗೋರಿ ಈಗಲೂ ಅಲ್ಲಿ ಸುರಕ್ಷಿತವಾಗಿ ನೆಲೆಗೊಂಡಿರುತ್ತದೆ. ಅದನ್ನು ಯಾರಿಗೂ ಹೋಗಿ ಸಂದರ್ಶಿಸಬಹುದಾಗಿದೆ.

ಅಂತ್ಯವೂ ಪರಿಪೂರ್ಣವೂ ಸಾರ್ವಲೌಕಿಕವೂ ಆಗಿರುವ ದಿವ್ಯ ಪ್ರಕಟನೆ (revelations) ಮುಹಮ್ಮದ್ ನಬಿ(ಸ) ಅವರಿಗೆ ನೀಡಲ್ಪಟ್ಟಿದೆ. ಆದುದರಿಂದ ನ್ಯಾಯಪ್ರಮಾಣವಾಹಿಯಾದ ಕೊನೆಯ ಪ್ರವಾದಿ ಆ ಪುಣ್ಯಾತ್ಮರಾಗಿದ್ದಾರೆ. ಆದರೆ ಮನುಷ್ಯ ಸಮುದಾಯು ಸತ್ಯಮಾರ್ಗದಿಂದ ದೂರ ಹೋಗುವರೆ ಎಡೆ ಇರುವುದರಿಂದಾಗಿ ಪವಿತ್ರ ಖುರ್‌ಆನಿನ ಸರಿಯಾದ ವ್ಯಾಖ್ಯಾನವನ್ನು ಕಾಲಾನುಸಾರ ಪ್ರಕಾಶಿಸಲು ದಿವ್ಯೋಪದೇಶಗಳಿಂದ ಕೂಡಿದಪ್ರಕಟಣೆಗಳು (revelations) ಆವಶ್ಯವಾಗಿವೆ ಜೀವಿತ ರೀತಿಯ ಪರಿವರ್ತನೆಯೊಂದಿಗೆ ಪರಿಶುದ್ಧವೂ, ಪರಮಾತ್ಮನಿಗೂ ಮನುಷ್ಯನಿಗೂ ಸೇವೆಯನ್ನರ್ಪಿಕೊಳ್ಳುವುದೂ ಆದ ಜೀವಿತದ ಸಜೀವ ಮಾದರಿ ಮನುಷ್ಯಸಮುದಾಯಕ್ಕೆ ಲಭಿಸಲಿಕ್ಕಾಗಿ ಅದು ಅತ್ಯಾವಶ್ಯಕವಾಗಿದೆ. ಈ ಆವಶ್ಯಕತೆಯನ್ನು ಪೂರೈಸಲಿಕ್ಕಾಗಿಯೇ ಪ್ರವಾದಿಗಳು ಅವತರಿಸುವರು. ಹಝ್‌ರತ್ ಅಹ್ಮದ್ ಆ ರೀತಿಯ ಓರ್ವ ಪ್ರವಾದಿಯಾಗಿದ್ದಾರೆ. ಆ ಮಹಾತ್ಮರು ಹತ್ತೊಂಭತ್ತನೆಯ ಶತಮಾನದ ಅಂತ್ಯದಲ್ಲೂ ಇಪ್ಪತ್ತನೆಯ ಶತಮಾನದ ಆರಂಭದಲ್ಲೂ ಜೀವಿಸಿ 1908ರಲ್ಲಿ ಇಹಲೋಹ ತ್ಯಜಿಸಿದರು. ನಾನು ಅವರನ್ನು ನಂಬುತ್ತೇನೆ. ಹಾಗೆ ನಾನು ಓರ್ವ ಅಹ್ಮದೀ ಮುಸ್ಲಿಂ ಆಗಿದ್ದೇನೆ.

ನಾನು ಆತ್ಮದ ಪುನರುತ್ಥಾನದಲ್ಲೂ ಮರಣಾನಂತರ ಜೀವಿತದಲ್ಲೂ ನಂಬಿಕೆಯುಳ್ಳವನಾಗಿದ್ದೇನೆ:

ಎಲ್ಲಾ ನನ್ಮೆ ಹಾಗೂ ಸನ್ಮಾರ್ಗಗಳ ಮೂಲಸ್ಥಾನ ಪರಮಾತ್ಮನೆಂದೂ ಎಲ್ಲಾ ವಸ್ತುಗಳ ಸ್ಥಿತ್ಯಂತರಗಳು ಅವನಿಂದ ನಿರ್ಣಯಿಸಲ್ಪಡುತ್ತವೆಯೆಂದೂ ನಾನು ನಂಬುತ್ತೇನೆ.

ಮನುಷ್ಯ ಜೀವಿತದ ಉದ್ದೇಶ ಮನುಷ್ಯನು ದೈವಿಕಗುಣಗಳನ್ನು ತನ್ನಲ್ಲಿ ಪ್ರತಿಬಿಂಬಿಸಿ ದೈವಸಾಯುಜ್ಯವನ್ನು ಗಳಿಸಲು ಪರಿಶ್ರಮಿಸುವುದಾಗಿದೆಯೆಂದು ಇಸ್ಲಾಂ ಕಲಿಸುತ್ತದೆ.

ಈ ಉದ್ದೇಶಕ್ಕಾಗಿ ಅನುರೋಧ ಶಕ್ತಿಗಳನ್ನೂ ಪ್ರವಣತೆಗಳನ್ನೂ ಪರಮಾತ್ಮನು ಮನುಷ್ಯನಿಗೆ ಪ್ರದಾನ ಮಾಡಿರುವನು.

ಮನುಷ್ಯನಲ್ಲಿ ಅಂತರ್ಲೀನವಾಗಿರುವ ಶಕ್ತಿ ಸಾಮರ್ಥ್ಯಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಪಡಿಸುವುದಾದರೆ ಸನ್ಮಾರ್ಗದ ಉತ್ಕರ್ಷಕ್ಕೆ ಅದು ಸಹಾಯಕವಾಗುತ್ತದೆ.

ಈ ಶಕ್ತಿ ಸಾಮರ್ಥ್ಯಗಳನ್ನು ದುರುಪಯೋಗಪಡಿಸುವುದಾದರೆ ಅದು ಮನುಷ್ಯನನ್ನು ದುರ್ಮಾರ್ಗದೆಡೆಗೆ ಕೊಂಡೊಯ್ಯುತ್ತದೆ. ಅಸಭ್ಯತೆಯನ್ನು ಬಿಟ್ಟಗಲಿ ಆರೋಗ್ಯಕರವಾದ ಮಾರ್ಪಾಡನ್ನು ತನ್ನಲ್ಲಿ ಉಂಟುಮಾಡುವ ವರೆಗೆ ಅವನು ಮೋಕ್ಷಾವಸ್ಥೆಯನ್ನು ತಲಪಲು ಶಕ್ತನಲ್ಲದವನಾಗುತ್ತಾನೆ.

ಎಲ್ಲಾ ಮನುಷ್ಯರು "ಪರಿಶುದ್ಧ"ರಾಗಿ ಜನಿಸುತ್ತಾರೆ. ಪಾಪ ಎಂಬುದು, ಬೋಧಪೂರ್ವಕವಾದ ಪ್ರವೃತ್ತಿಗಳ (ವಿಚಾರವೂ ಅದರಲ್ಲಿ ಸೇರುತ್ತವೆ) ಅಥವಾ ದೋಷಕರವಾದ ಉಪೇಕ್ಷೆಗಳ ಕಾರಣದಿಂದ ಹೊರಗಿನ ಸಂಪರ್ಕದಿಂದ ಉಂಟಾಗುತ್ತದೆ.

ನಮ್ಮಲ್ಲಿ ಪ್ರತಿಯೊಬ್ಬನು ಸ್ವಯಂ ಪರಿಶ್ರಮಿಸಿ ಪರಮಾತ್ಮನ ಔದಾರ್ಯವನ್ನೂ ಅನುಗ್ರಹವನ್ನೂ ಸ್ನೇಹವನ್ನೂ ಸಂಪಾದಿಸಿ ಮೋಕ್ಷವನ್ನು ಪಡೆಯಬೇಕಾಗಿದೆ. ಬೇರೆ ಯಾರಿಗೂ ನಮ್ಮ ಪಾಪಕ್ಕೆ ಪರಿಹಾರವೆಂಬಂತೆ ವರ್ತಿಸಲು ಸಾಧ್ಯವಿಲ್ಲ.

ಉತ್ಕೃಷ್ಟ ವಿಚಾರದಿಂದಲೂ ಸರಿಯಾದ ರೀತಿಯಿಂದಲೂ ಮಾಡುವ ಯಾವುದೇ ಕರ್ಮವು "ಪುಣ್ಯ"ವಾಗಿದೆ.

ಉತ್ಕ್ರಮ ವಿಚಾರದಿಂದಲೂ ತಪ್ಪು ರೀತಿಯಿಂದಲೂ ಮಾಡುವ ಎಲ್ಲಾ ಕರ್ಮಗಳು "ಪಾಪ"ವಾಗಿದೆ.

ದೈವಸಾಮೀಪ್ಯಕ್ಕಿರುವ ಅತಿಪ್ರಧಾನವೂ ಸುಶಕ್ತವೂ ಆಗಿರುವ ಒಂದು ಮಾರ್ಗವು ಪ್ರಾರ್ಥನೆಯಾಗಿದೆ. ವ್ರತಾನುಷ್ಠಾನ, ದಾನಧರ್ಮ, ಪರೋಪಕಾರ, ಪರಸ್ಪರ ಸಹಾಯ, ಸಹಿಷ್ಣುತೆ ಇತ್ಯಾದಿ ಶಾರೀರಿಕ ಹಾಗೂ ಸನ್ಮಾರ್ಗಿಕ ಕರ್ಮಗಳೂ ಅಭ್ಯಾಸಗಳೂ ದೈವಸಾಮೀಪ್ಯ ಪ್ರಾಪ್ತಿಗಿರುವ ಇತರ ದಾರಿಗಳಾಗಿವೆ.

ಪರಮಾತ್ಮನು ಪರಿಶುದ್ಧಿಯ ಪರಮಸ್ಥಾನ. ಶಾರೀರಿಕವಾಗಿಯೂ ಮಾನಸಿಕವಾಗಿಯೂ ಆಧ್ಯಾತ್ಮಿಕ

ವಾಗಿಯೂ—ವಿಚಾರದಲ್ಲೂ ಪ್ರವರ್ತನೆಯಲ್ಲೂ ಪರಿಶುದ್ಧರಾಗದೆ ನಾವು ದೈವಸಾಮಿಪ್ಯವನ್ನು ಪಡೆಯಲಾರೆವು.

ಮಾನಸಿಕ ಹಾಗೂ ಆಧ್ಯಾತ್ಮಿಕ ಪರಿಶುದ್ಧತೆಯ ರೀತಿಯಲ್ಲೇ ಶಾರೀರಿಕ ಶುಚಿಯೂ ಸಹ ಅನುಪೇಕ್ಷಣೀಯವಾಗಿದೆ.

ನಮ್ಮ ಶರೀರಾವಯವಗಳ ಹಾಗೂ ಪರಿಸರದ ಶುಚೀಕರಣವು ಪರಿಶುದ್ಧಿಯ ಪ್ರಥಮ ಹೆಜ್ಜೆ.

ಕ್ರಮಬದ್ಧವಾಗಿ ಸ್ನಾನವನ್ನೂ ಶುಚಿಯನ್ನೂ ಮಾಡಲು ಇಸ್ಲಾಂ ನಿರ್ದೇಶಿಸಿ, ವ್ಯಕ್ತಿಪರವೂ ಸಾಮೂಹಿಕವೂ ಆಗಿರುವ ಶುಚೀಕರಣ ನಿಯಮಗಳನ್ನು ಕಾರ್ಯರೂಪಕ್ಕೆ ತಂದಿರುತ್ತದೆ. ಅವು ಶಾರೀರಿಕ ಸುಖವನ್ನು ಪ್ರಧಾನ ಮಾಡುವುವು ಮಾತ್ರವಲ್ಲ, ಎಲ್ಲಾ ವಿಧದಲ್ಲೂ ಉತ್ಕೃಷ್ಟ ರೀತಿಯಲ್ಲಿ ವರ್ತಿಸಲು ಓರ್ವನನ್ನು ಪ್ರಾಪ್ತನನ್ನಾಗಿ ಮಾಡುತ್ತದೆ.

ಆಹಾರವು ಆರೋಗ್ಯದ ಮೇಲೆ ಎಂಬಂತೆ ಓರ್ವನ ಮನಸ್ಸಿನ ಮೇಲೆಯೂ ವಿಚಾರಗಳ ಮೇಲೆಯೂ ಪರಿಣಾಮವನ್ನುಂಟುಮಾಡುತ್ತದೆ. ಆದ ಕಾರಣ ನಮ್ಮ ಆಹಾರ ಶುದ್ಧವೂ ಗುಣದಾಯಕವೂ ಆಗಿದೆಯೋ ಎಂದು ನಾವು ಗಮನಿಸಬೇಕಾಗಿವೆ. ಈ ಸಂಗತಿಯಲ್ಲಿಯೂ ಇಸ್ಲಾಂ ಫಲಪ್ರದವಾದ ನಿರ್ದೇಶನಗಳನ್ನು ನೀಡಿ ಮಿತಾಹಾರದ ಅಭ್ಯಾಸವನ್ನುಂಟುಮಾಡಲು ಉಪದೇಶಿಸಿರುತ್ತದೆ. ಮದ್ಯ ಹಾಗೂ ಮತ್ತಿತರ ಅಮಲು ಪದಾರ್ಥಗಳ ಉಪಯೋಗವನ್ನು ಅದು ನಿರೋಧಿಸಿರುತ್ತದೆ.

ಮನಸ್ಸು ಹಾಗೂ ಆತ್ಮ ಒಳಗೊಂಡಿರುವ ಶರೀರವನ್ನು ಕಾಪಾಡುವುದು ತಮ್ಮ ಪಾವನವಾದ ಒಂದು ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಜಾಗರೂಕರಾಗಿ ನಾವು ನಿರ್ವಹಿಸಬೇಕಾಗಿದೆ.

ಉತ್ಕೃಷ್ಟ ಸ್ವಭಾವಕ್ಕೆ ಬೇಕಾದ ಎಲ್ಲಾ ನಿರ್ದೇಶನಗಳನ್ನು ಇಸ್ಲಾಂ ನೀಡಿ ಸತ್ಕರ್ಮದ ಸ್ಥಾನ ಕ್ರಮಗಳನ್ನು ನಿಶ್ಚಯಿಸುತ್ತದೆ. ಸಮಸೃಷ್ಟಿಗಳನ್ನು ನೋಯಿಸುವುದು ಅಥವಾ ಉಪದ್ರವಿಸುವುದು ಹಾಗೂ ಇತರರ ಭಾವನೆಗಳನ್ನು ವ್ರಣಗೊಳಿಸುವುದು ಈ ರೀತಿಯ ವರ್ತನೆಯನ್ನು ಅದು ವಿರೋಧಿಸುತ್ತದೆ. ದುಷ್ಟ ವಿಚಾರಗಳನ್ನೂ ಕೆಟ್ಟ ರೀತಿಗಳನ್ನೂ ಅದು ತಡೆಯುತ್ತದೆ.

ಇತರರೊಡನೆ, ಅವರು ತಮ್ಮೊಡನೆ ಯಾವ ರೀತಿಯಲ್ಲಿ ವರ್ತಿಸುವರೆಂದು ನೋಡದೆಯೇ ಪರೋಪಕಾರದಿಂದ ವರ್ತಿಸಲು ಇಸ್ಲಾಂ ಆಜ್ಞಾಪಿಸುತ್ತದೆ. ಮಾತಾಪಿತರೊಡನೆ ಹಾಗೂ ಸಹೋದರ ಸಹೋದರಿಗಳೊಡನೆ ಪ್ರೀತಿ ಇರುವ ಹಾಗೆಯೇ ಇತರ ಮನುಷ್ಯ ಜೀವಿಗಳ ಮೇಲೆ ಸಹ ಹೃದಯಾಂತರಾಳದಿಂದ ಔದಾರ್ಯವು ನಿರ್ಗಮಿಸಬೇಕಾಗಿವೆಯೆಂದು ಅದು ಕಲಿಸುತ್ತದೆ.

ವಿಶ್ವಾಸ, ಧೈರ್ಯ, ಸ್ಥಿರೋತ್ಸಾಹಗಳನ್ನು ಬೆಳೆಸಿಕೊಂಡು ಬರಲಿಕ್ಕೂ, ದಾನಧರ್ಮ, ಕ್ಷಮಾಗುಣ, ಸ್ನೇಹ ಭಾವನೆಗಳನ್ನು ನೆಲೆನಿಲ್ಲಿಸಿಕೊಂಡಿರಲಿಕ್ಕೂ ಅದು ನಮಗೆ ಉಪದೇಶಿಸುತ್ತದೆ.

ಸಾಂಪತ್ತಿಕ ಕ್ಷೇತ್ರದಲ್ಲಿ, ಇಸ್ಲಾಂ ಅತ್ಯಂತ ವಿಪುಲವೂ ನೀತಿಪೂರ್ವಕವಾಗಿಯೂ ಧನವಿತರಣೆಗೆ ಶ್ರಮಿಸುತ್ತದೆ. ಎಲ್ಲಾ ಸಂಪತ್ತಿನ ಉದ್ಭವ ಸ್ಥಾನವಾದ ಭೂಮಿಯೂ ಅದರ ವಿಭವಗಳೂ, ಸೂರ್ಯ, ಚಂದ್ರ, ನಕ್ಷತ್ರ ಗೋಳಗಳು, ಗಾಳಿ, ಮಳೆ ಬರಿಸುವ ಮೋಡಗಳು ಮೊದಲಾದಂವುಗಳೆಲ್ಲಾ ಮನುಷ್ಯ ಸಮುದಾಯಕ್ಕೆ ಒಟ್ಟಾಗಿ ಪರಮಾತ್ಮನು ದಾನ ಮಾಡಿದ್ದಾಗಿವೆಯೆಂದು ಅದು ಸಿದ್ಧಾಂತಿಸುತ್ತದೆ. ಅದುದರಿಂದ, ಸಂಪತ್ತಿನ ವಿತರಣೆಯಲ್ಲಿ ಸಮುದಾಯದ ಪಾಲನ್ನು ಗುರುತಿಸಿ ಸಮುದಾಯದ ಸಮಷ್ಟಿಯಾದ ಕ್ಷೇಮಕ್ಕೂ ಪ್ರಗತಿಗೂ ಉಪಯುಕ್ತವನ್ನಾಗಿ ಮಾಡಬೇಕೆಂದು ಅದು ನಿರ್ದೇಶಿಸುತ್ತದೆ. ಈ ಪಾಲನ್ನು 'ಝಕಾತ್' (ಇದರ ಅರ್ಥ 'ಶುದ್ಧೀಕರಣ' ಎಂದಾಗಿದೆ) ಎಂಬ ಹೆಸರಿನಿಂದ ಕರೆಯಲ್ಪಡುವ ತೆರಿಗೆ ಮುಖಾಂತರ ವಸೂಲು ಮಾಡಲು ಸಾಧ್ಯವಿದೆ. 'ಝಕಾತ್' ಬಗೆಯ ವರಮಾನವು ನಿಶ್ಚಿತ ಉದ್ದೇಶಗಳಿಗಾಗಿ ಮಾತ್ರವೇ ವಿನಿಯೋಗಿಸಲ್ಪಡುತ್ತದೆ. ಅದೇನೆಂದರೆ, ಹಸಿವನ್ನೂ ಬಡತನವನ್ನೂ ನಿವಾರಿಸಲಿಕ್ಕೂ ಸಮುದಾಯದ ಎಲ್ಲಾ ವಿಭಾಗಗಳೂ ಒಂದೇ ರೀತಿಯಲ್ಲಿ ಅನುಭವಿಸಲು ಸಾಧ್ಯವಾಗುವ ರೀತಿಯಲ್ಲಿ ಸಾರ್ವಜನಿಕ ಕಾರ್ಯಗಳನ್ನೂ ವೈಜ್ಞಾನಿಕ ಹಾಗೂ ವ್ಯವಸಾಯಿಕ ಸಂಶೋಧನೆಗಳನ್ನು ನಡೆಸಲಿಕ್ಕೂ, ವಿದ್ವಾಂಸರಿಗೂ ಸಂಶೋಧಕರಿಗೂ ವೇತನಗಳನ್ನು ನೀಡಲಿಕ್ಕೂ, ಬುದ್ಧಿಕುಶಲತೆಯಿದ್ದು ಮೂಲಧನವಿಲ್ಲದೆ ಕಷ್ಟಪಡುವವರಿಗೆ ಮೂಲಧನವನ್ನು ನೀಡುವುದು ಮುಂತಾದ ಕಾರ್ಯಗಳಿಗಾಗಿಯೂ.

ಖಾಸಗಿ ಸ್ವತ್ತಿನ ಅವಕಾಶವನ್ನು ಇಸ್ಲಾಂ ಅಂಗೀಕರಿಸಿ ಒಂದು 'ಟ್ರಸ್ಟ್' ಎಂಬ ರೀತಿಯಲ್ಲಿ ಅದಕ್ಕೆ ಸಂರಕ್ಷಣೆಯನ್ನು ನೀಡುತ್ತದೆ. ಇಸ್ಲಾಂ ಅದರ ಉತ್ತರ ಪದಸ್ಥ ನಿಯಮದ ಮುಖಾಂತರ ಪ್ರತಿಯೊಂದು ತಲೆ

ಮಾರಿನವರಿಗೂ ಅತ್ಯಂತ ವಿಪುಲವಾದ ರೀತಿಯಲ್ಲಿ ಸಂಪತ್ತಿನ ವಿತರಣೆಯನ್ನು ಮಾಡಲು ಶ್ರಮಿಸುತ್ತದೆ. ಬಡ್ಡಿ ರೀತಿಯ ಸಾಲ ಪದ್ಧತಿಯನ್ನು ವಿರೋಧಿಸುತ್ತಾ 'ಝಕಾತ್'' ತೆರಿಗೆಯನ್ನು ಕೊಡಲು ನಿಷ್ಕರ್ಷಿಸುತ್ತಾ ಧನವನ್ನು ಒಂದು ಕಡೆ ಶೇಖರಗೊಳ್ಳುವುದನ್ನು ಇಸ್ಲಾಂ ತಡೆಯುತ್ತದೆ. ವಾಣಿಜ್ಯ ವ್ಯವಸಾಯಗಳನ್ನು 'ಕೋ-ಪಾರ್ಟನರ್‌ಶಿಪ್', 'ಪ್ರೊಫಿಟ್ ಶೇರಿಂಗ್'' 'ಜೋಯಿಂಟ್ ಸ್ಟೋಕ್ ಕೋರ್ಪೊರೇಶನ್'' ಮುಖಾಂತರ ಅಭಿವೃದ್ಧಿಗೊಳಿಸಲು ಇಸ್ಲಾಂ ಶ್ರಮಿಸುತ್ತದೆ.

ಇಸ್ಲಾಂ ಎಲ್ಲಾ ಪೌರರ ಅತ್ಯಂತ ಕನಿಷ್ಠ ಆವಶ್ಯಗಳನ್ನು ಪೂರೈಸಿಕೊಡಲು ಸ್ಟೇಟನ್ನು ನಿರ್ಬಂಧಿಸುತ್ತದೆ.

ಸಾಮೂಹಿಕ ಕ್ಷೇತ್ರದಲ್ಲಿ ಮನುಷ್ಯರೆಡೆಯಲ್ಲಿ ಸಮತ್ವವನ್ನೂ ಸಾಹೋದರ್ಯವನ್ನೂ ಅದು ವೃದ್ಧಿಗೊಳಿಸುತ್ತದೆ. ವರ್ಗಪರ, ವರ್ಣಪರ, ಕುಟುಂಬಪರ, ಸಾಂಪತ್ತಿಕ ಭಿನ್ನತೆಗಳನ್ನು ಆಧಾರವಾಗಿಟ್ಟು ಕೇಳುವ ಅವಕಾಶ ಅಧಿಕಾರಗಳನ್ನು ಇಸ್ಲಾಂ ಅಂಗೀಕರಿಸುವುದಿಲ್ಲ. ಒಬ್ಬ ಮನುಷ್ಯನ ಜೀವಿತ ಪರಿಶುದ್ಧತೆ ಮತ್ತು ಸಾತ್ವಿಕತೆ ಮಾತ್ರವೇ ಇಸ್ಲಾಮಿನಲ್ಲಿ ಕುಲೀನತೆಯ ಮತ್ತು ಮಾನ್ಯತೆಯ ಮುಖಮುದ್ರೆಯಾಗಿದೆ. ಪವಿತ್ರ ಖುರ್‌ಆನ್ ಹೇಳುತ್ತದೆ: "ನೀವು ಪರಸ್ಪರ ವಿಪುಲವಾದ ಸಂಪರ್ಕ ಸಾಧಿಸಲಿಕ್ಕೆ ನಾವು ನಿಮ್ಮನ್ನು ಗೋತ್ರಗಳನ್ನಾಗಿಯೂ ರಾಷ್ಟ್ರಗಳನ್ನಾಗಿಯೂ ಬೇರ್ಪಡಿಸಿರುವೆವು. ನಿಮ್ಮಲ್ಲಿ ಅತ್ಯಂತ ಸತ್ಕರ್ಮನಿರತವಾದ ಜೀವನವನ್ನು ನಡೆಸುವವನು ಪರಮಾತ್ಮನ ದೃಷ್ಟಿಯಲ್ಲಿ ಅತ್ಯಂತ ಬಹುಮಾನಿತನು.''

ಮತಪರವಾದ ಮಂಡಲದಲ್ಲಿ, ಇಸ್ಲಾಂ ಅತ್ಯಂತ ಸಹಿಷ್ಣುತೆಯನ್ನು ಉಪದೇಶಿಸಿ, ಭಿನ್ನಾಭಿಪ್ರಾಯವಿರುವವರ ಅಭಿಪ್ರಾಯಗಳನ್ನೂ ಮತವಿಶ್ವಾಸಗಳನ್ನೂ ಮನ್ನಿಸಲು ಆಜ್ಞಾಪಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: "ಮತದಲ್ಲಿ ನಿರ್ಬಂಧವಿಲ್ಲ; ಖಂಡಿತವಾಗಿಯೂ ಸನ್ಮಾರ್ಗ ದುರ್ಮಾರ್ಗದಿಂದ ವ್ಯತಿರಿಕ್ತವಾದುದಾಗಿದೆ.''

ನೀವು ನಿರಾವಲಂಬಿಗಳಾಗಿ, ಕ್ಷೀಣತರಾಗಿ, ನಿರಾಶರಾಗಿ ಇರುವಾಗಲೆಲ್ಲ ಆಶ್ರಯ, ಆಶ್ವಾಸನೆ, ಸಹಾಯಗಳಿಗಾಗಿ ಪರಮಾತ್ಮನ ಕಡೆಗೆ ತಿರುಗಬೇಕಾಗಿದೆಯೆಂದು ಇಸ್ಲಾಂ ಉಪದೇಶಿಸುತ್ತದೆ. ಪರಮಾತ್ಮನು ಸದಾ ಸಮೀಪದಲ್ಲಿರುತ್ತಾನೆ. ಅವನು ನಿಮ್ಮ ಕೈಬಿಡಲಾರನು. ನಿಮ್ಮ ಹೃದಯವನ್ನು ದೈವಿಕ ಪುಣ್ಯಕ್ಷೇತ್ರವನ್ನಾಗಿಯೂ ಆರಾಧನಾಲಯವನ್ನಾಗಿಯೂ ಮಾರ್ಪಡಿಸಿರಿ. ನಿಮ್ಮ ರಕ್ಷಕನೂ ಸ್ನೇಹಿತನೂ ಆಗಿ ಅವನು ಸದಾ ನಿಮ್ಮೊಂದಿಗಿರಲಿ.

ಸತ್ಯಕ್ಕಾಗಿ, ಸತ್ಕರ್ಮಕ್ಕಾಗಿ, ನ್ಯಾಯಕ್ಕಾಗಿ, ನೀತಿಗಾಗಿ ಸದಾ ಹೋರಾಡಿರಿ.

"ಲೋಕಕ್ಕೆಲ್ಲಾ ವಿರೋಧಿಯಾದರೂ ಪರಮಾತ್ಮನಿಗಾಗಿ ನೀವು ಒಬ್ಬಂಟಿಗನಾಗಿ ಹೋರಾಡಿರಿ.''

"ಪರಮಾತ್ಮನೊಡನಿರುವ ಪ್ರೀತಿಯೂ, ಭಯವೂ ಎಲ್ಲಾ ದೈವಜ್ಞಾನಗಳ ಒಟ್ಟುಸಾರವಾಗಿದೆ.''

(ಅನುವಾದಕ: **I. A. ರಶೀದ್**)

Phone: 74464 P. P.

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

**KESSEE TRADING CORPORATION**

Dealers in: TOPIOCA CHIPS AND FLOUR,

**9/135, GUNNY STREET, CALICUT-673001.**

# ದೈವವನ್ನು ಅರಿತುಕೊಳ್ಳುವ ಮಾರ್ಗಗಳು

ಲೇಖಕ: **ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ H. A.**

(ಸಾಕ್ಷಾತ್ ದೈವದ ಗುಣಗಳು ಯಾವುವೆಂದೂ ದೈವವನ್ನು ಹೇಗೆ ತಿಳಿಯಬಹುದೆಂದೂ ಕೇಳಿದ ಪ್ರಶ್ನೆಗುತ್ತರ. —ಸಂ.)

ಸಾಕ್ಷಾತ್ ದೈವಕ್ಕೆ ಉತ್ಕೃಷ್ಟವೂ ಪರಿಪೂರ್ಣವೂ ಅತ್ಯುನ್ನತವೂ ಆಗಿರುವ ಎಲ್ಲಾ ವಿಶಿಷ್ಟ ಗುಣಗಳು ಇರಬೇಕಾಗಿದ್ದು ಅವನು ನ್ಯೂನತೆಯಿಂದಲೂ ದುರ್ಬಲತೆಯಿಂದಲೂ ಅಪಕರ್ಷದಿಂದಲೂ ಪರಿಶುದ್ಧನಾಗಿರಬೇಕಾಗಿದೆ. ಹಾಗಿರುವಾಗ ಅವನು ಸರ್ವಶಕ್ತನೂ ಸರ್ವಜ್ಞನೂ ಸರ್ವಾಂತರ್ಯಾಮಿಯೂ ಸರ್ವಚರಾಚರ ವಸ್ತುಗಳ ಸೃಷ್ಟಿಕರ್ತನೂ ಆದ್ಯಂತರಹಿತನೂ ನಿತ್ಯನೂ ಏಕನೂ ಆಗಿರಬೇಕಾಗಿದೆ. ಏಕೆಂದರೆ, ಸಕಲ ಚರಾಚರಗಳ ಸೃಷ್ಟಿಕರ್ತನೂ ಪರಿಪಾಲಕನೂ ಅಗಾಧವಾದ ಜ್ಞಾನದಿಂದ ಪ್ರಪಂಚವನ್ನು ನಿಯಂತ್ರಿಸಿಕೊಂಡು ಹೋಗುವವನೂ ಆದ ಒಂದು ದೈವವಿದೆಯೆಂದು ನಾವು ನಂಬುವಾಗ ಅವನು ಸರ್ವಗುಣ ಸಂಪೂರ್ಣನಾಗಿರಬೇಕೆಂದು ಸಮ್ಮತಿಸಲು ವಿವೇಕಬುದ್ಧಿ ನಮ್ಮನ್ನು ನಿರ್ಬಂಧಿಸುತ್ತದೆ. ಅವನು ಏಕನೂ ಸರ್ವವಸ್ತುಗಳ ಸೃಷ್ಟಿಕರ್ತನೂ ಅಲ್ಲವಾದರೆ, ಅವನು ಸಕಲಕ್ಕೆ ಮೂಲಕಾರಣನೂ ಒಡೆಯನೂ ಆಗಲಾರನು. ಅದೇ ಪ್ರಕಾರ ಅವನು ಸರ್ವಶಕ್ತನೂ ಸರ್ವಜ್ಞನೂ ಆಗಿರದೆ ಅದ್ಭುತಾವಹವೂ ಪರಿಪೂರ್ಣವೂ ಆದ ವ್ಯವಸ್ಥೆಯಿಂದ ಪ್ರವರ್ತಿಸುತ್ತಿರುವ ಈ ಪ್ರಪಂಚದ ಸೃಷ್ಟಿಕರ್ತನೂ ನಿಯಂತ್ರಕನೂ ಆಗಲಾರನು. ಸಂಕ್ಷಿಪ್ತವಾಗಿ, ನಾವು ಸಾಕ್ಷಾತ್ ದೈವವೆಂದೂ ಪ್ರಪಂಚದ ಮೂಲಕಾರಣನೆಂದೂ ನಂಬುವವನು ಮೇಲೆ ಹೇಳಿದ ರೀತಿಯ ಗುಣಗಳಿಂದ ಕೂಡಿದವನಾಗಿರಬೇಕಾದುದು ಆವಶ್ಯವಾಗಿದೆ. ದೈವ ಸರ್ವಶಕ್ತನೂ ಸರ್ವಜ್ಞನೂ ಅಲ್ಲವೆಂದಾದರೆ ಅವನು ಅಪೂರ್ಣನೂ ನ್ಯೂನತೆಯುಳ್ಳವನೂ ಅನ್ಯಾಶ್ರಿತನೂ ಆಗುವನು. ಹಾಗಿರುವವನು ಸೃಷ್ಟಿಕರ್ತನಾಗಿರುವ ಬದಲು ಪರರ ಆಶ್ರಯಕ್ಕೆ ವಿಧೇಯನಾಗಿರುವ ಒಂದು ಸೃಷ್ಟಿಮಾತ್ರವೇ ಆಗುತ್ತಾನೆ. ದೈವ ಹಾಗೂ ಪ್ರಪಂಚದ ಮೂಲಕಾರಣ ಎಂಬುದು ಸೃಷ್ಟಿ ಹಾಗೂ ಅನ್ಯಾಶ್ರಿತ ಎಂಬ ಅವಸ್ಥೆಯಿಂದ ಭಿನ್ನವೂ ಒಂದೇ ಸ್ಥಳದಲ್ಲಿ ಒಟ್ಟುಗೂಡುವರೆ ಸಾಧ್ಯವಿಲ್ಲದ ರೀತಿಯಲ್ಲಿ ಪರಸ್ಪರ ವಿರುದ್ಧವೂ ಆಗಿರುವ ಎರಡು ಸ್ಥಿತಿಗಳಾಗಿವೆ. ಒಟ್ಟಾರೆ, ನಾವು ದೈವವೆಂದು ನಂಬುವವನು ಮೇಲೆ ಪ್ರಸ್ತಾಪಿಸಿದ ಪ್ರಕಾರ ಆದ್ಯಂತರಹಿತನೂ ನಿತ್ಯನೂ ಆಗಿರುವಂತೆಯೇ ಸರ್ವಶಕ್ತನೂ ಸರ್ವಜ್ಞನೂ ಸರ್ವಗುಣ ಸಂಪೂರ್ಣನೂ ಆಗಿರಬೇಕಾಗಿದೆ. ಅದೇ ಪ್ರಕಾರ ಅವನಿಗೆ ಒಂದು ಪ್ರತ್ಯೇಕ ಸ್ಥಳವನ್ನು ನಿರ್ಣಯಿಸುವುದು ದೈವ ಎಂಬ ಅವನ ಸ್ಥಿತಿಗೂ ಪೂರ್ಣತೆಗೂ ವಿರುದ್ಧವಾಗಿದೆ. ಹೀಗೆ ಅವನು ಸರ್ವವ್ಯಾಪಿಯಾಗಿರುವುದರಿಂದ ಅರೂಪಿಯೂ ಅಶರೀರಿಯೂ ಆಗಿ ಬೇಕಾಗಿದೆ. ಪ್ರತ್ಯೇಕ ಸ್ಥಳದೊಡನಿರುವ ಬಂಧವೂ ರೂಪವೂ ಇರುವುದು ಸ್ಥಳಗಳೊಡನೆ ಸಂಬಂಧಿಸಿರುವ ಪರಿಮಿತವಾದ ಜಡ ವಸ್ತುವಿಗಾಗಿದೆ. ಈ ಸ್ಥಿತಿ ದೈವಕ್ಕೆ ಅನುಯೋಜ್ಯವಲ್ಲವಾದುದರಿಂದ ಅವನು ಜಡವೋ ರೂಪವೋ ಇರುವವನಾಗಿಲಾರನು. ಹಾಗಿರುವವನು ಬಾಹ್ಯದೃಷ್ಟಿಗೆ ಗೋಚರಿಸುವವನೆಂದು ಭಾವಿಸುವುದು ಸರಿಯಲ್ಲ. ನಮ್ಮ ಮಾಂಸಚಕ್ಷುಸ್ಸಿಗೆ ಗೋಚರವಾಗುವ ವಸ್ತುಗಳೆಲ್ಲಾ ರೂಪವೂ ವರ್ಣವೂ ಸೀಮೆಯೂ ಉಳ್ಳದಾಗಿವೆ. ದೈವವು ಬಾಹ್ಯದೃಷ್ಟಿಗೆ ಗೋಚರಿಸಬೇಕಾದರೆ ಈ ಜಡಸ್ಥಿತಿಯನ್ನು ಹೊಂದಿದವನಾಗಿರಬೇಕು. ಅದು ಅವನ ದಿವ್ಯತ್ವಕ್ಕೆ ವಿಪರ್ಯಾಸವೆಂದಿರುವಾಗ ನಮ್ಮ ದೃಷ್ಟಿಗೆ ಅವನು ಗೋಚರಿಸಬೇಕೆಂದು ಭಾವಿಸುವುದು ಅವನು ನಮ್ಮ ಹಾಗೆ ಒಂದು ಜಡವಸ್ತುವೆಂದು ಹೇಳುವುದಕ್ಕೆ ಸಮವಾಗಿದೆ. ಒಂದು ವಸ್ತು ಎಷ್ಟರ ಮಟ್ಟಿಗೆ ಸೂಕ್ಷ್ಮತರದ್ದಾಗಿರುತ್ತದೋ ಅಷ್ಟರಮಟ್ಟಿಗೆ ಅದು ಬಾಹ್ಯೇಂದ್ರಿಯಗಳಿಗೆ ಅಗೋಚರವಾಗಿದ್ದು, ಅದನ್ನು ತಿಳಿಯುವುದು ಪ್ರಯಾಸಕರವಾಗಿರುತ್ತದೆ. ನಮ್ಮ ದೃಷ್ಟಿಗೆ ಅಗೋಚರವಾಗಿರುವ ಹಲವು ಸಂಗತಿಗಳನ್ನು ನಾವು ನಂಬುತ್ತೇವೆ; ಮಾತ್ರವಲ್ಲ, ನಮ್ಮ ಬಾಹ್ಯೇಂದ್ರಿಯಗಳಲ್ಲಿ ಯಾವುದಕ್ಕೂ ಗೋಚರವಾಗದ

ಎಷ್ಟೋ ವಸ್ತುಗಳಿವೆಯೆಂದು ನಾವು ಸಮ್ಮತಿಸುತ್ತೇವೆ; ಅವುಗಳ ಅಸ್ತಿತ್ವವನ್ನು ಅವುಗಳ ಪ್ರವರ್ತನೆ ಹಾಗೂ ಫಲದಿಂದ ಮಾತ್ರವೇ ನಾವು ತಿಳಿಯುತ್ತೇವೆ. ವಿದ್ಯುಚ್ಛಕ್ತಿ, 'ಈಥರ್', ಬುದ್ಧಿ, ಸ್ನೇಹ ಇವುಗಳೊಂದೂ ಮನುಷ್ಯನ ಬಾಹ್ಯೇಂದ್ರಿಯಗಳಿಗೆ ಗೋಚರಿಸುವುದಿಲ್ಲ. ಆದರೂ ಅವುಗಳ ಅಸ್ತಿತ್ವದಲ್ಲಿ ನಾವು ನಂಬುವುದು ಅವುಗಳ ಪ್ರವರ್ತನೆ ಹಾಗೂ ಫಲದಿಂದಾಗಿದೆ. ಹಾಗಿರುವಾಗ ಎಲ್ಲಾ ಸೂಕ್ಷ್ಮವಸ್ತುಗಳ ಆದಿಕಾರಣನೂ ಅತಿಸೂಕ್ಷ್ಮನೂ ಆಗಿರುವ ದೈವದ ಕುರಿತು, ಹಾಗೆ ಒಂದು ದೈವವಿದ್ದರೆ ನಮಗೆ ಅವನನ್ನು ಕಾಣಲು ಸಾಧ್ಯವಾಗಬೇಕೆಂದೂ ಅವನು ದೃಷ್ಟಿಗೆ ಗೋಚರಿಸದ ಪಕ್ಷದಲ್ಲಿ ಅವನನ್ನು ಅರಿಯಲು ಸಾಧ್ಯವಿಲ್ಲವೆಂದೂ ಭಾವಿಸುವುದು ತರ್ಕಬದ್ಧವಲ್ಲ. ದೈವವು ಬಾಹ್ಯದೃಷ್ಟಿಗೆ ಗೋಚರಿಸಬೇಕಾಗಿದೆಯೆಂದು ಹೇಳುವುದು ದೈವವು ಸ್ಥೂಲವಸ್ತುಗಳಾದ ವೃಕ್ಷಶಿಲಾದಿಗಳಂತೆ ಇರಬೇಕಾಗಿದೆಯೆಂದು ಹೇಳುವುದಕ್ಕೆ ತುಲ್ಯವಾಗಿದೆ.

ಆದರೆ, ದೈವವನ್ನು ಬಾಹ್ಯದೃಷ್ಟಿಯಿಂದ ಕಾಣಲು ಸಾಧ್ಯವಿಲ್ಲವೆಂದ ಕಾರಣ ನಮಗೆ ಅವನನ್ನು ಅರಿಯುವರೆ ಅಸಾಧ್ಯವೆಂದಾಗುವುದಿಲ್ಲ. ಅವನ ಅಸ್ತಿತ್ವದ ಕುರಿತು ಒಂದನೆಯದಾಗಿ ನಮಗೆ ಅರಿವು ನೀಡುವುದು ಈ ಪ್ರಪಂಚವೇ ಆಗಿದೆ. ನಿಸ್ಸಾರವಾದ ಒಂದು ವಸ್ತುವೂ ತನ್ನಷ್ಟಕ್ಕೆ ಉಂಟಾಯಿತೆಂದೂ ಅದಕ್ಕೆ ಯಾವನೇ ನಿರ್ಮಾತೃ ಇಲ್ಲವೆಂದೂ ನಾವು ಭಾವಿಸುವುದಿಲ್ಲ. ಒಂದು ಕಟ್ಟಡವನ್ನೋ ಭವನವನ್ನೋ ಕಾಣುವಾಗ ಅದು ತನ್ನಷ್ಟಕ್ಕೆ ಉಂಟಾಯಿತೆಂದೂ ಬುದ್ಧಿಯೂ ಜ್ಞಾನವೂ ಇರುವ ಓರ್ವ ನಿರ್ಮಾತೃ ಅದಕ್ಕಿಲ್ಲವೆಂದೂ ಯಾರಾದರೂ ಹೇಳುವನಾದರೆ ಅವನಿಗೆ ಬುದ್ಧಿ ಸ್ಥಿಮಿತದಲ್ಲಿಲ್ಲವೆಂದು ಯಾರೂ ಅಭಿಪ್ರಾಯಪಡುವರು. ಹೀಗಿರುವಾಗ ಅದ್ಭುತಾವಹವಾದ ವ್ಯವಸ್ಥೆಗಳಿಂದಲೂ ನಿರ್ದಿಷ್ಟ ನಿಯಮಗಳಿಗನುಸಾರವಾಗಿಯೂ ಪ್ರವರ್ತಿಸುತ್ತಿರುವ ಈ ಪ್ರಪಂಚವೂ, ಅದರ ಪ್ರತಿಯೊಂದು ವಸ್ತುವಿನ ಬಾಳ್ವಿಕೆಗೆ ಆವಶ್ಯಕವಾದ ವ್ಯವಸ್ಥೆಗಳೂ, ಪ್ರತಿಯೊಂದು ವಸ್ತುವಿನ ಪ್ರವರ್ತನೆಗೆ ಒಂದು ಪ್ರತ್ಯೇಕ ಉದ್ದೇಶವುಳ್ಳದ್ದಾಗಿ ಕಾಣುವುದೆಲ್ಲಾ ಇವಕ್ಕೆ ಓರ್ವ ಅಗಾಧಜ್ಞಾನಿಯೂ ಸರ್ವಸಮರ್ಥನೂ ಆಗಿರುವ ಓರ್ವ ನಿರ್ಮಾತೃ ಇದ್ದಾನೆಂದು ವ್ಯಕ್ತಪಡಿಸುತ್ತವೆ. ಒಟ್ಟಾರೆ ದೈವವನ್ನು ಅವನ ಜ್ಞಾನಶಕ್ತಿ, ಸರ್ವಸಾಮರ್ಥ್ಯ, ಸೃಷ್ಟಿಶಕ್ತಿ ಮೊದಲಾದ ಗುಣಗಳ ಮುಖಾಂತರ ತಿಳಿಯಲು ಸಾಧ್ಯವಾಗುವರೆ ಒಂದನೆಯ ಮಾರ್ಗ ಈ ಪ್ರಪಂಚವೇ ಆಗಿದೆ. ಪ್ರಪಂಚದ ಉದ್ಭವಕ್ಕೂ ಬಾಳ್ವಿಕೆಗೂ ಆದಿಕಾರಣವಾಗಿರುವ ಒಂದು ಸತ್ತೆಯನ್ನು ಸಮ್ಮತಿದೆ ನಿರ್ವಾಹವಿಲ್ಲ. ಆ ಆದಿಕಾರಣವು, ಜ್ಞಾನವೂ, ಬುದ್ಧಿ ವೈಭವವೂ ಉಳ್ಳ ಒಂದು ಶಕ್ತಿಯಾಗಿರಬೇಕೆಂದು ಪ್ರಪಂಚದ ಘಟನಾವೈಚಿತ್ರ್ಯವೂ ವ್ಯವಸ್ಥಾಪರಿಪೂರ್ಣತೆಯೂ ರುಜುಪಡಿಸುತ್ತದೆ. ಒಂದು ಆದಿಕಾರಣವನ್ನು ಸಮ್ಮತಿಸದ ಪಕ್ಷದಲ್ಲಿ ಈ ಲೋಕದ ಸತ್ತೆಯನ್ನೇ ನಿಷೇಧಿಸಬೇಕಾದೀತು. ಆದಿಕಾರಣವು ಸ್ವಯಂಸ್ಥಿತವಾದ ಒಂದಾಗಿರಬಹುದಲ್ಲದೆ ಅದರಾಚೆಯೂ ಒಂದು ಕಾರಣ ಇರಬಾರದಾಗಿದೆ. ಹಾಗೆ ಅದರಾಚೆಯೂ ಒಂದು ಕಾರಣವನ್ನು ಸಂಕಲ್ಪಿಸುವುದಾದರೆ ಮತ್ತೆ ದೈವವು ಆ ಅಂತ್ಯಕಾರಣವಾಗಿರಬಹುದಾಗಿದೆ. ನಮಗೆ ಈ ಕಾರ್ಯಕಾರಣ ಸರಣಿಯನ್ನು ಒಂದು ಕಡೆಯಲ್ಲಿ ಕೊನೆಗೊಳಿಸದಿರಲು ನಿರ್ವಾಹವಿಲ್ಲ. ಹಾಗೆ ಕೊನೆಗೊಳಿಸದಿದ್ದರೆ ಎಲ್ಲದಕ್ಕೂ ಮೂಲಕಾರಣವಾಗಿ ಒಂದಿಲ್ಲವೆಂದೂ, ತನ್ಮೂಲಕ ಅದರ ಕಾರ್ಯವಾದ ಈ ಪ್ರಪಂಚದ ವ್ಯವಸ್ಥೆಯನ್ನೇ ನಿಷೇಧಿಸಬೇಕಾಗುತ್ತದೆ. ದೈವವೆಂದು ನಾವು ಹೇಳುವುದು, ಯಾರಿಂದ ಸೃಷ್ಟಿಸಲ್ಪಟ್ಟಿತೆಂಬ ಪ್ರಶ್ನೆಗೆ ಗುರಿಯಾಗದ ಗುಣಗಳಿಂದ ಕೂಡಿದ ಒಬ್ಬನನ್ನಾಗಿದೆ. ಹಾಗಿರುವಾಗ ದೈವವೆಂದು ಹೇಳುವುದು ಮತ್ತು ಅವನು ಹೇಗೆ ಉಂಟಾದನು ಎಂದು ಕೇಳುವುದು ಪರಸ್ಪರ ವಿರುದ್ಧವಾಗಿದೆ. ಪ್ರಪಂಚದ ಸ್ಥಿತಿಯೂ ಕಾರ್ಯವೂ ಅದನ್ನು ನಿರ್ಮಿಸಿ ನಡೆಸಿಕೊಂಡು ಹೋಗುವ ಒಂದು ಶಕ್ತಿಯುಂಟೆಂದು ರುಜುಪಡಿಸಲು ಪರ್ಯಾಪ್ತವಾದ ರೀತಿಯಲ್ಲಿದೆ ಆದುದರಿಂದ ಅದಕ್ಕೆ ಒಬ್ಬ ನಿರ್ಮಾತೃ ಇರುವನೆಂದು ಹೇಳುವುದು ಅಸಮಂಜಸವೆನಿಸುವುದಿಲ್ಲ. ಆದರೆ ದೈವ ಸ್ವಯಂಭೂವಾಗಿರದೆ ಇನ್ನೊಂದರಿಂದ ಉಂಟಾದವನೆಂದು ಹೇಳುವುದಾದರೆ, ಆದಿಕಾರಣ ಹಾಗೂ ದೈವ ಎಂಬ ಅವನ ಸ್ಥಿತಿಗೆ ಭಂಗವುಂಟಾಗುತ್ತದೆ. ಒಟ್ಟಾರೆ, ಸರ್ವಚರಾಚರಗಳ ಮೂಲಕಾರಣನಾದ ದೈವದ ಕುರಿತು ಅವನು ಹೇಗೆ ಉಂಟಾದನು ಎಂಬ ಪ್ರಶ್ನೆ ನ್ಯಾಯರಹಿತವಾದುದಾಗಿದೆ. ಸಂಕ್ಷಿಪ್ತವಾಗಿ, ದೈವವನ್ನು ತಿಳಿಯುವರೆ ಒಂದನೆಯ ಮಾರ್ಗ ಈ ಪ್ರಪಂಚಕ್ಕೆ ಒಂದು ಕರ್ತನಿರಬೇಕಾಗಿದೆಯೆಂದು ನಮ್ಮ ವಿವೇಕಬುದ್ಧಿ ಹೇಳಿಕೊಡುತ್ತದೆ ಎಂಬುದಾಗಿದೆ.

ದೈವವನ್ನು ತಿಳಿಯುವರೆ ಎರಡನೆಯ ಮಾರ್ಗ, ಮನುಷ್ಯ ಸ್ವಭಾವದಲ್ಲಿ ಅಂತರ್ಲೀನವಾಗಿರುವ ಒಂದು ಪ್ರಜ್ಞೆಯಾಗಿದೆ. ಮನುಷ್ಯನ ಹಲವಿಧ ಸಹಜಾತ ಪ್ರಜ್ಞೆಗಳ ಪೈಕಿ ಒಂದು ತನ್ನ ಸೃಷ್ಟಿಕರ್ತನೂ ಒಡೆಯನೂ ಆಗಿರುವ ಒಂದು ಶಕ್ತಿಯುಂಟೆಂದೂ ತಾನು ಸ್ವಯಂ ಉಂಟಾದವನಲ್ಲವೆಂದೂ ಆಗಿದೆ ಪ್ರತಿಕೂಲ ವಾದ ಪರಿಸ್ಥಿತಿಗಳಿಗೆ ಗುರಿಯಾಗಿರದಿದ್ದರೆ ಈ ಪ್ರಜ್ಞೆಯು ಕಾರಣದಿಂದ ಅವನ ಅಂತಃಕರಣದಲ್ಲಿ ತನಗಿಂತ ಮೇಲಿನ ಒಂದು ಮಹಾಶಕ್ತಿಯುಂಟೆಂಬ ಒಂದು ಶಬ್ದ ಅವನಿಗೆ ಕೇಳಿಬರುತ್ತದೆ. ಮಾತ್ರವಲ್ಲ ಪ್ರತಿಕೂಲ ಪರಿಸ್ಥಿತಿಗೆ ಗುರಿಯಾಗಿ ಈ ಸ್ವಭಾವಿಕ ಪ್ರಜ್ಞೆಯು ಗತಿಸಿಹೋಗಿದ್ದರೂ ಸಹ ಕೆಲವೊಮ್ಮೆ ಈ ಪ್ರಜ್ಞೆಗೆ ಪಕ್ಕನೆ ಒಂದು ಎಚ್ಚರಿಕೆಯುಂಟಾಗಿ, ದೈವವುಂಟೆಂಬ ಅಂತಃಕರಣ ಶಬ್ದ ಅವನಿಗೆ ಕೇಳಿಸುತ್ತದೆ. ಈ ಅಂತರ್ಬೋಧವನ್ನು ಕುರಿತು ಪವಿತ್ರಖುರ್‌ಆನ್‌ಹೀಗೆಹೇಳುತ್ತದೆ: "ಅಲ್ಲಾಹು ಆದಂ ಸಂತತಿಗಳನ್ನು ಸೃಷ್ಟಿಸಿ, ಅವರಿಗೆ ಅವರನ್ನೇ ಸಾಕ್ಷಿಯನ್ನಾಗಿ ಮಾಡಿ, 'ನಾನು ನಿಮ್ಮ ದೈವವಲ್ಲವೇ?' ಎಂದು ಅವರೊಡನೆ ಕೇಳಿದಾಗ ಅವರು 'ಹೌದು, ನಾವು ಸಾಕ್ಷ್ಯವಹಿಸುತ್ತೇವೆ' ಎಂದು ಉತ್ತರ ಕೊಟ್ಟರು." (7:172). ಈ ದೈವವಾಕ್ಯದ ತಾತ್ಪರ್ಯವು, ಅಲ್ಲಾಹು ಮನುಷ್ಯರನ್ನು ಸೃಷ್ಟಿಸಿ ಅವರಲ್ಲಿ ಹಲವಿಧದ ಶಕ್ತಿಗಳನ್ನೂ ಅಂತರ್ಬೋಧಗಳನ್ನೂ ನಿಕ್ಷೇಪಿಸಿರುವಂತೆಯೇ ಅವರಿಗೆ ಸೃಷ್ಟಿಕರ್ತನೂ ಒಡೆಯನೂ ಆಗಿರುವ ಓರ್ವನಿರುವನೆಂದು ಸಾಕ್ಷ್ಯ ವಹಿಸುವ ಒಂದು ಪ್ರಜ್ಞೆಯನ್ನೂ ನೀಡಿರುವನು ಎಂದಾಗಿದೆ. ಈ ಪ್ರಜ್ಞೆಯೇ ಮನುಷ್ಯರಿಗೆ ದೈವವನ್ನು ತಿಳಿಯುವ ಮಾರ್ಗಗಳ ಪೈಕಿ ಒಂದಾಗಿದೆ. ಈ ಬೋಧಶಕ್ತಿಯನ್ನು ಪ್ರತಿಕೂಲವಾದ ಶಿಕ್ಷಣಕ್ಕೆ ಒಳಪಡಿಸಿ ವಿರೂಪಗೊಳಿಸದವರಿಗೆ ಅದರ ಮುಖಾಂತರ ತಮ್ಮ ಅಂತಃಕರಣದಿಂದ ದೈವವಿದೆಯೆಂಬ ಸಾಕ್ಷ್ಯಶಬ್ದವನ್ನು ಕೇಳಲು ಸಾಧ್ಯವಾಗುತ್ತದೆ.

ದೈವವನ್ನು ತಿಳಿಯುವರೆ ಮೂರನೆಯ ಮಾರ್ಗ, ಸಶ್ಯಾತ್ಮರೂ ಜ್ಞಾನಪ್ರಬುದ್ಧರೂ ಆಗಿರುವ ದೈವಸಾನ್ನಿಧ್ಯವನ್ನು ಸಿದ್ಧಿಸಿದ ಮಾದರಿ ಪುರುಷರ ಅನುಭವ ಸಾಕ್ಷ್ಯಗಳಾಗಿವೆ. ದೈವಪ್ರೇಮದಲ್ಲೂ ಧ್ಯಾನದಲ್ಲೂ ನಿರತರಾಗಿ ಆದರ್ಶ ಜೀವಿತವನ್ನು ನಡೆಸಿ, ಸತ್ಯಸಂಧತೆಯಿಂದಲೂ ತ್ಯಾಗಬುದ್ಧಿಯಿಂದಲೂ ಸಮಸೃಷ್ಟಿ ಸ್ನೇಹದಿಂದಲೂ ಬುದ್ಧಿವೈಭವದಿಂದಲೂ ಉತ್ಕೃಷ್ಟತೆಯನ್ನು ಪಡೆದ ಎಷ್ಟೋ ಮಹಾತ್ಮರು ತಮಗೆ ದೈವವನ್ನು ಅರಿಯಲು ಸಾಧ್ಯವಾಗಿದೆಯೆಂದು ಎಲ್ಲಾ ಕಾಲಘಟ್ಟಗಳಲ್ಲಿಯೂ ಸಾಕ್ಷ್ಯವಹಿಸಿ, ದಿವ್ಯಲಕ್ಷಣಗಳಿಂದ ತಮ್ಮ ಈ ಸಾಕ್ಷ್ಯವನ್ನು ಸ್ಥಿರೀಕರಿಸಿರುವರು. ಅವರ ಈ ಸಾಕ್ಷ್ಯವಚನವೂ ಪ್ರಬೋಧನೆಯೂ ದೈವವನ್ನು ತಿಳಿಯುವ ಮಾರ್ಗಗಳಲ್ಲಿ ಅತ್ಯಂತ ದೃಢವಾದುದಾಗಿದೆ. ಇದಲ್ಲದೆ ದೈವದ ಜ್ಞಾನವನ್ನೂ ಪ್ರೇಮವನ್ನೂ ಸಂಪಾದಿಸುವರೆ ನಿರಂತರ ಆತ್ಮಾರ್ಥವಾಗಿ ಮಾಡಿಕೊಳ್ಳುವ ದೈವೋಪಾಸನೆಯೂ ಅವನ ನಿರ್ದೇಶವನ್ನನುಸರಿಸಿರುವ ಜೀವಿತ ನಿಯಂತ್ರಣವೂ ಅವನನ್ನು ತಿಳಿಯುವರೆ ಸಾಧ್ಯವಿರುವ ಮಾರ್ಗವಾಗಿದೆ. "ನಮ್ಮನ್ನು ಪಡೆಯಲು ಪ್ರಯತ್ನಿಸುತ್ತಿರುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿಕೊಡುವೆವು'' (29:69) ಎಂದು ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೇಳಿ ತನ್ನನ್ನು ಪಡೆಯಲು ಪರಿಶ್ರಮಿಸಿಕೊಂಡಿರುವವರಿಗೆ ಹಲವು ಮಾರ್ಗಗಳಿಂದ ತನ್ನ ಜ್ಞಾನವನ್ನು ನೀಡಿ ತನ್ನನ್ನು ಪ್ರತ್ಯಕ್ಷಗೊಳಿಸುವನೆಂದು ತಿಳಿಸಿಕೊಟ್ಟಿರುವನು. ಹೀಗೆ ದೈವವನ್ನು ಅವನ ಗುಣಗಳ ಮುಖಾಂತರವೂ ಜ್ಞಾನ ಮುಖಾಂತರವೂ ದರ್ಶಿಸಲು ಸಾಧ್ಯವಿದೆ. ಹಾಗಲ್ಲದೆ, ದೃಷ್ಟಿಗಳಿಂದ ಅವನನ್ನು ಕಾಣಲು ಸಾಧ್ಯವಿಲ್ಲ. ಈ ವಿಷಯದ ಕುರಿತು ಖುರ್‌ಆನ್ ಹೀಗೆನ್ನುತ್ತದೆ: "ದೃಷ್ಟಿಗಳಿಗೆ ಅವನನ್ನು ಕಾಣಲು ಸಾಧ್ಯವಿಲ್ಲ; ದೃಷ್ಟಿಗಳನ್ನು ಅವನು ಕಾಣುತ್ತಾನೆ; ಹೇಗೆಂದರೆ ಅವನು ಅತಿಸೂಕ್ಷ್ಮನೂ ಎಲ್ಲಾ ವಿಷಯಗಳನ್ನು ತಿಳಿಯುವವನೂ ಆಗಿದ್ದಾನೆ.'' (6:104) ಎಂದರೆ, ಮನುಷ್ಯರಿಗೆ ಸೂಕ್ಷ್ಮವಸ್ತುಗಳನ್ನು ಕಾಣಲು ಸಾಧ್ಯವಿಲ್ಲದ ಕಾರಣ ಅತ್ಯಂತ ಸೂಕ್ಷ್ಮನೂ ಸೂಕ್ಷ್ಮವಸ್ತುಗಳಿಗೆಲ್ಲಾ ಆದಿಕಾರಣನೂ ಆಗಿರುವ ದೈವ ಮನುಷ್ಯದೃಷ್ಟಿಗೆ ಗೋಚರಿಸಲಾರನು. ಆದರೆ ಮನುಷ್ಯರಿಗೆ ಅವನನ್ನು ತಿಳಿಯುವರೆ, ಪಡೆಯುವರೆ ಇಚ್ಛೆಯಿರುವ ಕಾರಣ ಅವನು ಅಂತಹವರಿಗೆ ತನ್ನ ಶಕ್ತಿಪ್ರತಾಪಗಳ ಮುಖಾಂತರವೂ ಗುಣಗಳ ಮುಖಾಂತರವೂ ಪ್ರತ್ಯಕ್ಷನಾಗುತ್ತಾನೆ. ಹೀಗೆ ಅವನನ್ನು ತಿಳಿಯುವರೆ ಪ್ರಯತ್ನಿಸುವವರಿಗೆ ತಮ್ಮ ಜ್ಞಾನದೃಷ್ಟಿ ಮುಖಾಂತರ ಅವನನ್ನು ಕಾಣಬಹುದಾಗಿದೆ. ಹಾಗೆ ಅವನನ್ನು ಪಡೆಯಲು ಪರಿಶ್ರಮಿಸುವವರಿಗೆ ಅವನ ದರ್ಶನವುಂಟಾಗಿದೆ. ಸತ್ಯಸಂಧತೆ,

# ಮಹಾತ್ಮಾ ಶ್ರೀ ಕೃಷ್ಣ

ಲೇಖಕ:
ಎಂ. ಪಿ. ಇಬ್ರಾಹಿಂ

ಹೈಂದವ ಸಾಹಿತ್ಯದ ಒಬ್ಬ ಪ್ರಧಾನ ನಾಯಕರಾದ ಮಹಾತ್ಮಾ ಶ್ರೀ ಕೃಷ್ಣರು ಭಾರತದ ಕೋಟಿಗಟ್ಟಲೆ ಜನರ ಬಹುಮಾನಾದರಗಳಿಗೆ ಪಾತ್ರರಾಗಿರುವರು. ಇವರ ಕುರಿತು ಹಲವರು ಹಲವಾರು ಅಭಿಪ್ರಾಯವುಳ್ಳವರಾಗಿದ್ದಾರೆ. ಬಹುಸಂಖ್ಯಾತ ಹಿಂದುಗಳು ಇವರನ್ನು ಒಬ್ಬ ದೇವರ ಅವತಾರ ಅಥವಾ ಮನುಷ್ಯ ರೂಪದಲ್ಲಿ ಪ್ರತ್ಯಕ್ಷನಾದ ದೇವರು ಎಂದು ನಂಬುವರಾದರೆ, ಇನ್ನು ಕೆಲವರು ಅವರನ್ನು ಒಬ್ಬ ಮಹಾತ್ಮರು ಎಂದು ಮಾತ್ರ ಸ್ವೀಕರಿಸುತ್ತಾರೆ. ಆದರೆ, ಹಿಂದುಗಳಲ್ಲದ ಹಲವರ ಅಭಿಪ್ರಾಯವು ಇವರು ಒಬ್ಬ ಸತ್ಪುರುಷ ಕೂಡಾ ಅಲ್ಲವೆಂದಾಗಿದೆ. ಸಾಮಾನ್ಯವಾಗಿ ಮುಸ್ಲಿಮರೂ, ಕ್ರೈಸ್ತರೂ ಈರೀತಿ ವಿಶ್ವಾಸವುಳ್ಳವರಾಗಿದ್ದಾರೆ. ಶ್ರೀ ಕೃಷ್ಣರು ಒಬ್ಬ ಸತ್ಯ ವಿಶ್ವಾಸಿ ಕೂಡಾ ಆಗಿರಲು ಸಾಧ್ಯವಿಲ್ಲವೆಂದೂ ಅವರ ಕುರಿತು ಹೇಳಲ್ಪಡುವ ಕಥೆಗಳು ಅವರನ್ನು ಒಬ್ಬ ಸಾತ್ವಿಕನೆಂದು ಸ್ವೀಕರಿಸಲು ಪ್ರತಿಬಂಧಿಸುವುದೆಂದೂ ಅವರು ಹೇಳುತ್ತಾರೆ.

ಆದರೆ, ಮಹಾತ್ಮಾ ಶ್ರೀ ಕೃಷ್ಣರು ಭಾರತಕ್ಕೆ ದೇವರಿಂದ ನಿಯುಕ್ತರಾದ ಒಬ್ಬ ಆಧ್ಯಾತ್ಮಿಕ ಗುರುವೂ ಸತ್ಯಪ್ರವಾದಿಯೂ ಆಗಿರುವರೆಂಬುದು ಅಹ್ಮದಿಯಾ ಮುಸ್ಲಿಮರ ವಿಶ್ವಾಸ. ಭಾರತ ಭೂಮಿಯ ನಿವಾಸಿಗಳು ಪಾಪಗಳಲ್ಲಿ ಮುಳುಗಿ ಆಧ್ಯಾತ್ಮಿಕವಾಗಿ ಅಧಃಪತನಗೊಂಡ ಕಾಲದಲ್ಲಿ ಅವರನ್ನು ಉದ್ಧರಿಸಲಿಕ್ಕಾಗಿ ಪರಮಾತ್ಮನು ನಿಯೋಗಿಸಿದ ಒಬ್ಬ ಸತ್ಯಪ್ರವಾದಿಯಾಗಿರುವರು ಆ ಮಹಾತ್ಮರು.

1904ರಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಮಹಾತ್ಮ ಶ್ರೀ ಕೃಷ್ಣರನ್ನು ದೈವ ನಿಯುಕ್ತರಾದ ಒಬ್ಬ ಪ್ರವಾದಿಯೆಂದು ಹೇಳಿದಾಗ ಮುಸ್ಲಿಮರೆಡೆಯಲ್ಲಿ ಅದೊಂದು ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸಿತು. "ಏನು, ಇವರು ಹಿಂದುಗಳನ್ನು 'ನಬಿ' ಎನ್ನುವರೇ?" ಎಂದು ಕೆಲವರು ಆಶ್ಚರ್ಯದಿಂದ ಕೇಳತೊಡಗಿದರು. ಇನ್ನು ಕೆಲವರು ಪರಿಹಾಸ ಮಾಡಿದರು. ಆದರೆ, ಅವರ ಮತ–ಪಂಡಿತರಲ್ಲಿ ಚಿಂತಾಶೀಲರಾದ ಕೆಲವರು ಅದರ ಕುರಿತು ಶಾಂತವಾಗಿ ಆಲೋಚಿಸಿದಾಗ ಅಹ್ಮದಿಯಾ ಸಂಘಟನೆಯ ಸ್ಥಾಪಕರು ಹೇಳುತ್ತಿರುವುದೇ ಸರಿಯೂ ಸತ್ಯವೂ ಆಗಿರುವುದೆಂದು ಅವರಿಗೆ ಬೋಧ್ಯವಾಯಿತು.

ಮಹಾತ್ಮಾ ಶ್ರೀ ಕೃಷ್ಣರನ್ನು ಒಬ್ಬ ದೈವನಿಯುಕ್ತರಾದ ಪ್ರವಾದಿ ಎಂದು ಅಹ್ಮದೀಯರು ಸ್ವೀಕರಿಸಲು ಪ್ರಧಾನವಾದ ಕಾರಣವು ಪವಿತ್ರ ಖುರ್‌ಆನ್ ಆ ರೀತಿ ಪ್ರಬೋಧಿಸುತ್ತದೆ ಎಂಬುದಾಗಿದೆ.

ಪವಿತ್ರ ಖುರ್‌ಆನ್ ಈ ರೀತಿ ಹೇಳುತ್ತದೆ:–

"ಒಬ್ಬ ಮುನ್ನೆಚ್ಚರಿಕೆಗಾರನು–ಪ್ರವಾದಿಯು–ಕಳುಹಿಸಲ್ಪಡದ ಜನಸಮೂಹವೇ ಇಲ್ಲ" (ಅಧ್ಯಾಯ 35; ವಚನ 25) ಮತ್ತು ಆ ಪವಿತ್ರ ಗ್ರಂಥದಲ್ಲಿ ನಾವು ಈ ರೀತಿ ಓದುತ್ತೇವೆ:-

"ಪೈಶಾಚಿಕವನ್ನು ದೂರೀಕರಿಸಿ ಸಾಕ್ಷಾತ್ ಪರಮಾತ್ಮನನ್ನೇ ಆರಾಧಿಸಿರಿ ಎಂಬ ಉಪದೇಶದೊಂದಿಗೆ ನಾವು ಎಲ್ಲಾ ಜನತೆಗಳೆಡೆಯಲ್ಲೂ ಪ್ರವಾದಿಗಳನ್ನು ನಿಯೋಗಿಸಿರುವೆವು." (16:37)

ಹೀಗೆ ಒಳಿತನ್ನು ಉಪದೇಶಿಸಿ ಕೆಡುಕಿನಿಂದ ಜನರನ್ನು ತಡೆಯಲಿಕ್ಕಾಗಿ ಪ್ರತಿಯೊಂದು ಸಮುದಾಯದಲ್ಲೂ ದೇವರು ತನ್ನ ದಿವ್ಯದೂತರನ್ನು ನಿಯೋಗಿಸಿರು

---

(16ನೇ ಪುಟದಿಂದ)

ತ್ಯಾಗ, ಸಮಸೃಷ್ಟಿಸ್ನೇಹ, ಸ್ಥಿರೋತ್ಸಾಹ ಮೊದಲಾದ ವಿಶಿಷ್ಟಗುಣಗಳಲ್ಲಿ ಮಾದರಿಪುರುಷರಾದ ಮಹಾತ್ಮರಿಗೆ ದೈವದರ್ಶನ ಸಿದ್ಧಿಸಿ ಅವರು ಅವನ ಕುರಿತಿರುವ ತಮ್ಮ ಅನುಭವವನ್ನು ಜನರಿಗೆ ಹೇಳಿಕೊಟ್ಟಿರುವರು. ಸತ್ಯಾತ್ಮಗಳ ಈ ಸಾಕ್ಷ್ಯ ದೈವದ ಅಸ್ತಿತ್ವಕ್ಕೂ, ಅವನ ಮಾರ್ಗದಲ್ಲಿ ಪ್ರಯತ್ನಿಸುವವರಿಗೆ ಅವನನ್ನು ತಿಳಿಯಲಿಕ್ಕೂ ಪಡೆಯಲಿಕ್ಕೂ ಸಾಧ್ಯವಾಗುವುದೆಂಬುದಕ್ಕೆ ಯೋಗ್ಯ ರುಜುವಾತಾಗಿದೆ.

(ಅನುವಾದಕ: ಅಬೂ R. A. ಸಿದ್ದೀಖ್)

ವನೆಂದು ಇದರಿಂದ ವ್ಯಕ್ತವಾಗುತ್ತದೆ. ಇಂತಹ ಪ್ರವಾದಿಗಳು ಲೋಕದ ನಾನಾ ಭಾಗಗಳಲ್ಲಿ ವಿಭಿನ್ನ ಕಾಲಗಳಲ್ಲಿ ಅವತರಿಸಿರುವರೆಂದೂ ಇದುವರೆಗೆ ಒಂದು ಲಕ್ಷ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ನಿಯೋಗಿಸಲ್ಪಟ್ಟಿರುವರೆಂದೂ ಇಸ್ಲಾಂ ಮತಸ್ಥಾಪಕರಾದ ಮುಹಮ್ಮದ್ ಪೈಗಂಬರರು ಹೇಳಿರುವರು. ಲೋಕದಲ್ಲಿ ಅವತರಿಸಿದ ಪ್ರವಾದಿಗಳಲ್ಲಿ ಕೆಲವರ ವೃತ್ತಾಂತಗಳನ್ನು ಮಾತ್ರವೇ ಪವಿತ್ರ ಖುರ್‌ಆನಿನಲ್ಲಿ ಹೇಳಲಾಗಿದೆ. ಖುರ್‌ಆನಿನಲ್ಲಿ ಹೆಸರೆತ್ತಿ ಹೇಳಲ್ಪಡದ ಅನೇಕಾನೇಕ ಪ್ರವಾದಿಗಳಿರುವರೆಂದೂ ಅವರಲ್ಲೂ ವಿಶ್ವಾಸವಿಡಬೇಕಾದುದು ಅತ್ಯಾವಶ್ಯಕವೆಂದೂ ಆ ಗ್ರಂಥವು ಆಜ್ಞಾಪಿಸುತ್ತದೆ.

"ಈ ಮೊದಲು ಕೆಲವು ಪ್ರವಾದಿಗಳ ಕುರಿತು ನಿನಗೆ ತಿಳಿಸಿಕೊಟ್ಟಿರುವೆವು; ಕೆಲವು ಪ್ರವಾದಿಗಳ ವೃತ್ತಾಂತವನ್ನು ನಿನಗೆ ವಿವರಿಸಿಕೊಟ್ಟಿಲ್ಲ." (4:165) "ಹೇಳು, ದೇವರಿಂದ ಅವತೀರ್ಣರಾದ ಸರ್ವಪ್ರವಾದಿಗಳಲ್ಲೂ ನಾವು ವಿಶ್ವಾಸವಿರಿಸಿದ್ದೇವೆ; ವಿಶ್ವಾಸವಿಡುವುದರಲ್ಲಿ ಅವರ ಮಧ್ಯೆ ನಾವು ಯಾವ ವ್ಯತ್ಯಾಸವನ್ನೂ ತೋರಿಸುವುದಿಲ್ಲ." (2:137)

ಹೀಗೆ ಲೋಕದ ಎಲ್ಲಾ ಭಾಗಗಳಲ್ಲೂ ವಾಸಿಸುವ ಜನವಿಭಾಗಗಳಿಗೆ ದೈವಜ್ಞಾನವನ್ನು ತಿಳಿಸಿಕೊಡಲು ಪ್ರವಾದಿಗಳು ನಿಯೋಗಿಸಲ್ಪಟ್ಟಿರುವರೆಂದು ವಿಶುದ್ಧ ಖುರ್‌ಆನ್ ಕಲಿಸುತ್ತಿರುವಾಗ ವಿಸ್ತಾರವಾದ ಭಾರತ ಭೂಮಿಯಲ್ಲಿ ಅನೇಕ ಸಾವಿರ ವರ್ಷಗಳ ವರೆಗೂ ಯಾರೊಬ್ಬರೂ ದಿವ್ಯದೂತರಾಗಿ ನಿಯೋಗಿಸಲ್ಪಡಲಿಲ್ಲವೆಂದು ಹೇಳುವುದು ಸರಿಯಾಗಿರಲಾರದು. ಖುರ್‌ಆನಿನ ಈ ವಚನದ ಆಧಾರದಿಂದ ನಾವು ಭಾರತದ ಚರಿತ್ರೆಯನ್ನು ಪರಿಶೀಲಿಸುವುದಾದರೆ, ಜನರನ್ನು ದೈವಿಕ ಕಾರ್ಯಗಳತ್ತ ಆಹ್ವಾನಿಸಿ ಧರ್ಮೋಪದೇಶಗಳನ್ನಿತ್ತ ಅನೇಕ ಯೋಗಿಗಳೂ, ಋಷಿ ಮುನಿಗಳೂ ಇಲ್ಲಿ ಜನ್ಮವೆತ್ತಿದ್ದರೆಂದೂ ಆದರೆ, ಅವರೆಲ್ಲರಿಗಿಂತಲೂ ಅಗ್ರಗಣ್ಯಸ್ಥಾನವನ್ನಲಂಕರಿಸಿ ಬಹುಕೋಟಿ ಜನರ ಆದರಾಭಿಮಾನಗಳಿಗೆ ಪಾತ್ರರಾದವರು ಮಹಾತ್ಮಾ ಶ್ರೀ ಕೃಷ್ಣರಾಗಿರುವರೆಂದೂ ಕಾಣಲು ಪ್ರಯಾಸವಿಲ್ಲ. ಭಾರತದ ಕೋಟ್ಯಾಂತರ ಜನರ ಹೃದಯಗಳಲ್ಲಿ ಆಧಿಪತ್ಯವನ್ನು ನಡೆಸಿ ಸಾವಿರಾರು ವರ್ಷಗಳಿಂದಲೂ ಅವರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವುದೇ ಮಹಾರಾಜ್ ಶ್ರೀ ಕೃಷ್ಣರ ಸತ್ಯತೆಯನ್ನು ತಿಳಿಸಿಕೊಡುವ ಒಂದು ಬಹುದೊಡ್ಡ ಸಾಕ್ಷ್ಯವಾಗಿದೆ.

ಮೇಲೆ ಹೇಳಿದ ಪವಿತ್ರ ಖುರ್‌ಆನಿನ ವಚನದ ಆಧಾರದಿಂದ ಮಹಾತ್ಮಾ ಶ್ರೀ ಕೃಷ್ಣರನ್ನು ಒಬ್ಬ ಸತ್ಯಪ್ರವಾದಿಯೆಂದು ಸ್ವೀಕರಿಸಲು ಪ್ರೇರೇಪಿಸುವ ಒಂದು ನಬಿವಚನವೂ (ಪೈಗಂಬರರ ನುಡಿ) ಕಾಣಲ್ಪಡುತ್ತದೆ. ಹಝ್ರತ್ ಶ್ರೀ ಕೃಷ್ಣರು ಪ್ರವಾದಿಯಾಗಿರುವರೆಂದು ವಿವರಿಸುವ ಒಂದು ನಬಿವಚನವನ್ನು 'ದೈಲಮಿ' ಈ ರೀತಿ ಉದ್ಧರಿಸಿರುವರು:- ಇಸ್ಲಾಂ ಮತಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಹೇಳಿದರು: "ಕಾನ ಫಿಲ್ ಹಿಂದಿ ನಬಿಯ್ಯುನ್ ಅಸ್‌ವದುಲ್ಲೌನಿ ಇಸ್‌ಮುಹು ಕಾಹಿನಾ'' ಅಂದರೆ 'ಇಂಡಿಯಾದಲ್ಲಿ ಶ್ಯಾಮಲ ವರ್ಣದ ಒಬ್ಬ ಪ್ರವಾದಿಯಿದ್ದರು; ಅವರ ಹೆಸರು ಕಾಹಿನಾ (ಕಣ್ಣ; ಕನ್ನಾ) ಎಂದಾಗಿದೆ'' (ಫಿರ್‌ದೌಸುಲ್ ಅಖ್‌ಬಾರ್, ತಾರೀಖ್ ಹಮದಾನ್). ಭಾರತದ ನಿವಾಸಿಗಳು ಮಹಾತ್ಮಾ ಶ್ರೀ ಕೃಷ್ಣರನ್ನು ಒಬ್ಬ ಬಹುದೊಡ್ಡ ಅವತಾರ ಪುರುಷರಾಗಿ ನಂಬುತ್ತಾರೆ. ಅವರಂತೆ ಅತ್ಯಧಿಕ ಬಹುಮಾನಾದರಗಳಿಗೆ ಪಾತ್ರರಾದ ಪ್ರವಾದಿಗಳು ಭಾರತದಲ್ಲಿ ಬೇರಾರೂ ಇರಲಿಲ್ಲವೆಂದೇ ಹೇಳಬಹುದು.

ಮಹಾತ್ಮಾ ಶ್ರೀ ಕೃಷ್ಣರು ಭಾರತದಲ್ಲಿ ಜನ್ಮವೆತ್ತಿದ ಒಬ್ಬ ದಿವ್ಯ ಪ್ರವಾದಿಯೆಂದು ತಿಳಿದು ಬರುವುದಾಗಿ ಮೊದಲೂ ಕೆಲವು ಮುಸ್ಲಿಂ ಪಂಡಿತರು ಹೇಳಿರುವರಾದರೂ ಸುವ್ಯಕ್ತವೂ ಸುದೃಢವೂ ಆದ ರೀತಿಯಲ್ಲಿ ತನಗೆ ಲಭಿಸಿದ ದಿವ್ಯಜ್ಞಾನದ ಆಧಾರದಿಂದ ಆ ಮಹಾತ್ಮರ ಕುರಿತು ಪ್ರಬೋಧಿಸಿ ಲಕ್ಷಾಂತರ ಜನರು ವಿಶ್ವಾಸ ಹೊಂದುವಂತೆ ಮಾಡಿದವರು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಆಗಿರುವರು. ಅವರು ಈ ರೀತಿ ಹೇಳಿದರು:-

"ಆರ್ಯ ಸಮುದಾಯದಲ್ಲಿ ಕೃಷ್ಣ ಎಂಬ ಹೆಸರಿನಿಂದ ಅವತರಿಸಿರುವ ವ್ಯಕ್ತಿಯು ದೇವರ ಒಬ್ಬ ವರಿಷ್ಠ ದಾಸರೂ ಆ ಕಾಲದ ಒಬ್ಬ ಪ್ರವಾದಿಯೂ ಆಗಿದ್ದರೆಂದು ಆತ್ಮದರ್ಶನದ ಮೂಲಕ ಅಲ್ಲಾಹು ನನಗೆ ಅನೇಕ ಬಾರಿ ತಿಳಿಸಿಕೊಟ್ಟಿರುವನು.'' (ತುಹ್‌ಫ ಗೋಲ್ಡವಿಯ್ಯ ಪುಟ–130)

"ನನಗೆ ದೇವರು ತಿಳಿಸಿಕೊಟ್ಟಿರುವಂತೆ ಮಹಾರಾಜ್ ಕೃಷ್ಣರು ನಿಜವಾಗಿಯೂ ಪೂರ್ಣರಾದ ಒಬ್ಬ ಮಹಾತ್ಮರಾಗಿದ್ದರು. ಹಿಂದುಗಳ ಋಷಿಗಳಲ್ಲೂ ಅವತಾರ ಪುರುಷರಲ್ಲೂ ಅವರಿಗೆ ತುಲ್ಯರಾಗಿ ಯಾರೂ ಇಲ್ಲ. ಅವರು, ದೇವರಿಂದ ದಿವ್ಯವಾಣಿ ಗಳಿಸುತ್ತಿದ್ದ ಒಬ್ಬ ಅವತಾರ ಪುರುಷ ಅಥವಾ ದೈವಪ್ರೇಷಿತರಾಗಿದ್ದರು. ಆರ್ಯಾವರ್ತವನ್ನು ಪಾಪದಿಂದ ಶುದ್ಧೀಕರಿಸಿದ ಒಬ್ಬ ಅನುಗ್ರಹೀತ ವ್ಯಕ್ತಿಯಾಗಿರುವರು ಅವರು. ನಿಜವಾಗಿಯೂ ಅವರು ತನ್ನ ಕಾಲದ ಒಬ್ಬ ಪ್ರವಾದಿಯಾಗಿದ್ದರು. ಆದರೆ, ಕಾಲಾಂತರದಲ್ಲಿ ಅವರ ಪ್ರಬೋಧನೆಗಳು ಬಹಳಷ್ಟು ಮಾರ್ಪಾಟಿಗೆ ಗುರಿಯಾಗಿವೆ. ಅವರಾದರೆ, ದೈವಪ್ರೇಮದಲ್ಲಿ ತಲ್ಲೀನರಾದವರೂ, ಧರ್ಮವನ್ನು ಪ್ರೀತಿಸಿ ಅಧರ್ಮವನ್ನು ವಿರೋಧಿಸಿದ ಒಬ್ಬ ಪುಣ್ಯಾತ್ಮರೂ ಆಗಿದ್ದರು." (ಲಕ್ಚರ್ ಸಿಯಾಲ್‌ಕೋಟ್ ಪುಟ–33)

**ಪ್ರವಾದಿತ್ವದ ಕುರಿತು ಭಗವದ್ಗೀತೆಯಲ್ಲಿ :—**

ಯಾವಾಗಲೆಲ್ಲಾ ಲೋಕದಲ್ಲಿ ಅಧರ್ಮವೂ ಪಾಪವೂ ತುಂಬಿ ದೈವಜ್ಞಾನವೂ ಸತ್ಯಧರ್ಮವೂ ಅಂತರ್ಧಾನವಾಗುವುದೋ ಆಗೆಲ್ಲಾ ಪರಮಾತ್ಮನು ಮಾನವರ ಉದ್ಧಾರಕ್ಕಾಗಿ ತನ್ನ ಕಡೆಯಿಂದ ಒಬ್ಬ ಪ್ರವಾದಿಯನ್ನು ನಿಯೋಗಿಸುವನು ಎಂಬುದು ಅವನ ನಿಯಮವಾಗಿದೆ. ಮಹಾತ್ಮಾ ಶ್ರೀ ಕೃಷ್ಣರು ಪ್ರವಾದಿಯಾಗಿ ನಿಯೋಗಿಸಲ್ಪಟ್ಟುದೂ ಅಂತಹ ಒಂದು ಕಾಲದಲ್ಲಾಗಿತ್ತೆಂದು ಚರಿತ್ರೆಯು ತಿಳಿಸಿಕೊಡುತ್ತದೆ. ತನ್ನ ಮೊದಲೂ ಅಂತಹ ಪ್ರವಾದಿಗಳು ಅವತರಿಸಿರುವರೆಂದೂ ತಾನು ಪ್ರಬೋಧಿಸುವ ತತ್ವವು ಭಾರತಕ್ಕೆ ನೂತನವಾದುದಲ್ಲವೆಂದೂ ಶ್ರೀ ಕೃಷ್ಣರು ಹೇಳಿರುವರು. ಭಗವದ್ಗೀತೆಯಲ್ಲಿ ನಾವು ಈ ರೀತಿ ಓದುತ್ತೇವೆ:—

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥
ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥

"ಈ ಅವ್ಯಯವಾದ ಯೋಗವನ್ನು ನಾನು ಮೊದಲು ಸೂರ್ಯನಿಗೆ ಹೇಳಿದೆನು. ಸೂರ್ಯನು ಮನುವಿಗೆ ಹೇಳಿದನು. ಮನುವು ಇಕ್ಷ್ವಾಕುವಿಗೆ ಉಪದೇಶಿಸಿದನು. ಎಲೈ ಅರ್ಜುನ, ಹೀಗೆ ಪರಂಪರೆಯಿಂದ ಬಂದ ಇದನ್ನು ರಾಜರ್ಷಿಗಳು ತಿಳಿದಿದ್ದರು. ಆ ಯೋಗವು ದೀರ್ಘ ಕಾಲವಾದುದರಿಂದ ಇಲ್ಲಿ ನಷ್ಟವಾಯಿತು." (ಭಗವದ್ಗೀತೆ, ಅಧ್ಯಾಯ 4 ಶ್ಲೋಕ 1, 2)

ದೀರ್ಘಕಾಲವಾದುದರಿಂದ ಜನ ಹೃದಯಗಳಿಗೆ ನಷ್ಟವಾಗಿ ಹೋದ ದೈವಜ್ಞಾನವನ್ನು ತಿಳಿಸಿಕೊಡಲು ದೇವರ ಒಬ್ಬ ಪ್ರವಾದಿಯಾಗಿ ಅವತರಿಸಿರುವೆನೆಂದು ವಾದಿಸಿದ ಶ್ರೀ ಕೃಷ್ಣರು ತನ್ನ ನಂತರವೂ ಅಂತಹ ಪ್ರವಾದಿಗಳು ಅವತರಿಸುವರೆಂದು ಭವಿಷ್ಯ ನುಡಿದಿರುವರು. ನೋಡಿರಿ:

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್ ।
ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಲೈ ಅರ್ಜುನ, ಯಾವಾಗ ಧರ್ಮಕ್ಕೆ ಗ್ಲಾನಿಯುಂಟಾಗಿ ಅದರ ಅವನತಿಯಾಗುವುದೋ ಅಧರ್ಮದ ಉನ್ನತಿಯಾಗುವುದೋ ಆಗ ನಾನು ಅವತಾರ ಮಾಡುತ್ತೇನೆ. ಸದ್ಧರ್ಮಿಗಳಾದ ಸಾಧುಜನರ ರಕ್ಷಣೆಗಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಮತ್ತು ಧರ್ಮದ ಸಂಸ್ಥಾಪನೆಗಾಗಿಯೂ ಪ್ರತಿ ಯುಗದಲ್ಲಿಯೂ ನಾನು ಅವತರಿಸುತ್ತೇನೆ." (ಭಗವದ್ಗೀತೆ, ಅಧ್ಯಾಯ 4; ಶ್ಲೋಕ 7, 8)

ಬೈಬಲಿನ ಹಾಗೆಯೇ ಭಗವದ್ಗೀತೆಯಲ್ಲೂ ಕ್ರಮೇಣ ದೈವಿಕ ವಚನಗಳೂ ಪ್ರವಾದೋಕ್ತಿಗಳೂ ಕೂಡಿ ಬೆರೆತವು. ಮೇಲಿನ ವಚನವು ಶ್ರೀ ಕೃಷ್ಣರಿಗೆ ಲಭಿಸಿದ ಒಂದು ದೈವವಾಣಿಯಾಗಿದ್ದಿರಬಹುದು. ದೈವವು ಅವತರಿಸುವುದು ಎಂಬುದಕ್ಕೆ ದೇವರೇ ಮನುಷ್ಯನಾಗಿ ಜನ್ಮವೆತ್ತುವನು ಎಂದು ಅರ್ಥ ಕಲ್ಪಿಸಲಾಗದು. ಶ್ರೀ ಕೃಷ್ಣರು ದೇವರಾಗಿರಲಿಲ್ಲ. ದೇವರ ಒಬ್ಬ ಪ್ರವಾದಿ ಮಾತ್ರವಾಗಿದ್ದರು. ಪ್ರವಾದಿಗಳು ತಮ್ಮ ಜೀವನದಲ್ಲಿ ದೇವರ ಗುಣಗಣಗಳನ್ನು ಪ್ರತಿಬಿಂಬಿಸಿ ತೋರಿಸುವುದರಿಂದಲೂ ಅವರ ಮುಖಾಂತರ ದೇವರು ಪ್ರತ್ಯಕ್ಷಪಡುವುದರಿಂದಲೂ ಪ್ರವಾದಿಗಳ ಆವಿರ್ಭಾವವನ್ನು ದೇವರ ಅವತಾರವೆಂದು ಅಲಂಕಾರೋಕ್ತಿಯಲ್ಲಿ ಹೇಳಲ್ಪಟ್ಟಿರುವುದು. ದಿವ್ಯಾತ್ಮರಾದ ಪ್ರವಾದಿಗಳೂ ಋಷಿ ಮುನಿಗಳೂ ತಮ್ಮ ಜೀವನದಲ್ಲಿ ದೇವರ ಸದ್ಗುಣಗಳನ್ನು ಪ್ರತ್ಯಕ್ಷಪಡಿಸಿ ತೋರಿಸುವುದರಿಂದ ಅವರ

ಕುರಿತು ಅವತಾರ ಪುರುಷರು ಎಂದು ಹೇಳಬಹುದಾಗಿದೆ. ಅಂದ ಮಾತ್ರಕ್ಕೆ ಅವರದಾದ ಮನುಷ್ಯತ್ವವು ಅವರಿಗಿಲ್ಲ ವೆಂದೋ ಅವರು ದೇವರೇ ಆಗಿರುವರೆಂದೋ ಅದಕ್ಕೆ ಅರ್ಥವಿಲ್ಲ. ಮಹಾತ್ಮ ಯೇಸುಕ್ರಿಸ್ತರ ಚರಿತ್ರೆಯು ಇದಕ್ಕೆ ಉದಾಹರಣೆಯಾಗಿದೆ. ಮನುಷ್ಯಾತ್ಮರೂ ದಿವ್ಯ ಪ್ರವಾದಿಯೂ ಆಗಿದ್ದ ಅವರಲ್ಲಿ ಕ್ರೈಸ್ತರು ಇಂದು ಕೆಲವು ದೈವಿಕ ಗುಣಗಳನ್ನು ಕಲ್ಪಿಸಿ ದೇವರೊಡನೆಯೆಂ ಬಂತೆಯೇ ಅವರನ್ನೂ ಕರೆದು ಪ್ರಾರ್ಥಿಸುತ್ತಲಿದ್ದಾರೆ. ಇದೇ ರೀತಿ ಹಿಂದುಗಳೂ ಕೂಡಾ ಶ್ರೀ ಕೃಷ್ಣರನ್ನು ದೇವರಾಗಿ ಭಾವಿಸಿ ದೇವರೊಡನೆಯೆಂಬಂತೆಯೇ ಅವ ರೊಡನೆಯೂ ಪ್ರಾರ್ಥಿಸುತ್ತಲಿದ್ದಾರೆ. ನಿಜಸ್ಥಿತಿಯೇ ನೆಂದರೆ, ಶ್ರೀ ಕೃಷ್ಣರು ತಾನು ದೇವರೆಂದು ವಾದಿಸಿರ ಲಿಲ್ಲ. ಅವರು ದೇವರ ಒಬ್ಬ ಪ್ರವಾದಿಯೂ ಮನು ಷ್ಯಾತ್ಮರೂ ಆಗಿದ್ದರು.

ಭಾರತ ದೇಶವು ಅಕ್ರಮ ಮತ್ತು ಅನೀತಿಯಿಂದ ತುಂಬಿ ಹೋಗಿದ್ದ ಒಂದು ಕಾಲದಲ್ಲಿ ಮಹಾತ್ಮಾ ಶ್ರೀ ಕೃಷ್ಣರ ಜನನವಾಯಿತು. ದೈವ ವಿಶ್ವಾಸವು ಜನರ ಹೃದಯಗಳಿಂದ ನಿರ್ಮೂಲನವಾಗಿ, ಆಧ್ಯಾತ್ಮಿಕ ಅಧಃ ಪತನ ಸಂಭವಿಸಿದ ಒಂದು ಕಾಲವಾಗಿತ್ತು ಅದು. ಎಲ್ಲೂ ಅಕ್ರಮ ಮತ್ತು ಭೀತಿ ತುಂಬಿತ್ತು. ಆ ಕಾಲದಲ್ಲಿ ಶ್ರೀ ಕೃಷ್ಣರು ಅವತರಿಸಿ, ದೈವ ವಿಶ್ವಾಸವನ್ನೂ ಮನು ಷ್ಯ ಸಮತ್ವವನ್ನೂ ಉಪದೇಶಿಸಿದರು. ದೇವರು ಒಬ್ಬ ನೆಂದೂ ಮನುಷ್ಯರೆಲ್ಲರೂ ಸಹೋದರರೆಂದೂ ಆ ಮಹಾ ತ್ಮರು ಕಲಿಸಿದರು. ಅಕ್ರಮ ಮತ್ತು ಅನೀತಿಗೆದುರಾಗಿ ಅವರು ಬೆರಳು ತೋರಿಸಿದರು. ಮರ್ಧಿತರ ಮತ್ತು ದ್ರೋಹಿತರ ಸಂಗಡ ಸೇರಿಕೊಂಡು ದ್ರೋಹಿಗಳ ಮತ್ತು ಮರ್ಧಕರಿಗೆದುರಾಗಿ ಆ ಮಹಾತ್ಮರು ಕಾದಾಡಿದರು.

ದುಷ್ಟರಾದ ಕೌರವರಿಗೆ ಸಹಾಯ ಮಾಡಲು ಬಂದು ನೆರೆದ ಸೈನ್ಯ ನಾಯಕರನ್ನೂ ಯುದ್ಧವೀರರನ್ನೂ ಕಂಡು ಅರ್ಜುನನು ರಣರಂಗ ಬಿಟ್ಟು ಓಡಿಹೋಗಲು ಮುಂದಾದಾಗ ಧರ್ಮಕ್ಕಾಗಿ ಯುದ್ಧಮಾಡಿ ವೀರ ಮೃತ್ಯುವನ್ನು ಪಡೆಯಲು ಶ್ರೀ ಕೃಷ್ಣರು ಆತನಿಗೆ ಉಪ ದೇಶಿಸಿದರು. ಯುದ್ಧರಂಗದಲ್ಲಿ ನೆರೆದಿರುವುದು ತನ್ನ ಹಿರಿಯರೂ ಬಂಧುಗಳೂ ಸಹೋದರರೂ ಸ್ನೇಹಿತರೂ ಆಗಿರುವುದರಿಂದ ಮೂರು ಲೋಕದ ಒಡೆತನವು ಲಭಿಸು ವುದಾದರೂ ತಾನು ಯುದ್ಧ ಮಾಡಲಾರೆನೆಂದು ಹೇಳಿ ತನ್ನ ಆಯುಧಗಳನ್ನು ಕೆಳಗಿಟ್ಟ ಅರ್ಜುನನು ರಥದಲ್ಲಿ ಸುಮ್ಮನೆ ಕುಳಿತಾಗ, ಏನೇನು ನಾಶ ಸಂಭವಿಸಿದರೂ ಎಷ್ಟು ಜನ ಮಡಿದು ಹೋದರೂ ಅಧರ್ಮಕ್ಕೆದುರಾಗಿ ಯುದ್ಧ ಮಾಡಲೇಬೇಕೆಂದು ಹೇಳುತ್ತಾ ಶ್ರೀ ಕೃಷ್ಣರು ಅರ್ಜುನನನ್ನು ಯುದ್ಧ ಸನ್ನಾಹಗೊಳಿಸಿದರು. ಅಧ ರ್ಮಿಗಳ ಮುಂದೆ ನಿಷ್ಕ್ರಿಯನಾಗುವುದೂ ಅಧರ್ಮ ವನ್ನು ಎದುರಿಸದಿರುವುದೂ ಒಂದು ಬಗೆಯಲ್ಲಿ ಅದನ್ನು ಅಂಗೀಕರಿಸಿದ್ದಕ್ಕೆ ಸಮವೆಂದು ಅವರು ತಿಳಿದಿದ್ದರು. ದ್ರೋಹಿತರನ್ನು ಪರಮಾತ್ಮನು ಕೈಬಿಡಲಾರನೆಂದೂ, ಎದುರಾಳಿಗಳು ಎಷ್ಟೇ ಬಲಶಾಲಿಗಳಿದ್ದರೂ ಸದ್ಧರ್ಮಿ ಗಳಿಗೆ ವಿಜಯವು ಕಟ್ಟಿಟ್ಟದ್ದೆಂದೂ ಇದರ ಮೂಲಕ ಆ ಮಹಾತ್ಮರು ಒಂದು ಪಾಠವನ್ನು ಕಲಿಸಿವರು.

## ಗೀತೆಯಲ್ಲಿ 'ತೌಹೀದ್' (ದೈವೇಕತ್ವ)

ಭಗವದ್ಗೀತೆಯನ್ನು ಶ್ರದ್ಧೆಯಿಂದ ಪರಿಸುವ ಓರ್ವನಿಗೆ ಆ ಮಹಾಗ್ರಂಥವು ಏಕದೈವ ವಿಶ್ವಾಸವನ್ನು ಬೋಧಿಸುತ್ತದೆಂದು ತಿಳಿದುಕೊಳ್ಳಲು ಪ್ರಯಾಸವಿರ ಲಾರದು. ಶ್ರೀ ಕೃಷ್ಣರು ಭಾರತದಲ್ಲಿ ಉಪದೇಶಿಸಿದ್ದೂ 'ತೌಹೀದ್' (ಏಕದೈವ ತತ್ವ) ಆಗಿತ್ತು. ಏಕದೈವ ಸಿದ್ಧಾಂತವನ್ನು ಪ್ರಬೋಧಿಸುತ್ತಾ ಸರ್ವಶಕ್ತನಾದ ಆ ಒಬ್ಬನೇ ಪರಮಾತ್ಮನಿಗೆ ಶರಣಾಗತನಾಗಲು ಮಹಾತ್ಮಾ ಶ್ರೀ ಕೃಷ್ಣರು ಬೋಧಿಸಿರುವುದನ್ನು ಗೀತೆಯು ಈ ರೀತಿ ಹೇಳುತ್ತದೆ:—

> ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
> ಭ್ರಾಮಯನ್‌ಸರ್ವಭೂತಾನಿಯಂತ್ರಾರೂಢಾನಿಮಾಯಯಾ॥
> ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
> ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್॥

"ಎಲೈ ಅರ್ಜುನ, ಸರ್ವ ಪ್ರಾಣಿಗಳನ್ನೂ ಯಂ ತ್ರಾರೂಢಗಳಾದ ಬೊಂಬೆಗಳಂತೆ ಮಾಯೆಯಿಂದ ತಿರು ಗಿಸುತ್ತಾ ಈಶ್ವರನು ಸರ್ವ ಜೀವರ ಹೃದಯ ಪ್ರದೇಶ ಗಳಲ್ಲಿ ನೆಲೆಸಿರುತ್ತಾನೆ. ಎಲೈ ಅರ್ಜುನ, ಸರ್ವಾತ್ಮನಾ ಅವನನ್ನೇ ಶರಣು ಹೊಂದು. ಅವನ ಅನುಗ್ರಹದಿಂದ ಪರಮ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆ." (ಅಧ್ಯಾಯ 18; ಶ್ಲೋಕ 61, 62)

ಸರ್ವ ಶಕ್ತನೂ ಸರ್ವಜ್ಞನೂ ಆದ ಒಬ್ಬನೇ ಪರಮೇಶ್ವರನಲ್ಲಿ ವಿಶ್ವಾಸವರ್ಪಿಸಿಕೊಂಡು ಅವನಲ್ಲಿ ಮಾತ್ರವೇ ಆಶ್ರಯವನ್ನು ಪಡೆದು ಜೀವಿಸಲು ಶ್ರೀ ಕೃಷ್ಣರು ಉಪದೇಶಿಸಿದ್ದರು ಎಂದು ಇದರಿಂದ ತಿಳಿಯು

ತ್ತದೆ. ಇನ್ನು ಯಾರಾದರೂ ಬಹು ದೈವಾರಾಧಕರೂ ಮೂರ್ತಿ ಪೂಜಕರೂ ಆಗಿರುವರೆಂದಾದರೆ ಅದಕ್ಕೆ ಶ್ರೀ ಕೃಷ್ಣರು ಹೊಣೆಯಲ್ಲ.

ಯುದ್ಧಾನಂತರ ಅವರು ನೀತಿಪೂರ್ವಕವಾದ ರಾಜ್ಯಭಾರವನ್ನು ನಡೆಸಿದರೆಂದೂ ಅವರ ಅಧೀನದಲ್ಲಿ ಶಾಂತಿಯೂ ಸಮಾಧಾನವೂ ನೆಲೆಯಾಗಿತ್ತೆಂದೂ ತಿಳಿದು ಬರುತ್ತದೆ. ಅವರು ಒಂದೆಡೆ ದೈವ ವಿಶ್ವಾಸವನ್ನೂ ಆಧ್ಯಾತ್ಮಿಕತೆಯನ್ನೂ ಪ್ರಬೋಧಿಸಿದರೆ, ಅದರೊಂದಿಗೇ ಮನುಷ್ಯ ಸಮತ್ವವನ್ನೂ ಸಮಭಾವನೆಯನ್ನೂ ಉಪದೇಶಿಸಿದರು. ಗೀತೆಯು ಈ ರೀತಿ ಹೇಳುತ್ತದೆ.

ವಿದ್ಯಾ ವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿ ಚೈವ ಶ್ವಪಾಕೇ ಚ ಪಂಡಿತಾ: ಸಮದರ್ಶಿನಃ॥

"ವಿದ್ಯಾ ವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿ ಮಾಂಸವನ್ನು ತಿನ್ನುವ ಚಂಡಾಲ ಇವರೆಲ್ಲರಲ್ಲೂ ಜ್ಞಾನಿಗಳು ಸಮದರ್ಶಿಗಳಾಗಿರುವರು." (ಅಧ್ಯಾಯ 5; ಶ್ಲೋಕ 18) ಸರ್ವರನ್ನೂ ಸಮತೆಯಿಂದ ಕಾಣಬೇಕೆಂಬ ತತ್ವವು ಮೇಲಿನ ಶ್ಲೋಕದಲ್ಲಿ ಅಡಕವಾಗಿದೆ.

## ಶ್ರೀ ಕೃಷ್ಣ, ಬೆಣ್ಣೆ ಮತ್ತು ಗೋಪಿಕೆಯರು

ಶ್ರೀ ಕೃಷ್ಣರ ಕಾಲದ ನಂತರ ಭಾರತವು ಪುನ: ಅಜ್ಞಾನಾಂಧಕಾರದಲ್ಲಿ ಮುಳುಗಿ ಆ ಮಹಾತ್ಮರ ತತ್ವೋಪದೇಶಗಳನ್ನು ಜನರು ಮರೆಯುವಂತಾಯಿತು. ಅವರ ಪ್ರಬೋಧನೆಗಳೂ ಚರಿತ್ರೆಯೂ ಕ್ರಮೇಣ ಅಸ್ತವ್ಯಸ್ತವಾಗಿ ತಪ್ಪು ತಿಳುವಳಿಕೆಗೆ ವಿಧೇಯವಾಯಿತು. ಶ್ರೀ ಕೃಷ್ಣರು ವಿಷಯಾಸಕ್ತರಾಗಿದ್ದರೆಂದೂ ಅವರು ಬೆಣ್ಣೆಯನ್ನು ಕದ್ದಿದ್ದರೆಂದೂ ಮುಂತಾದ ಕಥೆಗಳು ಪ್ರಚಾರಗೊಂಡವು. ಇಂತಹ ಕಥೆಗಳು ಆ ಮಹಾತ್ಮರ ದಿವ್ಯ ಸ್ಥಾನಕ್ಕೆ ಅನುಯೋಜ್ಯವಲ್ಲವಾದರೂ ಆ ಕಥೆಗಳು ಉಪಮಾಲಂಕಾರದ ಚಿತ್ರ ಭಾಷೆಗಳಾಗಿರುವುದೆಂದು ತಿಳಿಯಬೇಕಾಗಿದೆ. ಶ್ರೀ ಕೃಷ್ಣರು ಬೆಣ್ಣೆಯನ್ನು ಕದ್ದಿರುವರೆಂದು ಹೇಳಲ್ಪಡುತ್ತಿದೆ. ಕಳ್ಳತನವು ಸಣ್ಣದಾದರೂ ದೊಡ್ಡದಾದರೂ ಕಳ್ಳತನವೇ ಅಲ್ಲವೇ ? ಭಾರತದಲ್ಲಿ ಒಂದು ಧಾರ್ಮಿಕ ವಿಪ್ಲವವನ್ನುಂಟುಮಾಡಿದ ಶ್ರೀ ಕೃಷ್ಣರಂತಹ ಒಬ್ಬ ಪ್ರವಾದಿಯ ಕುರಿತು ಅವರು ಕಳ್ಳತನ ನಡೆಸಿದರೆಂದು ಊಹಿಸುವುದೇ ಅಸಾಧ್ಯ. ನಿಜವೇನೆಂದರೆ 'ಬೆಣ್ಣೆ' ಎಂದು ಹೇಳಲ್ಪಟ್ಟಿರುವುದು ಉತ್ತಮವಾದ ಹಾಲನ್ನು ಕಡೆದು ತೆಗೆದ ಸತ್ವ ಅಥವಾ 'ಆಧ್ಯಾತ್ಮಿಕ ಜ್ಞಾನ' ಆಗಿದೆ. ಅವರು ಚಿಕ್ಕಂದಿನಲ್ಲೇ ದಿವ್ಯ ಜ್ಞಾನವನ್ನು ಕರಗತ ಮಾಡಿಕೊಂಡಿದ್ದರು ಎಂದು ಇದರಿಂದ ತಿಳಿದು ಬರುತ್ತದೆ. ಅವರು ಗೋಪಿಕಾ ಸ್ತ್ರೀಯರ ವಸ್ತ್ರವನ್ನು ಅಪಹರಿಸಿ ಅವರನ್ನು ನಗ್ನೆಯರನಾಗಿ ಮಾಡಿದರೆಂದೂ ನಂತರ ಮರದ ಮೇಲಿಂದ ಅದನ್ನು ಅವರಿಗೆ ತೋರಿಸಿ, ಯಾಚಿಸಿದಾಗ ಕೊಟ್ಟರೆಂದೂ ತೋರಿಸುವ ಕೆಲವು ಚಿತ್ರಗಳಿವೆ. ಇಲ್ಲಿ 'ವಸ್ತ್ರ' ಎಂಬುದು ಭಕ್ತಿ ಅಥವಾ ಸತ್ಕರ್ಮವಾಗಿದೆ. ಭಕ್ತಿಯನ್ನು ದೂರವಿರಿಸಿ ಭೌತಿಕತೆಯಲ್ಲಿ ನಗ್ನರಾಗಿ ಮುಳುಗಿರುವ ಜನರಿಗೆ ಶ್ರೀ ಕೃಷ್ಣರು ತನ್ನ ಉನ್ನತವಾದ ಆಧ್ಯಾತ್ಮಿಕ ಸ್ಥಾನದಲ್ಲಿ ಕುಳಿತುಕೊಂಡು ಭಕ್ತಿ ಎಂಬ 'ವಸ್ತ್ರ'ವನ್ನು ತೋರಿಸಿದರು ಎಂಬ ಆಶಯವನ್ನು ನಿರೂಪಿಸುವುದೇ ಈ ಚಿತ್ರದ ಅರ್ಥವಾಗಿದೆ. ಭಕ್ತಿಯನ್ನು ವಸ್ತ್ರವನ್ನಾಗಿ ಉಪಮಿಸಿ ಬರೆದಿರುವುದನ್ನು ಇಸ್ಲಾಮಿಕ ಸಾಹಿತ್ಯಗಳಲ್ಲೂ ಪವಿತ್ರ ಖುರಾನಿನಲ್ಲೂ ಕಾಣಬಹುದು.

ಪ್ರವಾದಿಗಳ ಕಾಲದ ನಂತರ ಅವರ ತತ್ವೋಪದೇಶಗಳೂ ಚರಿತ್ರೆಯೂ ಮಾರ್ಪಾಟಿಗೆ ಗುರಿಯಾಗಿ ಕಟ್ಟುಕಥೆಗಳು ಪ್ರಚಾರಗೊಳ್ಳುತ್ತವೆಂಬುದು ದೌರ್ಭಾಗ್ಯಕರವಾದರೂ ಒಂದು ಚರಿತ್ರ ಸತ್ಯವಾಗಿದೆ. ಹೀಗಾಗಲು ಆ ಪ್ರವಾದಿಗಳ ಅನುಯಾಯಿಗಳಿಗೆ ಅವರೊಡನಿರುವ ಅಮಿತವಾದ ಪ್ರೇಮವೂ ಒಂದು ಕಾರಣವಾಗಿರುವುದೆಂದು ಹೇಳದೆ ನಿರ್ವಾಹವಿಲ್ಲ. ಮಹಾತ್ಮಾ ಯೇಸು ಕ್ರಿಸ್ತರ ಚರಿತ್ರೆಯನ್ನು ನೋಡಿರಿ, ಅವರು ದೇವರೆಂದೋ ದೇವರ ಪುತ್ರನೆಂದೋ ವಾದಿಸಿರಲೇ ಇಲ್ಲ. ತಾನು ಸೃಷ್ಟಿಕರ್ತನೆಂದೋ ಆರಾಧನೆಗೆ ಅರ್ಹನೆಂದೋ ಆ ಮಹಾತ್ಮರು ಹೇಳಿರಲಿಲ್ಲ. ಆದರೂ ಅವರ ಅನುಯಾಯಿಗಳು ಇಂದು ಯೇಸುಕ್ರಿಸ್ತರಲ್ಲಿ ದೈವತ್ವವನ್ನು ಕಲ್ಪಿಸಿ ಅವರನ್ನು ಆರಾಧಿಸುತ್ತಲಿದ್ದಾರೆ. ಹೀಗಿದ್ದರೂ ಹಝ್ರತ್ ಯೇಸುಕ್ರಿಸ್ತರನ್ನು ಮುಸ್ಲಿಮರು ಒಬ್ಬ ಸತ್ಯ ಪ್ರವಾದಿ ಎಂದೇ ನಂಬುತ್ತಾರೆ. ಅವರ ಅನುಯಾಯಿಗಳ ವಿಶ್ವಾಸಗಳು ಏನಿದ್ದರೂ ಆ ಮಹಾತ್ಮರ ಪ್ರವಾದಿತ್ವಕ್ಕೆ ಅದು ಕುಂದನ್ನುಂಟು ಮಾಡುವುದಿಲ್ಲ. ಹಝ್ರತ್ ಉಝೈರ್ ನಬಿ (ಅ), ಹಝ್ರತ್ ಯೂನುಸ್ ನಬಿ (ಅ) ಮೊದಲಾದವರ ಕುರಿತು ಅವರ ಅನುಯಾಯಿಗಳು ತಳೆದಿರುವ ಅಭಿಪ್ರಾಯವು ತಪ್ಪೆಂದು ಪವಿತ್ರ ಖುರ್‌ಆನ್ ಹೇಳಿದೆ

ಯಾದರೂ ಆ ಮಹಾತ್ಮರನ್ನು ಅಲ್ಲಾಹುವಿನ ಸತ್ಯ ಪ್ರವಾದಿಗಳೆಂದೂ ಅವರಲ್ಲಿ ವಿಶ್ವಾಸವರ್ಪಿಸಬೇಕಾದುದು ಖುರ್‌ಆನಿನ ಅನುಯಾಯಿಗಳ ಧರ್ಮವೆಂದೂ ಆ ದಿವ್ಯ ಗ್ರಂಥವು ಹೇಳಿದೆ. ಹಝ್ರತ್ ಶ್ರೀ ಕೃಷ್ಣರ ಕುರಿತು ಅವರು ಒಬ್ಬ ದೈವನಿಯುಕ್ತ ಪ್ರವಾದಿಯಾಗಿರುವರೆಂದು ಖುರ್‌ಆನಿನ ವಚನಗಳಿಂದ ತಿಳಿದುಬರುತ್ತಿರುವಾಗ, ಕೃಷ್ಣ ಎಂಬ ಹೆಸರಿನ ಒಬ್ಬ ಪ್ರವಾದಿಯು ಭಾರತದಲ್ಲಿ ಜನ್ಮವೆತ್ತಿರುವರೆಂದು ಇಸ್ಲಾಂ ಮತ ಸ್ಥಾಪಕರಾದ ಮುಹಮ್ಮದ್ ಪೈಗಂಬರ್‌ರು ಹೆಸರೆತ್ತಿ ಹೇಳಿರುವಾಗ ಆ ಮಹಾತ್ಮರನ್ನು ಪ್ರವಾದಿ ಅಲ್ಲವೆಂದೂ, ಒಬ್ಬ ಸತ್ಪುರುಷ ಕೂಡಾ ಅಲ್ಲವೆಂದು ಹೇಳುವುದು ಇಸ್ಲಾಮಿಕ ಅಧ್ಯಾಪನಗಳಿಗೆ ತೀರಾ ವಿರುದ್ಧವಾಗಿದೆ.

ಇಂಡಿಯಾದಲ್ಲಿ ಬಂದಿರುವ ಅವತಾರ ಪುರುಷರಲ್ಲೂ ಧರ್ಮ ಮಾರ್ಗದರ್ಶಕರಲ್ಲೂ ವಿವಿಧ ವೈಶಿಷ್ಟ್ಯಗಳಿಂದ ಕೂಡಿದ ಅಗ್ರಗಣ್ಯರಾದ ಒಬ್ಬ ಮಹಾತ್ಮರಾಗಿದ್ದರು ಹಝ್ರತ್ ಶ್ರೀ ಕೃಷ್ಣಜೀ. ಪವಿತ್ರ ಖುರಾನಿನ ಅಧ್ಯಾಪನೆಗಳ ಆಧಾರದಿಂದಲೂ, ಈ ಯುಗದಲ್ಲಿ ಜನ್ಮವೆತ್ತಿದ ದಿವ್ಯ ಪುರುಷರಾದ ಹಝ್ರತ್ ಅಹ್ಮದ್ ಅವರ ಹೇಳಿಕೆಗಳಿಂದಲೂ ಹಝ್ರತ್ ಶ್ರೀ ಕೃಷ್ಣರನ್ನು ಅಲ್ಲಾಹುವಿನ ಒಬ್ಬ ಸತ್ಯ ಪ್ರವಾದಿಯೆಂದು ಸರ್ವಾತ್ಮನಾ ನಂಬಿ ಗೌರವಿಸುವ ಅಹ್ಮದಿಯನಾದ ನನಗೆ ಅವರ ಮೇಲಿರುವ ಆತ್ಮಾರ್ಥವಾದ ಪ್ರೇಮಾದರಗಳನ್ನು ಹಿಂದೆ ಓರ್ವ ಸಾಹಿತಿ ಪ್ರಕಟಿಸಿದ ಅದೇ ರೀತಿಯಲ್ಲಿ ಪ್ರಕಾಶಿಸಿಕೊಳ್ಳುತ್ತೇನೆ:

"ಸಾಧು ಗೋಪಿಕೆಯರ ಜೀವಾತ್ಮಗಳನ್ನು ತಂಪಾಗಿಸಿದ ಮಹಾತ್ಮಾ! ತಮಗೆ ಶಾಂತಿಯಿರಲಿ. ಯಶಸ್ಸೂ ಕೀರ್ತಿಯೂ ಇಲ್ಲದವರಿಗೆ ಖ್ಯಾತಿಯನ್ನೂ ಪ್ರಸಿದ್ಧಿಯನ್ನೂ ಇತ್ತ ತಮಗೆ ಭವ್ಯವಾಗಲಿ. ದರಿದ್ರರಾದ ಗೋಪಾಲಕಿಯ ಅಂಗಳದಲ್ಲಿ ಧನಾಢ್ಯರ ಹಂಸತೂಲಿಕಾ ಮಂಚಕ್ಕಿಂತಲೂ ಸುಖದಲ್ಲಿ ಕಾಲುಚಾಚಿ ನಿದ್ರಿಸುತ್ತಿರುವ ಪ್ರಭೋ! ತಮಗೆ ಸಾವಿರ ಸಾವಿರ ವಂದನೆಗಳು"

—೦—೦—೦—೦—

# ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಸಂಪೂರ್ಣ ಬೆಂಬಲ

ಕೆಲವು ದಿನಗಳ ಮೊದಲು ಭಾರತದ ರಾಜಕೀಯ ಸ್ಥಿತಿಗತಿಗಳು ವಿಷಮಗೊಂಡುದುದರಿಂದ ಪ್ರಧಾನ ಮಂತ್ರಿಯವರ ಸಲಹೆಯ ಮೇರೆಗೆ ರಾಷ್ಟ್ರಪತಿ ರಾಜ್ಯದಲ್ಲೆಡೆ ತುರ್ತು ಪರಿಸ್ಥಿತಿಯನ್ನು ಘೋಷಿಸಿರುವರಷ್ಟೇ. ಇದರ ಕುರಿತು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ರಾಷ್ಟ್ರಕ್ಕೆ ನೀಡಿದ ಸಂದೇಶದಲ್ಲಿ, ಜನಾಧಿಪತ್ಯದ ಹೆಸರು ಹೇಳಿ ಪ್ರತಿಪಕ್ಷದವರು ಜನಾಧಿಪತ್ಯವನ್ನು ಅಡಿಮೇಲು ಮಾಡಲು ಶ್ರಮಿಸಿದ ಕಾರಣ ಶಾಂತಿ ಭಂಗವುಂಟಾದುದರಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಬೇಕಾಯಿತೆಂದು ವ್ಯಕ್ತಪಡಿಸಿದರು. ಹೇಗಿದ್ದರೂ ತುರ್ತು ಪರಿಸ್ಥಿತಿ ಘೋಷಿಸಲ್ಪಟ್ಟ ನಂತರ ರಾಷ್ಟ್ರದ ಸ್ಥಿತಿಯು ತುಂಬಾ ಭದ್ರವಾಗಿದೆಯೆಂಬುದು ಆಶ್ವಾಸಜನಕವಾಗಿದೆ ಇದರೊಂದಿಗೆ ರಾಜ್ಯದಲ್ಲಿ ತಾಂಡವವಾಡುತ್ತಿದ್ದ ಅಶಾಂತಿ, ಬೆಲೆಯೇರಿಕೆ, ವಿಷಮಾವಸ್ಥೆ ಮುಂತಾದುವುಗಳನ್ನು ಹೋಗಲಾಡಿಸಲು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ನಿರ್ದೇಶಿಸಿದ ಇಪ್ಪತ್ತಂಶ ಕಾರ್ಯಕ್ರಮವು ಜನರಲ್ಲಿ ಸಮಾಧಾನವನ್ನುಂಟುಮಾಡಿದೆ. ಆವಶ್ಯ ಸಾಮಾಗ್ರಿಗಳ ಕ್ರಮಾತೀತವಾದ ಬೆಲೆ ಕಡಿಮೆಗೊಳ್ಳುವ ಲಕ್ಷಣಗಳು ತೋರಿಬರುತ್ತಿವೆ. ಸರಕಾರೀ ನೌಕರರಲ್ಲಿ ಜವಾಬ್ದಾರಿಕೆಯ ಪ್ರಜ್ಞೆ ವರ್ಧಿಸಿದೆ. ಸಮಾಜ ದ್ರೋಹಿಗಳಾದ ವ್ಯಕ್ತಿಗಳಿಗೂ ಸಂಘಟನೆಗಳಿಗೂ ಕಡಿವಾಣ ಹಾಕಿದುದರಿಂದ ಸಮೂಹ ಜೀವನದಲ್ಲಿ ಭದ್ರತೆಯುಂಟಾಗಿದೆ. ಪ್ರಧಾನ ಮಂತ್ರಿಯ ಈ ಹೆಜ್ಜೆಯನ್ನು ಅಹ್ಮದಿಯಾ ಜಮಾಅತ್ ಮುಕ್ತಕಂಠವಾಗಿ ಹೊಗಳುವುದರೊಂದಿಗೆ ಖಾದಿಯಾನಿನ ಕೇಂದ್ರ ಅಹ್ಮದಿಯಾ ಸಂಘಟನೆಯೂ ರಾಷ್ಟ್ರದಲ್ಲೆಲ್ಲೂ ವ್ಯಾಪಿಸಿರುವ ಶಾಖೆಗಳೂ ಪ್ರಧಾನ ಮಂತ್ರಿಗೆ ಈ ಕಾರ್ಯದಲ್ಲಿ ಸಂಪೂರ್ಣ ಬೆಂಬಲವನ್ನು ವಾಗ್ದಾನ ಮಾಡುತ್ತವೆ. ಅಹ್ಮದಿಯಾ ಜಮಾಅತ್ ಶಾಂತಿ ಸಮಾಧಾನವನ್ನು ಕಾಂಕ್ಷಿಸುವ ಒಂದು ಮತ ಸಂಘಟನೆಯಾಗಿದೆ.

# ಘಾನಾದಲ್ಲಿ ಅಹ್ಮದಿಯಾ ಸಮ್ಮೇಳನ

ಘಾನಾ ಅಹ್ಮದಿಯಾ ಸಂಘಟನೆಯ 49ನೇ ವಾರ್ಷಿಕ ಸಮ್ಮೇಳನವು ಸಾಲ್ಟ್‌ಪೋಂಡಿನಲ್ಲಿ ನಡೆಯಿತು. ರಾಜ್ಯದ ವಿವಿಧ ಕಡೆಗಳಿಂದ 12000 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. 1921ನೇ ಇಸವಿಯಲ್ಲಿ ಹಜ್ರತ್ ಮೌಲಾನಾ ಅಬ್ದುರ್ರಹೀಂ ನಯ್ಯರ್ ಮುಖಾಂತರ ಸ್ಥಾಪಿತವಾದ ಗೋಲ್ಡ್ ಕೋಸ್ಟ್ ಅಹ್ಮದಿಯಾ ಜಮಾಅತ್ ಇಂದು ಲಕ್ಷಗಟ್ಟಲೆ ಭಕ್ತರನ್ನೊಳಗೊಂಡ ಒಂದು ದೊಡ್ಡ ಸಂಘಟನೆಯಾಗಿ ರೂಪುಗೊಂಡಿರುತ್ತದೆ.

ಘಾನಾ ಸೆಂಟ್ರಲ್ ರೀಜಿನಲ್ ಕಮಿಷನರ್ ಲೆಫ್ಟಿನೆಂಟ್ ಕರ್ನಲ್ ಇ. ಎ. ಬೇಡು ಸಮ್ಮೇಳನದ ಮುಖ್ಯಾತಿಥಿಯಾಗಿ ಭಾಗವಹಿಸಿದರು. ವಿವಿಧ ರೀಜನುಗಳಲ್ಲಿ ದೀರ್ಘಕಾಲ ಕಮಿಷನರಾಗಿ ಸೇವೆಯನ್ನರ್ಪಿಸಿದ ಲೆ॥ ಬೇಡು ಅಹ್ಮದಿಯಾ ಸಂಘಟನೆಯ ಕುರಿತು ನಿಕಟ ಪರಿಚಯಿರುವ ಮಹಾನುಭಾವರಾಗಿದ್ದಾರೆ. ತನಗೆ ನೀಡಿದ ಮಾನಪತ್ರಕ್ಕೆ ಉತ್ತರವಾಗಿ ಮಾಡಿದ ಇಂಗ್ಲೀಷ್ ಭಾಷಣದಲ್ಲಿ ಅವರು ಅಹ್ಮದಿಯಾ ಸಂಘಟನೆಯ ನಿಸ್ವಾರ್ಥ ಸೇವೆಗಳನ್ನೂ ರಾಷ್ಟ್ರ ನಿರ್ಮಾಣದಲ್ಲಿ ಅವರು ವಹಿಸುತ್ತಿರುವ ಮಹತ್ವಾದ ಪಾಲನ್ನೂ ಕುರಿತು ಮುಕ್ತಕಂಠವಾಗಿ ಹೊಗಳಿದರು. ಅಹ್ಮದಿಯಾ ಜಮಾಅತಿನ ಸಮ್ಮೇಳನದಲ್ಲಿ ಭಾಗವಹಿಸಿ ಆತ್ಮಿಕಾನುಗ್ರಹಗಳಲ್ಲಿ ಪಾಲುಗೊಳ್ಳಲು ಸಾಧ್ಯವಾದುದರಿಂದ ತನಗೆ ಅತ್ಯಂತ ಹರ್ಷವಾಯಿತೆಂದು ಅವರು ನುಡಿದರು. ಅವರು ಮುಂದುವರಿಸಿದರು: ಘಾನಾದಲ್ಲಿ ಮತಧರ್ಮದ ಸ್ಥಾಪನಕ್ಕಾಗಿಯೂ ಬಾಳ್ವಿಕೆಗಾಗಿಯೂ ಅಹ್ಮದಿಯಾ ಸಂಘಟನೆಯು ಸ್ತುತ್ಯರ್ಹವಾಗಿ ಪ್ರವರ್ತಿಸುತ್ತದೆ. ಅಹ್ಮದಿಯಾ ಜಮಾಅತಿನ ಆದರ್ಶತೆ ಹಾಗೂ ಶಾಂತ ರೀತಿಯ ಪ್ರಚಾರಣಾ ಕಾರ್ಯಕ್ರಮಗಳ ಕಾರಣ ಹೆಚ್ಚೆಚ್ಚು ಜನರು ಇಂದು ಅದರೆಡೆಗೆ ಆಕರ್ಷಿತರಾಗಿದ್ದಾರೆ. ಅಲ್ಪ ಕಾಲದೊಳಗೆ ಕಠಿಣ ಪರೀಕ್ಷೆಗಳನ್ನೂ ಉಗ್ರ ಶತ್ರುತ್ವವನ್ನೂ ಎದುರಿಸಿ ಅವರು ಮುನ್ನೇರಿದರು. ಘಾನಾದಲ್ಲಿ ಲಕ್ಷಗಟ್ಟಲೆ ಜನರನ್ನು ಒಟ್ಟುಗೂಡಿಸಲು ಅವರಿಗೆ ಸಾಧ್ಯವಾಗಿದೆ.''

ಘಾನಾದಲ್ಲಿ ಅಹ್ಮದಿಯಾ ಸಂಘಟನೆಗೆ ಒಂದು ಉಜ್ವಲ ಚರಿತ್ರೆ ಇದೆಯೆಂದು ಲೆ॥ ಬೇಡು ಪ್ರಸ್ತಾಪಿಸಿದರು. "ಧಾರಾಳ ಹಣವನ್ನು ವ್ಯಯಿಸಿ ಅವರು ರಾಜ್ಯದಲ್ಲೆಲ್ಲಾ ಶಾಲೆಗಳನ್ನೂ ಕಾಲೇಜುಗಳನ್ನೂ ಆಸ್ಪತ್ರೆಗಳನ್ನೂ ಸ್ಥಾಪಿಸಿದರು. ಈ ರೀತಿಯ ಸೇವೆಗಳ ಕಾರಣದಿಂದ ಅಹ್ಮದಿಯಾ ಸಂಘಟನೆಯನ್ನು ಜನರು ಆತ್ಯಾದರತೆಯಿಂದ ವೀಕ್ಷಿಸುತ್ತಾರೆ.''

ಧಾರ್ಮಿಕ ಪುನರುದ್ಧಾರಣ ಪ್ರವರ್ತನೆಗಳೊಂದಿಗೆ ರಾಷ್ಟ್ರ ನಿರ್ಮಾಣ ಪ್ರವರ್ತನೆಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ರೀಜನಲ್ ಕಮಿಷನರ್ ಕೋರಿದರು.

---

ಜಮಾಅತಿಗೆ ರಾಜಕೀಯವಾಗಿ ಯಾವುದೇ ಬಂಧವಿಲ್ಲ. ಸಂಘಟನೆಯ ಸದಸ್ಯರು ಸಮಾಧಾನದ ಜೀವನವನ್ನು ನಡೆಸಲಿಕ್ಕೂ ಸರಕಾರದೊಂದಿಗೆ ಸಹಕರಿಸಲಿಕ್ಕೂ, ಗಲಾಟೆ, ಮುಷ್ಕರ, ಹರತಾಳ ಮೊದಲಾದುವುಗಳಲ್ಲಿ ಭಾಗವಹಿಸದಿರಲಿಕ್ಕೂ ನಿರ್ದೇಶಿಸಲ್ಪಟ್ಟವರಾಗಿದ್ದಾರೆ. ರಾಷ್ಟ್ರದಲ್ಲಿ ಸಂಪೂರ್ಣ ಸಮಾಧಾನವನ್ನೂ ಸುರಕ್ಷಿತತೆಯನ್ನೂ ಸುದೃಢಗೊಳಿಸಲು ಆವಶ್ಯಕವಾದ ಎಲ್ಲಾ ಚಟುವಟಿಕೆಗಳಲ್ಲೂ ಸರಕಾರದೊಂದಿಗೆ ಪರಿಪೂರ್ಣವಾಗಿ ಸಹಕರಿಸಬೇಕೆಂಬುದು ಸಂಘಟನೆಯು ಸದಸ್ಯರಿಗೆ ನೀಡಿದ ಪಾಠವಾಗಿದೆ. ಒಟ್ಟಾರೆ ಅಹ್ಮದಿಯಾ ಜಮಾಅತಿನ ಸದಸ್ಯರು ಈ ಪಾಠ ಪದ್ಧತಿಗಳನ್ನು ಪೂರ್ಣ ರೀತಿಯಲ್ಲಿ ಕಾರ್ಯರೂಪದಲ್ಲಿ ತಂದು ಸಮಾಧಾನ ಕಾಂಕ್ಷಿಗಳೂ ರಾಷ್ಟ್ರದೊಡನೆ ಸಹಕಾರವಿರುವ ಉತ್ತಮ ಪೌರರೂ ಎಂಬ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ. ರಾಷ್ಟ್ರದ ಭದ್ರತೆಯೇ ಪ್ರತಿಯೊಬ್ಬರ ಭದ್ರತೆಯಾಗಿದೆಯೆಂಬುದನ್ನು ಅವರು ತಿಳಿದಿರಬೇಕಾಗಿದೆ.

—ಜನರಲ್ ಸೆಕ್ರೆಟರಿ
ಕೇಂದ್ರ ಅಹ್ಮದಿಯಾ ಸಂಘಟನೆ, ಖಾದಿಯಾನ್.

# ಲಂಡನಿನಲ್ಲಿ ಯು. ಕೆ. ಅಹ್ಮದಿಯಾ ಸಮ್ಮೇಳನ

ಲಂಡನ್ – ಆಗಸ್ಟ್ 25, 26 ದಿನಾಂಕಗಳಲ್ಲಿ ಲಂಡನಿನ ರೋಹಂಟನ್ ಮೈದಾನದಲ್ಲಿ 11ನೇ ಯು. ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನವನ್ನು ಅಹ್ಮದಿಯಾ ಸಂಘಟನೆಯ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಅವರು ಉದ್ಘಾಟಿಸಿದರು.

ಕಳೆದ 85 ವರ್ಷಗಳಿಂದ ಲೋಕವಲ್ಲಿ ಕ್ರಮಬದ್ಧವಾದ ಒಂದು ದೊಡ್ಡ ಪರಿವರ್ತನೆಯುಂಟಾಗುತ್ತಿದೆಯೆಂದೂ ಸದ್ಯೋಭವಿಷ್ಯದಲ್ಲೇ ಅದು ಭೂಗೋಳವನ್ನೆಲ್ಲಾ ವ್ಯಾಪಿಸುವುದೆಂದೂ ಹಝ್ರತ್ ಸಾಹೇಬರು ಹೇಳಿದರು. ಪೈಗಂಬರರ ಭವಿಷ್ಯನುಡಿಯ ಪ್ರಕಾರ ಉದ್ಭವಿಸಿದ ಆ ಒಂಟಿ ಶಬ್ದವು ಇಂದು ದಿಗಂತದಲ್ಲೆಲ್ಲಾ ಪ್ರತಿಧ್ವನಿಸುತ್ತಿದೆ. ವಿವಿಧ ಜನವಿಭಾಗಗಳೆಡೆಯಲ್ಲಿ ದೈವೇಕತ್ವದ ಕಡೆಗೆ ಒಂದು ಮುನ್ನಡೆಯು ತೋರಿಬರಲು ಆರಂಭವಾಗಿದೆ.

ಸೌಮ್ಯಭಾವ, ಸದ್‌ಸ್ವಭಾವ, ಪ್ರಾರ್ಥನೆ ಮುಖಾಂತರ ಈ ಬದಲಾವಣೆ ಸಾಧ್ಯವಾಯಿತೆಂದೂ ಅದರ ಮುಖಾಂತರವೇ ಅದು ವ್ಯಾಪಿಸುವುದೆಂದೂ ಅವರು ಹೇಳಿದರು.

ಲಂಡನ್ ಹೊರತು ಸೌತಾಲ್, ಕ್ರೇಡನ್, ಬಾರ್ಕಿಂಗ್, ಲೇಟನ್‌ಸ್ಟನ್, ಮಾಂಚೆಸ್ಟರ್, ಬರ್ಮಿಂಗಾಮ್, ಬ್ರೇಕ್‌ಬನ್, ಬ್ರೆಡ್‌ಫೋರ್ಡ್, ಲೀಡ್ಸ್, ವೇಕ್‌ಫೀಲ್ಡ್, ಫ್ರುನ್‌ಸ್ಟನ್, ಗ್ಲಾಸ್ಗೋ, ಎಂಬೀಯು. ಕೆ.ಯ ವಿವಿಧ ಭಾಗಗಳಿಂದಲೂ ನೈಜೀರಿಯಾ, ಸಿರಾಲಿಯೋನ್, ಗಾಂಬಿಯಾ, ಫ್ರಾನ್ಸ್, ಹಾಲೆಂಡ್, ಪ. ಜರ್ಮನಿ, ಸ್ಪೈಯ್ನ್, ಮೊದಲಾದೆಡೆಗಳಿಂದಲೂ ಅಹ್ಮದಿಯಾ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪಶ್ಚಿಮ ಜರ್ಮನಿಯ ಹಿದಾಯತುಲ್ಲಾ ಜಷ್, ಫ್ರಾನ್ಸಿನ ಅಹ್ಮದ್ ಲಾನ್ವೆ, ಡೆನ್ಮಾರ್ಕಿನ ಸ್ಪಿಂಟ್ ಹೆನ್ಸನ್, ಮಿಸ್ಸಿಸ್ ಮುನೀರ್‌ತಯ್ಯಿಬ, ಲಂಡನಿನ ನಾಸಿರ್ ಸ್ಕೂನರ್ ಎಂಬವರು ಹೊಸತಾಗಿ ಇಸ್ಲಾಂ ಮತವನ್ನು ಆಶ್ಲೇಷಿಸಿದವರಾಗಿದ್ದಾರೆ.

ಕೋಪೆನ್‌ಹೇಗನ್ ನುಸ್ರತ್ ಜಹಾನ್ ಮಸೀದಿಯ ಇಮಾಂ ಮೌಲಾನಾ ಕಮಾಲ್ ಯೂಸುಫ್, ಪ್ರೊಫೆಸರ್ ಡಾ। ಅಬ್ದುಸಲಾಂ, ಲಂಡನ್ ಮಸೀದಿಯ ಇಮಾಂ ಮೌಲಾನಾ ಬಶೀರ್ ಅಹ್ಮದ್ ರಫೀಕ್ ಮೊದಲಾದವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದರು. ಸರ್ ಮುಹಮ್ಮದ್ ಝಫರುಲ್ಲಾ ಖಾನ್, ಬಶೀರ್ ಅಹ್ಮದ್ ಓರ್ಚರ್ಡ್, ಇಲ್ಯಾಸ್ ಖಾನ್, ಮೌಲಾನಾ ಅಮಾನುಲ್ಲಾ ಖಾನ್, ಸ್ಪಿಂಟ್ ಹೆನ್ಸನ್, ಹಿದಾಯತುಲ್ಲಾ ಜಷ್, ಮುಬಾರಕ್ ಅಹ್ಮದ್ ಸಾಖೀ, ಮುನೀರುದ್ದೀನ್ ಶಮ್ಸ್ ಮೊದಲಾದವರು ವಿವಿಧ ವಿಷಯಗಳ ಕುರಿತು ಭಾಷಣವಿತ್ತರು. ಹಝ್ರತ್ ಸಾಹೇಬರ ಪ್ರಾರ್ಥನೆಯೊಂದಿಗೆ ಸಮ್ಮೇಳನವು ಸಮಾರೋಪಗೊಂಡಿತು. ಮಹಿಳಾ ಸಮ್ಮೇಳನ ಸಹ ಜರಗಿತು.

## ಅಹ್ಮದಿಯಾ ಶತಾಬ್ಧಿ ಕಾರ್ಯಕ್ರಮ: ಯುರೋಪಿನಲ್ಲಿ 5 ಮಸೀದಿಗಳು. ಸ್ವೀಡನಿನಲ್ಲಿ ಒಂಡನೆಯ ಮಸೀದಿಗೆ ಅಸ್ತಿವಾರ ಹಾಕಲಾಯಿತು.

ಸ್ವೀಡನಿನಲ್ಲಿ ಒಂದನೆಯ ಅಹ್ಮದಿಯಾ ಮಸೀದಿಯ ಶಿಲಾ ಸ್ಥಾಪನೆಯನ್ನು ಗೋಟನ್‌ಬರ್ಗಿನಲ್ಲಿ ಅಹ್ಮದಿಯಾ ಸಂಘಟನೆಯ ಮೂರನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್‌ರವರು ಕಳೆದ ಸಪ್ಟೆಂಬರ್ 27ನೇ ದಿನಾಂಕ ಬುಧವಾರದಂದು ಪೂರ್ವಾಹ್ನ 11–15ಕ್ಕೆ ಭಕ್ತಿನಿರ್ಭರವಾದ ಪ್ರಾರ್ಥನೆಗಳ ಮಧ್ಯೆ ನಿರ್ವಹಿಸಿದರು.

ಅಹ್ಮದಿಯಾ ಶತಕಜುಬಿಲಿ ಕಾರ್ಯಕ್ರಮದ ಅಂಗವಾಗಿ ಯುರೋಪಿನಲ್ಲಿ ಸ್ಥಾಪಿಸಲು ಯೋಜಿಸಲಾದ ಕನಿಷ್ಟ ಪಕ್ಷ 5 ಮಸೀದಿಗಳಲ್ಲಿ ಇದು ಒಂದನೆಯದಾಗಿದೆಂದು ಹಝ್ರತ್ ಸಾಹೇಬರು ನುಡಿದರು.

ಚಿಕಿತ್ಸೆಗಾಗಿ ಲಂಡನಿನಲ್ಲಿ ವಾಸಿಸುತ್ತಿರುವ ಹಝ್ರತ್ ಸಾಹೇಬರು ಸಪ್ಟೆಂಬರ್ 25ರಂದು ಸಪರಿವಾರ ಲಂಡನಿನಿಂದ ಹೊರಟು ಗೋಟನ್‌ಬರ್ಗ್ ತಲಪಿದರು. ಪತ್ನಿ ಹಝ್ರತ್ ಮನ್ಸೂರಾ ಬೇಗಂ, ಲಂಡನ್ ಮಸೀದಿಯ ಇಮಾಂ ಮೌಲಾನಾ ಬಶೀರ್ ಅಹ್ಮದ್ ರಫೀಕ್, ಸ್ವೀಡನ್ ಮಿಷನರಿ ಮೌಲಾನಾ ಕಮಾಲ್ ಯೂಸುಫ್ ಮೊದಲಾದವರ ಸಹಿತ ಯುರೋಪಿನ ಎಲ್ಲಾ ಅಹ್ಮ

ದಿಯಾ ಮಿಷನರಿಗಳು ಆ ಸಂದರ್ಭದಲ್ಲಿ ಸನ್ನಿಹಿತರಾಗಿದ್ದರು. ಯುರೋಪಿನ ನಾನಾ ಭಾಗಗಳಲ್ಲಿರುವ ಹಾಗೂ ಸ್ಕ್ಯಾಂಡಿನೇವಿಯದ ಅಹ್ಮದಿಯರು ಭಾಗವಹಿಸಿದ್ದರು.

ಅಹ್ಮದಿಯಾ ಸಂಘಟನೆ ಯುರೋಪಿನ ಆರು ಪ್ರಧಾನ ಕೇಂದ್ರಗಳಲ್ಲಿ ಇಷ್ಟರಲ್ಲೇ ಮಸೀದಿಗಳನ್ನು ನಿರ್ಮಿಸಿದೆ. ಲಂಡನ್, ಹೇಗ್, ಫ್ರಾಂಕ್‌ಫರ್ಟ್, ಹಂಬರ್ಗ್ ಝೂರಿಕ್, ಕೋಪನ್‌ಹೇಗನ್ ಎಂಬೀ ಸ್ಥಳಗಳಲ್ಲಿ ಅವು ಸ್ಥಾಪಿಸಲ್ಪಟ್ಟಿವೆ.

•••••••

## ರಮ್ಜಾನ್ ಮತ್ತು ಈದುಲ್ ಫಿತರ್‌ನ ಕುರಿತು ಬಿ. ಬಿ. ಸಿ. ಯಿಂದ ಪ್ರಸಾರ

ಸಪ್ಟಂಬರ್ 28ರಂದು ಹಾಗೂ ಒಕ್ಟೋಬರ್ 12ರಂದು ಅಪರಾಹ್ನ 7-10ಕ್ಕೆ ಕ್ರಮಾನುಸಾರ ರಮ್ಜಾನಿನ ಮಹತ್ವ ಹಾಗೂ ಈದುಲ್‌ಫಿತರ್‌ನ ಕುರಿತು ಅಹ್ಮದಿಯಾ ಮಿಷನರಿ ಜನಾಬ್ ಶರೀಫ್ ಅಹ್ಮದ್ ಅಮಿನಿಯವರು ಮಾಡಿದ ಭಾಷಣವು ಬಿ ಬಿ. ಸಿ. ರೇಡಿಯೋ ನಿಲಯದಿಂದ ಪ್ರಸಾರಗೊಂಡಿತು.

## ಆಲ್ ಇಂಡಿಯಾ ರೇಡಿಯೋ ಪೋರ್ಟ್ ಬ್ಲೇರ್ (ಅಂಡಮಾನ್)ನಿಂದ ಅಹ್ಮದಿಯಾ ಮಿಷನರಿಯ ಭಾಷಣ

ಕಳೆದ ಈದುಲ್ ಫಿತರ್ ದಿನದಂದು ಪೋರ್ಟ್ ಬ್ಲೇರ್‌ನಲ್ಲಿರುವ ಅಹ್ಮದಿಯಾ ಮಸೀದಿಯಲ್ಲಿ ನಡೆದ ಈದ್ ಕಾರ್ಯಕ್ರಮವನ್ನು ಆಲ್ ಇಂಡಿಯಾ ರೇಡಿಯೊದ ಅಲ್ಲಿನ ಶಾಖೆಯು ರಿಕಾರ್ಡು ಮಾಡಿತು. ಈದ್ ಪ್ರಾರ್ಥನೆಯ ನಂತರ ಅಲ್ಲಿನ ಮಿಷನರಿ ಜನಾಬ್ ಯಂ. ಅಬ್ದುಲ್ ಸಲಾಮ್ ಅವರು ಈದುಲ್ ಫಿತರ್‌ನ ಮಹತ್ವ ಹಾಗೂ ತತ್ವಗಳ ಕುರಿತು ಅರ್ಧ ಗಂಟೆಯ ಕಾಲ ಖುತುಬಾ ಭಾಷಣ ಮಾಡಿದ್ದರು. ಅದನ್ನು ಆಲ್ ಇಂಡಿಯಾ ರೇಡಿಯೋ ಅದೇ ದಿನ ರಾತ್ರೆ 9 ಘಂಟೆಯಿಂದ 9½ಯ ತನಕ ಪ್ರಸಾರ ಮಾಡಿತು. ಅದರ ನಂತರ ಸಹ ಅದನ್ನು ಎರಡು ಬಾರಿ ಪ್ರಸಾರ ಮಾಡಲಾಯಿತು.

ಈದ್ ದಿನದಂದು ಅಬ್ದುಸಲಾಮರ ಆಮಂತ್ರಣದ ಮೇರೆಗೆ ಓರ್ವ ಪಾದ್ರಿ, ಹಲವು ಮುಸ್ಲಿಮರು ಹಾಗೂ ಮುಸ್ಲಿಮೇತರರು ಆಗಮಿಸಿದ್ದರು. ಈದ್ ಪ್ರಾರ್ಥನೆ ಹಾಗೂ ಖುತುಬಾದ ನಂತರ ಅವರನ್ನು ಯೋಗ್ಯರೀತಿಯಲ್ಲಿ ಸತ್ಕರಿಸಲಾಯಿತು. ಅದರ ಬಳಿಕ ಅಹ್ಮದಿಯಾ ಸಂಘಟನೆಯ ಉದ್ದೇಶ ಲಕ್ಷ್ಯಗಳ ಕುರಿತು ಅವರಿಗೆ ವಿವರಿಸಲಾಯಿತು.

---

## ಸಂಪಾದಕರಿಗೆ ಪತ್ರ

ಮಾನ್ಯರೆ,

ನೀವು ಅತ್ಯಂತ ವಿಶ್ವಾಸಪಿಟ್ಟು ಕಳುಹಿಸಿದ 'ಯುಗರಶ್ಮಿ' ಪತ್ರಿಕೆ ತಲುಪಿದೆ. ಇಸ್ಲಾಂನ ಯಥಾರ್ಥ ಪರಿಚಯಕ್ಕಾಗಿ ಇಂಥದೊಂದು ಪತ್ರಿಕೆಯ ಅಗತ್ಯ ಬಹುಕಾಲದಿಂದ ಇತ್ತು. ನೀವು ಆ ಕೊರತೆಯನ್ನು ಹೋಗಲಾಡಿಸಿ ಅಭಿನಂದನೆಗೆ ಪಾತ್ರರಾಗಿದ್ದೀರಿ, ಸಂತೋಷ. ಕಳೆದ ನೂರಾರು ವರ್ಷಗಳಿಂದ ಇಸ್ಲಾಂ ಜನಾಂಗಕ್ಕೆ ಸೇರಿದ ಲಕ್ಷಾಂತರ ಜನ ಕನ್ನಡ ನಾಡಿನ ಮಕ್ಕಳಾಗಿ ಬೆರೆತು ಬಾಳುತ್ತಾ ಬಂದಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಅವರ ಆಚಾರ ವಿಚಾರ ಸಂಸ್ಕೃತಿಗಳ ಮುಖವಾಣಿಯಾಗಿ ಕನ್ನಡದಲ್ಲೊಂದು ಪತ್ರಿಕೆ ಇರಬೇಕಾದುದು ಉಚಿತ. ಈ ಔಚಿತ್ಯವನ್ನು ನೀವು ಮನಗಂಡಿದ್ದೀರಿ... ...

ಪತ್ರಿಕೆಗೆ ನಿರಾಂತಕವಾದ ಮುನ್ನಡೆಯನ್ನು ಹಾರೈಸುತ್ತೇನೆ.

**ಪ್ರೊ|| ಹಂಪ ನಾಗರಾಜಯ್ಯ,** ಎಂ. ಎ.
ಸಂಪಾದಕರು, ಜೀವನ, ಬೆಂಗಳೂರು.

ಮಹನೀಯರೇ,

ನೀವು ವಿಶ್ವಾಸವಿಟ್ಟು ಕಳುಹಿಸಿದ 'ಯುಗರಶ್ಮಿ' ಕೈಸೇರಿತು. ಕೃತಜ್ಞತೆಗಳು.

ಅಹ್ಮದಿಯಾ ಸಂದೇಶವನ್ನು ಕರ್ನಾಟಕದ ಜನತೆಗೆ ತಲಪಿಸುವ ಸದುದ್ದೇಶದಿಂದ ನೀವು ಕೈಕೊಂಡ ಈ ಸಾಹಸದ ಕಾರ್ಯಕ್ಕಾಗಿ ನನ್ನ ಅಭಿನಂದನೆಗಳು.

ಕನ್ನಡದಲ್ಲಿ ಈ ತೆರನ ಪತ್ರಿಕೆ ಇದೊಂದೇ; ಅದರ ಶ್ರೇಷ್ಠಮಟ್ಟವನ್ನು ಉಳಿಸಿಕೊಳ್ಳಲು ನಿಮಗೆ ಶ್ರೀ ದೇವರು ಅನುಗ್ರಹಿಸಲೆಂದೂ 'ಯುಗರಶ್ಮಿ' ಚಿರಕಾಲ ಬಾಳಿಬೆಳಗಲೆಂದೂ ಹಾರೈಸುತ್ತೇನೆ.

**—ಕಯ್ಯಾರ ಕಿಞ್ಞಣ್ಣ ರೈ, ಪೆರಡಾಲ.**

ಪ್ರಿಯರೇ,

ಎರಡು ಪತ್ರಿಕೆ ನನ್ನ ಕೈಸೇರಿತು. ಭಾಷೆ, ವಿಷಯ, ಮುದ್ರಣ ಚೆನ್ನಾಗಿದೆ. ಪುಸ್ತಕ ವಿಭಾಗದಲ್ಲಿ ಯೇಸು ಕ್ರಿಸ್ತರ ವಿಚಾರ ಪ್ರಚೋದಕವಾಗಿದೆ. ನಾನು ಯಾವುದೇ ಮತ ವಿಚಾರಗಳಲ್ಲಿ ಪೂರ್ವಾಗ್ರಹಬಿಟ್ಟು ಯಥಾರ್ಥ ವಿಚಾರ ಅರಿಯಲು ಯತ್ನಿಸುತ್ತೇನೆ. ಯುಗರಶ್ಮಿಯಿಂದಾಗಿ ಹಿಂದುಗಳಿಗೆ ಮುಸ್ಲಿಮರಲ್ಲಿದ್ದ ಎಷ್ಟೋ ತಪ್ಪಭಿಪ್ರಾಯಗಳು ಬಗೆಹರಿಯುತ್ತವೆ ಎಂಬುದಾಗಿ ನಾನು ನಂಬುತ್ತೇನೆ. ನೀವು ಈಗಿನ ಪುಸ್ತಕ ವಿಭಾಗ ಮುಗಿದ ಕೂಡಲೇ, 'ಪವಿತ್ರ ಖುರ್‌ಆನ್' ಇದರ ಮೂಲ ಮತ್ತು ಸರಳಾನುವಾದ ಮತ್ತು ಅಲ್ಲಲ್ಲಿಯೇ ಅದರ ಕುರಿತು ಇದ್ದರೆ ಮುಸ್ಲಿಂ ನಾತ್ತು ಮುಸ್ಲಿಮೇತರರ ಟೀಕೆ ಟಿಪ್ಪಣಿಗಳನ್ನು ಸಮಗ್ರವಾಗಿ ಕೊಡಬೇಕಾಗಿ ಒತ್ತಾಯಪೂರ್ವಕವಾಗಿ ವಿನಂತಿಸುತ್ತೇನೆ. ಆ ಮೇಲೆ ವಿವರವಾಗಿ ಮುಹಮ್ಮದ್ ಪೈಗಂಬರ ಜೀವನ ಚರಿತ್ರೆಯನ್ನು ಕೊಡಬೇಕಾಗಿ ಅಪೇಕ್ಷಿಸುತ್ತೇನೆ.

**— ಓರ್ವ ಸತ್ಯಾನ್ವೇಷಿಯಾದ ಹಿಂದೂ ಸಹೋದರ, ಚೇಳೂರು.**

... ..ಇಷ್ಟು ಸೊಗಸಾಗಿಯೂ ತಿರುಳಿರುವ ಲೇಖನಗಳಿಂದಲೂ ಕೂಡಿ ಪತ್ರಿಕೆಯನ್ನು ಮುದ್ರಿಸಿ ಪ್ರಕಟಪಡಿಸಲು ಸಾಧ್ಯವಾದುದಕ್ಕೆ ಪ್ರಥಮವಾಗಿ ನಾನು ಪರಮಾತ್ಮನ್ನು ಸ್ತುತಿಸಿ, ನಂತರ ನಿಮಗೆ ನನ್ನ ಹೃದಯಂಗಮವಾದ ಮಂಗಳಾಶಯಗಳನ್ನೂ ಭಾವುಕಗಳನ್ನೂ ಕೋರುತ್ತೇನೆ.

**—ಮೌಲವೀ ಮುಹಮ್ಮದ್ ಉಮರ್ H. A. ಮದ್ರಾಸ್.**

......"ಯುಗರಶ್ಮಿ"ಯನ್ನು ಕಂಡು ಬಹಳ ಹರ್ಷವಾಯಿತು.

......ಜಮಾಅತಿಗಾಗಿ ನಿಸ್ವಾರ್ಥ ಸೇವೆ ಮಾಡುವ ತಮಗಾಗಿ ನನ್ನ ಹೃದಯದಿಂದ ನಾನು ತಿಳಿಯದೆಯೇ ಹೊರಟ ಪ್ರಾರ್ಥನೆಯನ್ನು ಅಲ್ಲಾಹು ಸ್ವೀಕರಿಸಲಿ........

**—ಎ. ಕ್ಯೊ. ಮುಸ್ಲಿಂ,**
ಕಾರ್ಯದರ್ಶಿ, ಅಹ್ಮದಿಯಾ ಯುವಜನ ಸಂಘ, ಕೇರಳ.

....I am very happy that by the grace of Almighty and the painstaking efforts of you people our dream has come true. May the Almighty give proper rewards to all those who have put their effort in this connection......

**—A Well Wisher.**

**ಪುಸ್ತಕ ವಿಭಾಗ**

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್

ಭಾಷಾಂತರಕಾರ: ಅಬೂ ತಾಹಿರ್.

## ಅಧ್ಯಾಯ – 3.

## ಯೇಸು ಕ್ರಿಸ್ತರ ಪುನರುತ್ಥಾನದ ಕಥೆಯ ಯಥಾರ್ಥ ವಿವರಣೆ

ಯೇಸುಕ್ರಿಸ್ತರ ಪುನರುತ್ಥಾನದ ಕುರಿತು ನಾಲ್ಕು ಸುವಾರ್ತೆಗಳಲ್ಲಿ ಬರೆದಿರುವ ಸಂಗತಿಗಳನ್ನು ಅಧ್ಯಯನ ಮಾಡಿದ ಇಬ್ಬರು ಪಂಡಿತರು ಈ ಕುರಿತು ವ್ಯಾಖ್ಯಾನಿಸಿದುದನ್ನು ಈ ಕೆಳಗೆ ಕೊಡುತ್ತೇನೆ.

1. ಪ್ರೊಫೆಸರ್ ಹೇನ್‌ರಿಚ್ ಎಬರ್‌ಹರ್ಡ್, ಗೊಟ್ಲೋಬ್ ಪೌಲಸ್ (1761–1851) ಎಂಬವರು 1789ರಲ್ಲಿ ಜೇನಾ ಎಂಬಲ್ಲಿ ಪೌರ್ವಾತ್ಯ ಭಾಷೆಗಳ ಶಿಕ್ಷಕನಾಗಿ ನೇಮಕಗೊಂಡಿದ್ದರು. ಅನಂತರ ಇವರು 1793ರಲ್ಲಿ ಧಾರ್ಮಿಕ ಶಾಸ್ತ್ರದ ಅಧ್ಯಾಪಕರಾಗಿ ನೇಮಿತರಾದರು. ಬವೇರಿಯದ ವಿದ್ಯಾಸಂಸ್ಥೆಯ ಸದಸ್ಯರಾಗಿ ಇವರು 1807ರಿಂದ 1811ರ ವರೆಗೆ ಸೇವೆಯರ್ಪಿಸಿದ್ದರು. 1811ರಲ್ಲಿ ಹೈಡಲ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ ಧಾರ್ಮಿಕ ಶಾಸ್ತ್ರದ ಹಿರಿಯ ಅಧ್ಯಾಪಕರಾಗಿ ನಿಯುಕ್ತರಾದರು. ಮರಣದ ವರೆಗೆ ಹೈಡಲ್‌ಬರ್ಗ್‌ನಲ್ಲಿಯೇ ಅವರು ಜೀವಿಸಿದ್ದರು. ಇವರು The life of Jesus (ಲೈಫ್ ಆಫ್ ಜೀಸಸ್) ಎಂಬ ಗ್ರಂಥವನ್ನು 1828ರಲ್ಲಿ ಬರೆದು ಪ್ರಕಟಿಸಿದರು. ಆ ಗ್ರಂಥದಲ್ಲಿ ಈರೀತಿ ಬರೆದಿದ್ದಾರೆ:

"ಯೇಸುಕ್ರಿಸ್ತರನ್ನು ಅವರ ಶಿಷ್ಯರು ಮೊಳೆಹೊಡೆದು ಗಾಯಗೊಳಿಸಲ್ಪಟ್ಟ ಕೈಗಳಿಂದ ಕೂಡಿದ ಸ್ಥೂಲ ಶರೀರದೊಂದಿಗೆ ನೋಡಿದರೆಂದೂ ಅವರು ಶಿಷ್ಯರ ಸಾನ್ನಿಧ್ಯದಲ್ಲಿ ಆಹಾರ ಸೇವಿಸಿದರೆಂದೂ ನಾವು ದೃಢವಾಗಿ ನಂಬುವುದಾದರೆ ಯೇಸುಕ್ರಿಸ್ತರ ಪುನರುತ್ಥಾನವು ಅಕಾಲಿಕವಾದ ಶವಸಂಸ್ಕಾರದ ಪರಿಣಾಮವಾಗಿರಬಹುದೆಂದು ಹೇಳದೆ ನಿವೃತ್ತಿಯಿಲ್ಲ. ಶಿಲುಬೆಗೆ ಕೊಡಲ್ಪಟ್ಟಾಗ ಉಂಟಾಗುವ ಮರಣವು ಒಂದು ವಿಧದ ಮರಕಟ್ಟುವಿಕೆಯಿಂದ ಸಂಭವಿಸುತ್ತದೆ–ಈ ಮರಕಟ್ಟುವಿಕೆಯು ಹೊರಗಡೆಯಿಂದ ಒಳಗಡೆಗೆ ವ್ಯಾಪಿಸುತ್ತದೆ. ಎಲ್ಲಾ ರೀತಿಯ ಮರಣಕ್ಕಿಂತಲೂ ಇದು ನಿಧಾನವಾದುದಾಗಿದೆ. ಜೋಸೆಫಸನು ತನ್ನ "ಕೋಂಟ್ರಾ ಏಪಿಯೋನೆಮ್" ಎಂಬ ಗ್ರಂಥದಲ್ಲಿ ಟೈಟಸ್ ಚಕ್ರವರ್ತಿಯು ಟೆಕೋಅ ಎಂಬಲ್ಲಿ ಶಿಲುಬೆಗೆ ಕೊಡಲ್ಪಟ್ಟ ಮೂವರು ಪರಿಚಿತರನ್ನು ಶಿಲುಬೆಯಿಂದ ಇಳಿಸಲು ಪ್ರತ್ಯೇಕವಾದ ರಿಯಾಯಿತಿಯ ರೂಪದಲ್ಲಿ ತನಗೆ ಸಮ್ಮತಿಕೊಟ್ಟುದಾಗಿಯೂ ಅವರಲ್ಲಿ ಇಬ್ಬರು ಮಡಿದರೆಂದೂ ಒಬ್ಬ ಸುರಕ್ಷಿತವಾಗಿ ಜೀವಿಸಿದನೆಂದೂ ಬರೆದಿರುವನು. ಆದರೆ ಯೇಸುಕ್ರಿಸ್ತರು ಆಶ್ಚರ್ಯಕರ

ವಾಗಿ ಬಹಳ ಬೇಗನೇ 'ಮಡಿದರು'. ಅವರು ತನ್ನ ತಲೆ ಕುಸಿಯುವ ತುಸು ಮೊದಲು ಮಾಡಿದ ದೊಡ್ಡ ಧ್ವನಿಯು ಅವರು ಶಕ್ತಿಹೀನರಾಗಿರಲಿಲ್ಲವೆಂದು ತೋರಿಸುತ್ತದೆ. ಅನಂತರ ಮರಣದಂತಿರುವ ಮೂರ್ಛಾವಸ್ಥೆಯು ಸಂಭವಿಸಿತು. ಈ ರೀತಿಯ ಮೂರ್ಛಾವಸ್ಥೆಯಲ್ಲಿ ಮರಣವು ನಿಧಾನವಾಗಿ ಸಂಭವಿಸಿ ಅನಂತರ ಶರೀರವು ಕೊಳೆಯಲು ತೊಡಗುವುದು. ಇದು ಈ ರೀತಿಯಾದರೆ ಮರಣವು ಸಂಭವಿಸಿದೆಯೆಂದು ತಿಳಿಯಬಹುದು. ಯೇಸು ಕ್ರಿಸ್ತರಿಗೆ ಇತರರಿಗೆ ಸಂಭವಿಸುವ ರೀತಿಯಲ್ಲಿ ಮರಣವು ನಿಧಾನವಾಗಿ ಸಂಭವಿಸುತ್ತಿತ್ತು. ಆದರೆ ದೇವರು ತನ್ನ ಇಷ್ಟದಾಸನನ್ನು ರಕ್ಷಿಸಲಿಕ್ಕಾಗಿ ಮಾಡಿದ ರಹಸ್ಯ ಏರ್ಪಾಡಿನಿಂದಾಗಿ ಇತರರಿಗೆ ವೃತ್ತಿಸಾಮರ್ಥ್ಯದಿಂದಲೂ ಬಹಳ ಆರೈಕೆಯಿಂದಲೂ ಬಹಿರಂಗವಾಗಿ ಯಾವ ಕಾರ್ಯವನ್ನು ಮಾಡಿದರೆ ಪ್ರಯೋಜನವಾಗಬಹುದೋ ಅದೇ ಪ್ರಯೋಜನ ಅಪ್ರತೀಕ್ಷವಾಗಿ ನಡೆಯುವಂತಾಯಿತು. ಈಟಿಯಿಂದ ಮಾಡಿದ ತಿವಿತವು ನಮ್ಮ ದೃಷ್ಟಿಯಲ್ಲಿ ಒಂದು ಗಾಯವಾದರೂ ಅದರಿಂದ ಒಂದು ರೀತಿಯ ವೈದ್ಯಕೀಯ ರಕ್ತಹೀರುವಿಕೆಯ (Phlebotomy) ಪ್ರಯೋಜನ ಉಂಟಾಯಿತು. ತಂಪಾದ ಸಮಾಧಿಯೂ ಪರಿಮಳಯುಕ್ತ ಲೇಪನ ದ್ರವ್ಯಗಳೂ ಪುನರುತ್ಥಾನವನ್ನು ಉತ್ತೇಜಿಸಿತು. ಬಿರುಗಾಳಿಯೂ ಭೂಕಂಪವೂ ಯೇಸುಕ್ರಿಸ್ತರನ್ನು ಪೂರ್ಣವಾಗಿ ಎಚ್ಚರಹೊಂದುವಂತೆ ಮಾಡಿತು. ಭೂಕಂಪದಿಂದ ಸಮಾಧಿಯ ಬಾಗಿಲಿನ ಕಲ್ಲು ಉರುಳಿಹೋದುದು ಸಹ ಭಾಗ್ಯಕರವಾಗಿದೆ. ಅವರು ತನ್ನ ಶವದುಡುಗೆಯನ್ನು ತೊರೆದು ತೋಟಗಾರನ ಉಡುಗೆಯನ್ನು ಧರಿಸಿದರು. ಯೋಹಾನ 20:15 ರಲ್ಲಿ ವಿವರಿಸಿದಂತೆ ಮರಿಯಳು ಅವರನ್ನು ತೋಟಗಾರನಂತೆ ಕಾಣಲು ಕಾರಣ ಇದೇ. ಅವಳೊಡನೆ ಗಲಿಲಾಯದಲ್ಲಿ ತನ್ನನ್ನು ಶಿಷ್ಯರು ಕಾಣಬೇಕೆಂದು ಸಂದೇಶ ಕಳುಹಿಸಿ ತಾವು ಅಲ್ಲಿಗೆ ತೆರಳುತ್ತಾರೆ. ಕತ್ತಲಾಗುತ್ತಿರುವಾಗ ಎಮ್ಮಾ (Emmaus) ಎಂಬಲ್ಲಿ ತನ್ನಿಬ್ಬರು ಶಿಷ್ಯರನ್ನು ಕಾಣುತ್ತಾರೆ. ಆದರೆ ಯಾತನೆಯಿಂದ ಕಳೆಗುಂದಿದ ಮುಖವನ್ನು ಹೊಂದಿರುವ ಯೇಸುಕ್ರಿಸ್ತರನ್ನು ಶಿಷ್ಯರು ಒಮ್ಮೆಲೇ ಗುರುತಿಸಲು ಅಸಮರ್ಥರಾಗುತ್ತಾರೆ. ರೊಟ್ಟಿಯನ್ನು ತಿನ್ನುವ ಮೊದಲು ಸೂಚಿಸಲಾದ ಪ್ರಾರ್ಥನೆಯೂ ಕೈಗಳನ್ನು ಎತ್ತಿದಾಗ ಕಂಡ ಮೊಳೆಗಳ ಗಾಯಗಳೂ ಅವರ ಗುರುತು ತೋರಿಸಲು ಸಹಕರಿಸಿತ್ತು. ಅವರಿಂದ ತನ್ನಿತರ ಶಿಷ್ಯರೆಲ್ಲಿಯೆಂದು ತಿಳಿದು ಯೆರೊಸಲೇಮಿಗೆ ಬಂದು ಥಕ್ಕನೆ ಶಿಷ್ಯರ ಮಧ್ಯೆ ಪ್ರತ್ಯಕ್ಷರಾಗುತ್ತಾರೆ. ಗಲಿಲಾಯಕ್ಕೆ ಹೋಗಬೇಕೆಂಬ ಸಂದೇಶ ಮತ್ತು ಯೆರೊಸಲೇಮಿನಲ್ಲಿ ಯೇಸುಕ್ರಿಸ್ತರ ಪ್ರತ್ಯಕ್ಷವಾಗುವಿಕೆಯು ಪರಸ್ಪರ ವಿರೋಧವಾಗಿರುವ ವಚನಗಳ ವ್ಯಾಖ್ಯಾನ ಇದಾಗಿದೆ.''

"ಈರೀತಿ ಯೇಸುಕ್ರಿಸ್ತರು ನಲ್ವತ್ತು ದಿವಸ ಅವರೊಡನೆ ವಾಸಿಸಿದರು. ಅದರಲ್ಲಿ ಒಂದು ಭಾಗ ಗಲಿಲಾಯದಲ್ಲಿ ನಿವಾಸಿಸಿದರು. ತಾನು ಅನುಭವಿಸಿದ ಹಿಂಸೆಗಳ ಕಾರಣ ಯೇಸುಕ್ರಿಸ್ತರಿಗೆ ಎಡಬಿಡದೆ ಪ್ರವರ್ತಿಸಲು ಸಾಧ್ಯವಿರಲಿಲ್ಲ. ಅವರು ಏಕಾಂಗಿಯಾಗಿ ಶಾಂತಜೀವನ ನಡೆಸುತ್ತಾ ಒಮ್ಮೊಮ್ಮೆ ಶಕ್ತಿ ಕೈಗೂಡಿದಾಗ ತನ್ನ ಶಿಷ್ಯರ ಮಧ್ಯದಲ್ಲಿ ಪ್ರತ್ಯಕ್ಷರಾಗಿ ಉಪದೇಶಿಸುತ್ತಿದ್ದರು. ತನ್ನ ಅಂತ್ಯವು ಸಮೀಪಿಸಿದಂತೆ ಭಾವಿಸಿದಾಗ ಅವರು ಯೆರೊಸಲೇಮಿಗೆ ಹಿಂತಿರುಗಿದರು. ಒಲಿವ್ ಪರ್ವತದ ಮೇಲೆ ತನ್ನ ಶಿಷ್ಯರನ್ನು ಬೆಳಗಾತ ಕೊನೆಯಬಾರಿ ಒಟ್ಟುಗೂಡಿಸಿದರು. ಅವರು ತನ್ನ ಕೈಗಳನ್ನು ಆಶೀರ್ವದಿಸಲು ಮೇಲೆತ್ತಿದರು. ಹಾಗೆ ಕೈಗಳನ್ನು ಎತ್ತಿಕೊಂಡೇ ಅವರು ಶಿಷ್ಯರಿಂದ ದೂರವಾದರು. ಒಂದು ಮೋಡವು ಅವರಿಗೂ ಶಿಷ್ಯರಿಗೂ ನಡುವೆ ಹಾಯ್ದು ಹೋದುದರಿಂದ ಶಿಷ್ಯರು ಅವರನ್ನು ನೋಡದಂತೆ ತಡೆಯಾಯಿತು. ಯೇಸುಕ್ರಿಸ್ತರು ಅಪ್ರತ್ಯಕ್ಷರಾದಾಗ ಇಬ್ಬರು ಶ್ವೇತ ವಸ್ತ್ರಧಾರಿಗಳು ಶಿಷ್ಯರ ಮುಂದುಗಡೆ ಬಂದರು. ಇವರು ಯಥಾರ್ಥವಾಗಿ ಯೇಸುಕ್ರಿಸ್ತರ ಯೆರೊಸಲೇಮಿನಲ್ಲಿದ್ದ ಗುಪ್ತ ಶಿಷ್ಯರಾಗಿದ್ದರು. ಅವರು ಶಿಷ್ಯರೊಡನೆ ಅಲ್ಲಿ ಕಾಯುತ್ತಾ ನಿಲ್ಲುವುದು ಬೇಡವೆಂದೂ ತಮ್ಮ ತಮ್ಮ ವೃತ್ತಿಗಳಲ್ಲಿ ಮಗ್ನರಾಗಬೇಕೆಂದೂ ಉಪದೇಶಿಸಿದರು."

"ಯೇಸುಕ್ರಿಸ್ತರು ಮೃತರಾದುದು ಎಲ್ಲಿಯೆಂದು ಅವರಿಗೆ ತಿಳಿಯಲೇ ಇಲ್ಲ. ಆದುದರಿಂದ ಅವರ ನಿರ್ಗಮನವನ್ನು ಪುನರುತ್ಥಾನವೆಂದು ವರ್ಣಿಸಲು ತೊಡಗಿದರು.

(The quest of Historical Jesus by Dr. Albert Schwitzer. Translated by W. Montgomery Ed. II P. 54-55. Adam Charles Black London 1911)

2. ಮಿಸ್ಟರ್ E. B. ಡೋಕರ್ (ಡಿಸ್ಟ್ರಿಕ್ಟ್ ಕೋರ್ಟ್ ಜಡ್ಜ್, ಸಿಡ್ನಿ) If Jesus did not die

upon Cross "ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿಲ್ಲವಾದರೆ'' ಎಂಬ ಹೆಸರಿನ ಒಂದು ಗ್ರಂಥವನ್ನು 1920ನೇ ಇಸವಿಯಲ್ಲಿ ವಿರಚಿಸಿದರು. ಒಬ್ಬ ಜಡ್ಜ ಒಂದು ಕೇಸಿನ ಸಾಕ್ಷ್ಯಗಳನ್ನು ವಿಮರ್ಶಿಸುವ ರೀತಿಯಲ್ಲಿ ಶಿಲುಬೆಗೆ ಕೊಡಲ್ಪಟ್ಟ ಸಂಭವಗಳ ಕುರಿತಿರುವ ಸಾಕ್ಷ್ಯಗಳನ್ನು ಅವರು ವಿಮರ್ಶಿಸಿರುವರು. ಪುನರುತ್ಥಾನದ ಕುರಿತು ಅವರ ಅಭಿಪ್ರಾಯ ಈ ಕೆಳಗಿನಂತೆ ಸೂಚಿಸಿರುವರು:

"ಸತ್ತ ಶರೀರಗಳನ್ನು ಪುನರುಜ್ಜೀವಿಸಲು ಸಾಧ್ಯವೆಂಬ ವಿಶ್ವಾಸ ನಮ್ಮ ಯಜಮಾನರ (ಯೇಸುಕ್ರಿಸ್ತರ) ಕಾಲದಲ್ಲಿ ಜನರೆಡೆಯಲ್ಲಿದ್ದಿತು. ಅದಕ್ಕಿಂತ ಮೊದಲೂ ಅದರ ನಂತರವೂ ಎಷ್ಟೋ ನೂರು ವರ್ಷಗಳಷ್ಟು ಸಮಯ ಈ ವಿಶ್ವಾಸ ನೆಲೆನಿಂತಿತ್ತು. ಆ ಕಾಲಗಳಲ್ಲಿ ವೈಜ್ಞಾನಿಕ ಸಂಶೋಧನಗಳು ಬೆಳವಣಿಗೆ ಹೊಂದಿರಲಿಲ್ಲ. ಇಂತಹ ಒಂದು ಉದಾಹರಣೆ ಎಲಿಜಾನ ಚರಿತ್ರೆಯಲ್ಲೂ ಎರಡು ಉದಾಹರಣೆಗಳು ಎಲಿಶಾನ ಚರಿತ್ರೆಯಲ್ಲೂ ದೊರಕುತ್ತವೆ. ಹೊಸ ಒಡಂಬಡಿಕೆಯ ಸುವಾರ್ತೆಗಳಲ್ಲಿ ಯೇಸುಕ್ರಿಸ್ತರ ಸಂಭವದ ಹೊರತಾಗಿ ಬೇರೆ ಮೂರು ಉದಾಹರಣೆಗಳು ಇವೆ. 'ಅಪೋಸ್ತಲರ ಕೃತ್ಯಗಳು' ಎಂಬ ಪುಸ್ತಕದಲ್ಲಿ ಎರಡು ಉದಾಹರಣೆಗಳೂ ದೊರೆಯುತ್ತವೆ. ಚರ್ಚಿನಲ್ಲಿ ನಡೆದ ಪ್ರಾರ್ಥನೆಗಳ ಫಲವಾಗಿ ಆತ್ಮವು ಮೃತ ಶರೀರವನ್ನು ಪ್ರವೇಶಿಸಿ ಮನುಷ್ಯರು ಜೀವಿಸಿದ ಹಲವು ಉದಾಹರಣೆಗಳನ್ನು ಇರೇನ್ಯಸ್ (Irnaeus) ಎಂಬವನು ವಿವರಿಸಿರುವನು.''

"ಹಿಬ್ಬರ್ಟ್ ಜರ್ನಲ್ (Hibbert Journal) ಜುಲೈ 1914ರ 885ನೇ ಪುಟದಲ್ಲಿ ರೆವರೆಂಡ್ W. ಮೊಂಟ್‌ಗೊಮೆರಿ ಎಂಬವರು 'ಶೈಕ್ಷಣಿಕ ಮಿಷನರಿಯಾಗಿ' ಎಂಬ ಲೇಖನದಲ್ಲಿ ವೈಜ್ಞಾನಿಕವಾಗಿ ಹಿಂದುಳಿದ ಜನಾಂಗದಲ್ಲಿ ಇಂದಿನ ಕಾಲದಲ್ಲಿಯೂ ಪ್ರಚಲಿತವಿರುವ ಈ ವಿಶ್ವಾಸದ ಕುರಿತು ಈ ಕೆಳಗಿನಂತೆ ಬರೆದಿರುವರು:—"ಮೂರ್ಛೆ ಬರಿಸುವ ಔಷಧಿಗಳ ಉಪಯೋಗವು ಸ್ಥಳೀಯ ಜನರನ್ನು ಅತ್ಯಧಿಕ ಆಕರ್ಷಿಸುತ್ತದೆ. ಮಿಷನರಿ ಶಾಲೆಗಳಲ್ಲಿರುವ ಹುಡುಗಿಯರು ಯುರೋಪಿನಲ್ಲಿರುವವರಿಗೆ ಪತ್ರ ಬರೆಯುತ್ತಾರೆ. ಒಂದು ಪತ್ರದಲ್ಲಿ ಈರೀತಿ ಬರೆಯಲಾಗಿದೆ: 'ಡಾಕ್ಟರರು ಬಂದ ಮೇಲೆ ಅದ್ಭುತ ಸಂಭವಗಳು ನಡೆಯುತ್ತವೆ. ಅವರು ಮೊದಲು ರೋಗಿಯನ್ನು ಕೊಲ್ಲುತ್ತಾರೆ. ಪುನಃ ಗುಣಪಡಿಸಿ ಜೀವದಾನ ಗೈಯುತ್ತಾರೆ. ಅದ್ಭುತ ಕಾರ್ಯಗಳನ್ನು ಮಾಡುವವನಿಗೆ ಇದಕ್ಕಿಂತ ದೊಡ್ಡ ಯಾವ ಪ್ರಸಿದ್ಧಿ ಬೇಕಾಗಿದೆ?'

"ಫಿಸಿಕಲ್ ಕಲ್ಚರ್ ಎಂಡ್ ಹೆಲ್ತ್ ಎಂಬ ಪತ್ರಿಕೆಯ 1912ನೇ ಇಸವಿ ಜುಲೈ 15ರ ಸಂಚಿಕೆಯಲ್ಲಿ ಬಂದ ಲೇಖನವು ದಕ್ಷರಾದ ವೈದ್ಯರು ಸಹ ಮರಣವನ್ನು ಘೋಷಿಸುವುದರಲ್ಲಿ ತಪ್ಪು ಮಾಡಬಲ್ಲರೆಂಬ ಸಂಗತಿಯನ್ನು ತೋರಿಸುತ್ತದೆ:

"ಸತ್ತವರನ್ನು ಜೀವಿಸುವಂತೆ ಮಾಡುವುದು''— ಎಂಬ ಶಿರೋನಾಮೆಯಲ್ಲಿ ಅದರಲ್ಲಿ ಕೆಳಗಿನಂತೆ ಬರೆಯಲಾಗಿದೆ: "ಒಬ್ಬ ಜರ್ಮನ್ ದೇಶೀಯನು ಶ್ರದ್ಧಾರ್ಹವಾದ ಒಂದು ಉಪಕರಣವನ್ನು ಉಪಯೋಗಕ್ಕೆ ತಂದಿರುವನು. ಪಲ್ಮೋಟರ್ (Pulmotor) ಎಂಬ ಈ ಉಪಕರಣವು ಸತ್ತವರೆಂದು ಡಾಕ್ಟರರು ನಿರ್ಧರಿಸಿದ ವ್ಯಕ್ತಿಗಳನ್ನು ಪೂರ್ಣ ಆರೋಗ್ಯವಂತರಾಗಿ ಪುನರುಜ್ಜೀವನಗೊಳಿಸಲು ಸಹಕರಿಸಿದೆ. ಹಾಸ್ (Haas) ಎಂಬ ವ್ಯಕ್ತಿ ಕಲ್ಲಿದ್ದಲಿನ ಗ್ಯಾಸಿನಿಂದ ಮೂರ್ಛಿತನಾಗಿದ್ದು ಆತನನ್ನು ಪುನಶ್ಚೇತನಗೊಳಿಸಲು ಮೂರು ಗಂಟೆಗಳ ಕಾಲ ಶ್ರಮಿಸಿದ ಅವನ ಸ್ನೇಹಿತರು ವಿಫಲರಾಗಿ ಕೊನೆಗೆ ಆತನು ಸತ್ತನೆಂದು ಭಾವಿಸಲಾಯಿತು (ಪುಟ 17). ಪಲ್ಮೋಟರನ್ನು ಮೂರು ಗಂಟೆಗಳ ಕಾಲ ಆತನಿಗೆ ಉಪಯೋಗಿಸಲಾಯಿತು. ಅನಂತರ ಆತನು ಎದ್ದು ಕುಳಿತು ಆಶ್ಚರ್ಯವನ್ನೂ ಕೃತಜ್ಞತೆಯನ್ನೂ ವ್ಯಕ್ತಗೊಳಿಸಿದನು. ತನಗೆ ಸಂಭವದ ಪೂರ್ವ ಸ್ಥಿತಿಯು ಅನುಭವವಾಗುತ್ತದೆ ಎಂದು ಆತನು ನುಡಿದನು. ಈ ಉಪಕರಣವನ್ನು ಉಪಯೋಗಿಸುವ ಮೊದಲು ಬಂದ ಡಾಕ್ಟರನು ಹಾಸನು ಮೃತನಾಗಿರುವನೆಂದು ಹೇಳಿದ್ದನು. ಈ ರೀತಿ ಜೀವಿಸಲ್ಪಟ್ಟವರಲ್ಲಿ ಹಾಸನು ಐದನೆಯವನಾಗಿರುವನು.

"ಜೀವದಿಂದಿರುವ ಶರೀರ ಕೆಲವು ಸಾರಿ ಮರಣ ಹೊಂದಿದ ಶವದ ಚಿಹ್ನೆಗಳನ್ನು ತೋರಿಸುತ್ತವೆಯೆಂದೂ ಸರಿಯಾದ ಮರಣಾವಸ್ಥೆಯನ್ನು ಗೊತ್ತುಪಡಿಸಲು ಸೂಕ್ಷ್ಮ ಪರೀಕ್ಷೆಗಳು ಆವಶ್ಯವೆಂಬ ಸಂಗತಿ ಟೇಲರ್ಸ್ ಮೆಡಿಕಲ್ ಜೂರಿಸ್‌ಪ್ರೂಡೆನ್ಸ್ (Taylor'sMedical Jurisprudence, Sixth Edition page 243) ಎಂಬ ಪುಸ್ತಕದ ಈ ಕೆಳಗಿನ ವಿವರಣೆಯಿಂದ ತಿಳಿಯಬಹುದು. ಈ ಉದ್ಧಾರಣೆಯನ್ನು ಲ್ಯಾನ್ಸೆಟ್ ಪತ್ರಿಕೆ ಸಂಪುಟ 1 (1900)ರಲ್ಲಿ ಪ್ರಕಟವಾದ ಲೇಖನ

ದಿಂದ ತೆಗೆದುಕೊಳ್ಳಲಾಗಿದೆ. 'ಅಕಾಲ ಶವ ಸಂಸ್ಕಾರ' ವೆಂಬ ಶೀರ್ಷಿಕೆಯಲ್ಲಿ ಅದರಲ್ಲಿ ಈ ಕೆಳಗಿನಂತೆ ಬರೆಯ ಲಾಗಿದೆ: ಮೆದುಳಿಗೆ ಆಘಾತ (Concussion), ಅಪಸ್ಮಾರ (Catelepsy) ಮೂರ್ಛೆ (Syncope) ಹಿಸ್ಟೀರಿಯಾ ಮತ್ತು ಅತ್ಯಧಿಕ ಶ್ರಮದಿಂದುಂಟಾದ ಚೈತನ್ಯಹೀನತೆ ಎಂಬವು ಬಾಧಿಸಿದವರನ್ನು ಮೃತರನ್ನಾಗಿ ಅವರ ಸಮೀಪ ನಿಂತವರು ಭಾವಿಸಿದ ಸಂಭವಗಳೆಷ್ಟೋ ಇವೆ. ಇದಕ್ಕೆ ಕಾರಣ ಶರೀರ ಜೀವಚೈತನ್ಯವಿಲ್ಲದಂ ತೆಯೂ, ಶೀತವಾಗಿರುವಂತೆಯೂ ಶ್ವಾಸೋಚ್ವಾಸ ಮತ್ತು ರಕ್ತ ಸಂಚಾರದ ಯಾವುದೇ ಹೊರಗಿನ ಚಿಹ್ನೆ ಗಳು ಕಂಡು ಬಾರದಿರುವುದೂ ಆಗಿದೆ. ಈ ವಿಷಯದ ಕುರಿತು ತೀರ್ಮಾನಿಸಲು ಇಂತಹವರನ್ನು ಬಿಟ್ಟರೆ ಇವರ ತೀರ್ಮಾನದ ಫಲವಾಗಿ ಶವಸಂಸ್ಕಾರ ಕೆಲವೇ ಗಂಟೆಗಳಲ್ಲಿ ನಡೆದರೆ ಇದರ ಫಲವಾಗಿ ಜೀವಂತ ಶರೀರಗಳು ಅಕಾಲಿಕ ಶವ ಸಂಸ್ಕಾರಕ್ಕೆ ತುತ್ತಾಗುವುವು. ಯುರೋಪಿನ ನಾಗ ರಿಕ ರಾಷ್ಟ್ರಗಳಲ್ಲಿ ಇದು ನಡೆಯುವುದು ಬಹಳ ಅಪ ರೂಪವಾಗಿಯೂ ಶಿಕ್ಷಾರ್ಹವಾದ ಅಜಾಗರೂಕತೆಯ ಫಲವಾಗಿಯೂ ಮಾತ್ರ. (ಪುಟ 18)

ಈ ಪತ್ರಿಕೆಯ ಸಂಪಾದಕರು ಈ ರೀತಿ ಹೇಳು ತ್ತಾರೆ (ಪುಟ 246):

"ಸರಿಯಾದ ನಿರ್ಣಯಗಳನ್ನು ಕೈಗೊಳ್ಳಲು ಸಹಾ ಯಕವಾದ ಸಂಗತಿಗಳು ಈ ಕೆಳಗಿನವು:

1. ರಕ್ತ ಸಂಚಾರ ಮತ್ತು ಶ್ವಾಸೋಚ್ವಾಸ ಒಂದು ಗಂಟೆಯಷ್ಟು ಸಮಯ ಇಲ್ಲದಿರುವುದು —ಸ್ಟೆ ತೋಸ್ಕೋಪು ಉಪಯೋಗಿಸಿ ಪರೀಕ್ಷಿಸುತ್ತಾ ಇರಬೇಕು.

2. ಶರೀರ ಕ್ರಮೇಣ ಶೀತ ಹೊಂದುವುದು.– ಕೈಕಾಲುಗಳು ಮೊದಲು ಶೀತಗೊಂಡು ಅನಂತರ ಶರೀ ರದ ಮುಂಡ ಭಾಗ ಬಿಸಿಯನ್ನು ಕಳಕೊಳ್ಳುವುದು.

3. ಶರೀರ ಶೀತಗೊಳ್ಳುವಾಗ ಕೈಕಾಲುಗಳಲ್ಲೂ ಶರೀರದ ಮುಂಡ ಭಾಗದಲ್ಲೂ ಮಾಂಸಪೇಶಿಗಳು ಮರ ಗಟ್ಟುತ್ತವೆ ಅನಂತರ ಶರೀರವಿಡೀ ಇದು ವ್ಯಾಪಿಸುತ್ತದೆ. ಇಂತಹ ಸ್ಥಿತಿಗಳು ತೋರಿ ಬಂದಾಗ ಮರಣ ಸಂಭವಿಸಿ ತ್ತೆಂದು ನಿರ್ಣಯಿಸಬಹುದು."

"ಪುನರುಜ್ಜೀವನದ ಕುರಿತು ಬೈಬಲಿನಲ್ಲಿ ವಿವರಿಸ ಲಾದ ಸಂಭವಗಳನ್ನು ಈ ತತ್ವಗಳ ಪ್ರಕಾಶದಲ್ಲಿ ನೋ ಡುವಾಗ ಆ ಸಂಭವಗಳು ಇಂದು ನಡೆದಿದ್ದರೆ, ಶೂನೆಮ್ ನಗರದ ಯುವಕನು ಸೂರ್ಯ ತಾಪದಿಂದ ಮೂರ್ಛಿತ ನಾಗಿದ್ದನೆಂದೂ ಯೂತಿಕೋಸನು ಮೇಲಿನಿಂದ ಬಿದ್ದು ದರಿಂದ ಬೋಧರಹಿತನಾಗಿದ್ದನೆಂದೂ, ಯಾಯಿರನ ಮಗಳು ರೋಗದಲ್ಲಿದ್ದಳೆಂದೂ ಹೇಳಲು ನಾವು ಹಿಂಜ ರಿಯುತ್ತಿರಲಿಲ್ಲ. ಅಲ್ಲಿ ನಿಂತಿದ್ದ ಜನರು ಅಜ್ಞತೆಯಿಂದ ಅವಳು ಸತ್ತವಳೆಂದು ತಿಳಿದುಕೊಂಡಿದ್ದರಿಂದ ಆಕೆಯ ನಿಜವಾದ ಸ್ಥಿತಿಯನ್ನು ತಿಳಿದ ಯೇಸುವಿನ "ಆಕೆ ಸತ್ತಿಲ್ಲ ನಿದ್ರಿಸುತ್ತಿದ್ದಾಳೆ" ಎಂಬ ಘೋಷಣೆ ಹಾಸ್ಯಾಸ್ಪದವಾ ಯಿತು. ಯೇಸುಕ್ರಿಸ್ತರು ಇದೇ ಭಾಷೆಯನ್ನು ಲಾಜ ರನ ಕುರಿತು ಸಹ ಉಪಯೋಗಿಸಿರುವರು. ಯೇಸು ಕ್ರಿಸ್ತರು ತನ್ನ ಶಿಷ್ಯರಿಗೆ ಲಾಜರನ ಸ್ಥಿತಿಯ ಗಂಭೀರತೆ ಸರಿಯಾಗಿ ಬೋಧ್ಯವಾಗುವಂತೆ ಮಾಡಲಿಕ್ಕೋಸ್ಕರ ಲಾಜರನು ಮೃತನಾಗಿರುವನು ಎಂದರು."

"ಇದರ ಮತ್ತು ಸರಫಾತ್ತಿನ ಬಾಲಕನ, ಎಲೀಘನ ಸಮಾಧಿಯ ಒಳಗೆ ಬಿದ್ದ ಶರೀರದ, ನಾಯಿನ್ ಪಟ್ಟ ಣದ ಮತ್ತು ಡೋರ್ಕಸ್ ಪಟ್ಟಣದ ಯುವಕರ ಸಂಭವ ಗಳ ಸರಿಯಾದ ಪರಿಶೋಧನೆ ನಡೆಸಿದರೆ ಇವೆಲ್ಲಾ ಮರಣವನ್ನು ಹೋಲುವ ಅವಸ್ಥೆಗಳೆಂದೂ ಪ್ರಾಯಶಃ ಅಪಸ್ಮಾರವಾಗಿರಬಹುದೆಂದೂ ತಿಳಿಯಬಹುದು". (ಪುಟ 19–20)

"ಯೇಸುಕ್ರಿಸ್ತರು ಯಥಾರ್ಥವಾಗಿ ಶಿಲುಬೆಯಲ್ಲಿ ಮೃತರಾದರೋ ಎಂಬ ಪ್ರಶ್ನೆ ಈಗ ನಮ್ಮ ಮುಂದಿದೆ. ಸುವಾರ್ತೆಗಳನ್ನು ಪರಿಶೋಧಿಸಿದರೆ ಯಥಾರ್ಥ ಮರಣ ಮತ್ತು ಮರಣಕ್ಕೆ ಸಮಾನವಾದ ಅವಸ್ಥೆಗಳನ್ನು ಬೇರ್ಪ ಡಿಸಿ ತೋರಿಸುವ ಯಾವುದೇ ನಿರ್ಣಾಯಕ ಸಂಗತಿ ಕಾಣುವುದಿಲ್ಲ ಶಿಲುಬೆಗೆ ಕೊಡಲ್ಪಟ್ಟ ಮೂರು ಗಂಟೆ ಗಳೊಳಗೆ ಅವಸರವಸರವಾಗಿ ಶವಕುಠೀರದಲ್ಲಿ ಶರೀರವು ಇರಿಸಲ್ಪಟ್ಟಿತ್ತು. ಆವಾಗ ಯಾವುದೇ ವೈದ್ಯಕೀಯ ಶವಪರೀಕ್ಷೆ ನಡೆಯಲಿಲ್ಲ. ಸ್ಟೆತೋಸ್ಕೋಪ್ ಪರೀ ಕ್ಷೆಯೂ ನಡೆಯಲಿಲ್ಲ. ಅವರ ಜೊತೆಯಲ್ಲಿ ಕೊನೆಯ ವರೆಗಿದ್ದವರ ವಿಚಾರಣೆಯೂ ನಡೆಯಲಿಲ್ಲ. ಅವರ ಶರೀರವನ್ನು ಶವಕುಠೀರದೊಳಗೆ ಇರಿಸಿದ ಅರಿಮಥಾ ಯದ ಯೋಸೆಫನ ವಿಚಾರಣೆಯೂ ಇಲ್ಲ. ಶವಕ್ಕೆ ಬೇಕಾದ ಸುಗಂಧಗಳನ್ನೂ ಮುಲಾಮುಗಳನ್ನೂ ತಯಾ ರಿಸಿದ ಮತ್ತು ಅಂತ್ಯ ಸಮಯದಲ್ಲಿ ಅರಿಮಥಾಯದ ಯೋಸೆಫನ ಜೊತೆಗಿದ್ದ ನಿಕೋದೇಮನ ವಿವರಣೆಯೂ ಇಲ್ಲ, ತೋಟಗಾರನ ಸಾಕ್ಷ್ಯವೂ ಇಲ್ಲ". (ಪುಟ 20)

"ಅವರು ಸಮಾಧಿ ಬಿಟ್ಟ ಸಮಯದ ಕುರಿತು ಯಾವುದೇ ಹೇಳಿಕೆಯಿಲ್ಲ. ಶವಸಂಸ್ಕಾರ ಗೈಯ್ಯುವುದರಲ್ಲಿ ಭಾಗವಹಿಸಿದ ಒಬ್ಬ ವ್ಯಕ್ತಿ ಅವರನ್ನು ಮೂರನೆಯ ದಿವಸ ಬೆಳಿಗ್ಗೆ ನೋಡಿದನು. ಶವಸಂಸ್ಕಾರವೆಂಬ ಪ್ರಯೋಗದಿಂದ ಶರೀರವನ್ನು ಕುಳಿ ತೋಡಿ ಇಟ್ಟು ಮುಚ್ಚಲಾಯಿತೆಂದೂ ಆವಾಗ ಜೀವವಿದ್ದರೂ ಅನಂತರ ಉಸಿರು ಕಟ್ಟಿ ಸತ್ತಿರಬಹುದೆಂದೂ ಯಾರೂ ತಪ್ಪಾಗಿ ಭಾವಿಸದಿರಲಿ. ಯಥಾರ್ಥವೇನೆಂದರೆ ಯೇಸುಕ್ರಿಸ್ತರ ಸಮಾಧಿ ಕಲ್ಲಿನಿಂದ ಕೊರೆದು ಮಾಡಿದ ಸಾಧಾರಣ ದೊಡ್ಡ ಕೋಣೆಯಂತಿತ್ತು. ಅದರ ಬಾಗಿಲಿಗೆ ಮುಚ್ಚಿದ ಕಲ್ಲು ಉರುಟಾಕೃತಿಯಲ್ಲಿ ಕಡೆಯುವ ಕಲ್ಲಿನಂತಿದ್ದು ಬಾಗಿಲಿನ ಮುಂಭಾಗದಲ್ಲಿ ಈ ಮುಚ್ಚುವ ಕಲ್ಲನ್ನು ಬದಿಗೆ ಸರಿಸಿ ನಿಲ್ಲಿಸಲು ಬೇಕಾದ ಏರ್ಪಾಡು ಮಾಡಿದ ಸ್ಥಿತಿಯಲ್ಲಿ ಇದ್ದಿತು. ಗಾಳಿ ಒಳಗೆ ಪ್ರವೇಶಿಸದಂತೆ ಸಂಪೂರ್ಣವಾಗಿ ಮುಚ್ಚುವ ಸ್ಥಿತಿಯಲ್ಲಿ ಅದು ಇರಲಿಲ್ಲ. ಯೋಸೆಫ ಮತ್ತು ನಿಕೋದೇಮನ ಶುಶ್ರೂಷೆಯಿಂದ ಯೇಸುಕ್ರಿಸ್ತರು ಪ್ರಥಮ ರಾತ್ರೆಯಲ್ಲಿಯೇ ಮೂರ್ಛಾವಸ್ಥೆಯಿಂದ ಎಚ್ಚರಗೊಂಡರೆಂದು ಹೇಳಿದರೆ ಬೈಬಲಿನ ವಿವರಣೆಗಳಿಗೆ ಸರಿಹೊಂದುತ್ತದೆ''. (ಪುಟ 31)

"ಡಾಕ್ಟರ್ ಸ್ಪಾರೋ ಸಿಂಪ್ಸನ್ ದಿ ರಿಸರೆಕ್ಷನ್ ಎಂಡ್ ಮೋಡರ್ನ್ ಥೋಟ್ (The Resarrection & Modern Thought)ನಲ್ಲಿ ಎಷ್ಟರಮಟ್ಟಿಗೆ ಹೇಳುತ್ತಾರೆಂದರೆ:

"ನಾವು ನಂಬುವ ಪ್ರಕಾರ ಶವಕುಟೀರ ಖಾಲಿಯಾಗಿದ್ದಿತೆಂದು ಎಲ್ಲಾ ಸಾಕ್ಷ್ಯಾಧಾರಗಳು ಒಮ್ಮತದಿಂದ ಸೂಚಿಸುವುದಾದರೆ ಈ ಸಂಗತಿ ಅಂತಿಮವಾಗಿ ಎರಡು ವಿಷಯಗಳಲ್ಲಿ ಒಂದನ್ನು ಸೂಚಿಸುತ್ತದೆ: ಇದು ಮನುಷ್ಯನ ಕೆಲಸದ ಫಲವಾಗಿರಬೇಕು ಅಥವಾ ದೇವರ ಕ್ರಿಯೆಯ ಫಲವಾಗಿರಬೇಕು. ಒಂದೋ ಮನುಷ್ಯರ ಕೈಗಳು ಶರೀರವನ್ನು ಕೊಂಡೊಯ್ದಿರಬೇಕು. ಅಥವಾ ಸರ್ವಶಕ್ತನು ಮೃತ ಶರೀರಕ್ಕೆ ಜೀವದಾನ ಮಾಡಿರಬೇಕು. ಇದೇ ಸಮಸ್ಯೆಯಾಗಿದೆ.'' (ಪುಟ 47)

"ಅದು ಯಥಾರ್ಥ ಸಮಸ್ಯೆಯಲ್ಲವೆಂದು ಹೇಳಲು ನಾನು ಧೈರ್ಯಪಡುತ್ತೇನೆ. ಆ ಶರೀರ ನಿಜವಾಗಿ ಮೃತವಾಗಿರಲಿಲ್ಲವೆಂದೂ ಅದು ಅನಂತರ ಎಚ್ಚರಗೊಂಡಿತೆಂದೂ ಆದರೆ ಏನಾಗುತ್ತದೆ? ಖಾಲಿಯಾದ ಸಮಾಧಿಯ ಕುರಿತು ಈ ವ್ಯಾಖ್ಯಾನ ಧಾರಾಳವೆಂದೂ ತೃಪ್ತಿಕರವೆಂದೂ ಆತ್ಮ ವಿಶ್ವಾಸದಿಂದ ಹೇಳುತ್ತೇನೆ. ಶವಕುಟೀರ ಖಾಲಿಯಾದುದು ಮೋಸದ ಫಲವಾಗಿಯೋ ಅದ್ಭುತ ಕೃತ್ಯದ ಪರಿಣಾಮವಾಗಿಯೋ ಆಗಿದೆ ಎಂದು ನಾವು ಹೇಳಬೇಕಾದ ಆವಶ್ಯಕತೆ ಮೇಲಿನ ವ್ಯಾಖ್ಯಾನದ ಫಲವಾಗಿ ಉಂಟಾಗುವುದಿಲ್ಲ''. (ಪುಟ 25)

"ಯೇಸುಕ್ರಿಸ್ತರು ಮೂರ್ಛಾವಸ್ಥೆಯಿಂದ ಎಚ್ಚರಗೊಂಡರೆಂಬ ಮೇಲಿನ ಅಭಿಪ್ರಾಯದ ಕುರಿತು ಪುನರಾಲೋಚನೆ ನಡೆಸಿ ಈ ಸಂಭವ ಯಾವ ರೀತಿ ನಡೆದಿರಬಹುದೆಂದು ಪರ್ಯಾಲೋಚಿಸುವ. ಎಚ್ಚರಗೊಂಡ ಯೇಸುಕ್ರಿಸ್ತರನ್ನು ಸಮಾಧಿಯಿಂದ ಕೊಂಡು ಹೋಗುವ ಮೊದಲು ಕೆಲವು ಬಟ್ಟೆಬರೆ ಬೇಕಾಗಿದೆ. ತೋಟಗಾರನು ಶವಸಂಸ್ಕಾರರದಲ್ಲಿ ಸಹಾಯಕನಾಗಿದ್ದರೆ ಆತನು ಅಲ್ಲೇ ತೋಟದಲ್ಲಿ ಅಥವಾ ಹತ್ತಿರದಲ್ಲಿರುವ ತನ್ನ ಗುಡಿಸಲಿಗೆ ಹೋಗಿ ರಜಾದಿನದ ಉಡುಗೆಯನ್ನು ತಂದಿರಬಹುದು.

ತೋಟಗಾರನು ಶವಸಂಸ್ಕಾರ ಮಾಡಿದವರ ಜೊತೆಗಾರನಲ್ಲವಾಗಿದ್ದರೂ ಸಹ ಆಪತ್ಕಾಲದಲ್ಲಿ ಬಟ್ಟೆಗಳಿಗಾಗಿ ಓಡಿ ಹೋಗಿ ಕೇಳಲು ಯೋಗ್ಯವಾದ ಸ್ಥಳ ತೋಟಗಾರನ ಗುಡಿಸಲೇ ಆಗಿರಬೇಕು. ಯೇಸುಕ್ರಿಸ್ತರು ಸರಿಯಾಗಿ ಎಚ್ಚರಗೊಂಡಾಗ ಶವಕುಟೀರದಿಂದ ಬೇರೆ ಸುರಕ್ಷಾಸ್ಥಾನಕ್ಕೆ ಹೋಗುವ ಮೊದಲು ಆ ಗುಡಿಸಲಿನಲ್ಲಿ ಇದ್ದಿರಬೇಕು. (ಪುಟ 32). ಮಗ್ದಲದ ಮರಿಯಳೂ ಬೇರೆ ಸ್ತ್ರೀಯರೂ ಮುಂಜಾನೆ ಬಂದಾಗ ಯೇಸುಕ್ರಿಸ್ತರು ಆ ತೋಟದೊಳಗೆಯೇ ಇದ್ದಿರಬೇಕು. ಅವರಿಗೆ ತೋಟಗಾರನೋ ಅಥವಾ ಆತನ ಸಹಾಯಕನೋ ಒಂದು ಸಂದೇಶ ಕೊಡುತ್ತಾರೆ (ಅನಂತರ ಕಟ್ಟುಕಥೆಗಳು ವಿರಚಿತವಾದಾಗ ಒಂದೋ ಎರಡೋ ದೇವತೆಗಳೆಂದು ಇವರನ್ನು ವಿಶ್ಲೇಷಿಸಲಾಯಿತು). ಆ ಸಂದೇಶದಲ್ಲಿ ಯೇಸುಕ್ರಿಸ್ತರು ಎಚ್ಚರಗೊಂಡಿರುವರೆಂದೂ ಗಲಿಲಾಯದಲ್ಲಿ ಶಿಷ್ಯರನ್ನು ಕಾಣುವರೆಂದೂ ತಿಳಿಸಲಾಗಿತ್ತು. ಆ ಸ್ತ್ರೀಯರು ಇಷ್ಟ ಜನರೆಂಬ ನೆಲೆಯಲ್ಲಿ ಯೇಸುಕ್ರಿಸ್ತರನ್ನು ಸ್ವತ: ಕಂಡಿರಲಿಕ್ಕೂ ಸಾಧ್ಯವಿದೆ.'' (ಪುಟ 33)

ಲೇಖಕರು ಮುಂದುವರಿಯುತ್ತಾ ಈ ರೀತಿ ಬರೆದಿರುವರು:

"ಯಾವನಾದರೂ ಒಬ್ಬ ವ್ಯಕ್ತಿ ಎಲ್ಲಿಯಾದರೂ ತನ್ನ ಅಸಮ್ಮತಿಯ ಶಬ್ದವನ್ನು (ಬಹುಪಕ್ಷದವರ ವಿಶ್ವಾಸವಾದ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿರುವ

ರೆಂಬ ನಂಬಿಕೆಯ ವಿರುದ್ಧ) ಎತ್ತಿದರೆ ಅದು ಬಹುಪಕ್ಷದವರ ಬೊಬ್ಬೆಯಲ್ಲಿ ಲೀನವಾಗಿ ಹೋಗುತ್ತಿತ್ತು. ಚರ್ಚಿನ ಚರಿತ್ರೆಯನ್ನು ಪರಿಸಿದರೆ ಇಂತಹ ವ್ಯಕ್ತಿಗಳು ಧರ್ಮಾತ್ಮರೆಂದಲ್ಲ ಧರ್ಮದ್ರೋಹಿಗಳೆಂದು ಜೀವಂತ ಹುರಿಯಲ್ಪಟ್ಟ ಘಟನೆಗಳು ಕಾಣಬಹುದು." (ಪುಟ 34)

ಲೇಖಕರು ಅನಂತರಯೇಸುಕ್ರಿಸ್ತರು ಗಲಿಲಾಯಕ್ಕೆ ಹೋಗಿ ಅಲ್ಲಿಂದ ಡಮಾಸ್ಕಸ್‌ಗೆ ಹೋಗಿ ಸಂತ ಪೌಲರನ್ನು ಕಂಡು ಪೂರ್ವ ದೇಶಗಳಿಗೆ ಹೋಗುವ ದಾರಿಯಲ್ಲಿ ಬಾಬಿಲೋನಿಗೆ ಹೋದರೋ ಎಂಬ ಸಂಗತಿಯನ್ನು ಚರ್ಚಿಸುತ್ತಾರೆ. ಕೊನೆಗೆ ಲೇಖಕರು ತನ್ನ ಅಭಿಪ್ರಾಯವನ್ನು ಈ ರೀತಿ ವ್ಯಕ್ತಗೊಳಿಸುತ್ತಾರೆ: "ನನ್ನ ಅಭಿಪ್ರಾಯವೇನೆಂದರೆ ಎಲ್ಲಾ ಮನುಷ್ಯರು ದಾಟಿ ಹೋಗಬೇಕಾದ ಸಂಕುಚಿತವೂ ಭಯಾನಕವೂ ಆದ ಆ ಮರಣದ ದ್ವಾರದಲ್ಲಿ ಒಬ್ಬ ಮನುಷ್ಯನೆಂಬ ನೆಲೆಯಲ್ಲಿ ಯೇಸುಕ್ರಿಸ್ತರು ಸಹ ದಾಟಿ ಹೋಗಿರುವರೆಂದು ನಂಬುವುದರಲ್ಲಿ ನಾನು ತೃಪ್ತನಾಗಿದ್ದೇನೆ". (ಪುಟ 70)

ಆ ಲೇಖಕರು ತನ್ನ ಗ್ರಂಥವನ್ನು ಈ ರೀತಿ ಮುಗಿಸಿರುವರು:

"ಯೇಸು ಎಲ್ಲಿ ಮೃತರಾದರೆಂದು ನಮಗೆ ತಿಳಿದಿಲ್ಲವೆಂದು ನಾನು ಪುನಃ ಹೇಳುತ್ತೇನೆ. ವಿದೂರ ಸ್ಥಳಗಳಲ್ಲಿ ಇಸ್ರಾಯೇಲ್ ಗೋತ್ರದ ಕಾಣದೆ ಹೋದ ಕುರಿಗಳಿಗೆ ಉಪದೇಶಿಸುತ್ತಾ ಯೇಸುಕ್ರಿಸ್ತರು ಶ್ರೀನಗರದಲ್ಲಿ ಮರಣ ಹೊಂದಿ ಅವರ ಹೆಸರನ್ನು ಹೊಂದಿರುವ ಆ ಶಿಲಾಗೃಹದಲ್ಲಿ ಶವಸಂಸ್ಕರಿಸಲ್ಪಟ್ಟಿರಲೂಬಹುದು ಅಥವಾ ಅವರು ಗಲಿಲಾಯದ ತಮ್ಮ ಆಶ್ರಯ ಸ್ಥಾನವನ್ನು ಬಿಟ್ಟಿಗಲದೆ ಟೈಬೀರಿಯಾನ್ ಸರೋವರದ ಏಕಾಂತ ಪ್ರದೇಶದಲ್ಲಾಗಲೀ ಜನಶೂನ್ಯವಾದ ಯಾವುದೋ ಪರ್ವತ ಶೃಂಗದಲ್ಲಾಗಲೀ ಅಥವಾ ಯಾವುದೋ ಅಜ್ಞಾತ ಕಣಿವೆ ಪ್ರದೇಶದಲ್ಲೋ ತನ್ನ ಗಾಯಗಳ ಕಾರಣದಿಂದಾಗಿ ನಿಧಾನವಾಗಿ ಮರಣ ಹೊಂದಿರಬಹುದೆಂದೂ 'ಅವರ ಸಮಾಧಿ ಎಲ್ಲಿದೆಯೋ ಇಂದಿನ ವರೆಗೆ ಯಾರಿಗೂ ತಿಳಿಯದು' ಎಂದೂ ಹೇಳಬಹುದು...." *

(ಮುಂದುವರಿಯುವುದು)

* If Jesus did not die upon the Cross-A study in Evidence, by Judge Ernest Brougham Docker, (London, Robert Scott, 1920)

## Read Ahmadiyya Periodicals in Different Languages to Study Different Religions

# MINARET

ENGLISH QUARTERLY JOURNAL

Single Copy: Re. 1/- Annual Subscription: Rs. 4/-

Apple to: **The Manager, Minaret Quarterly,**
Ahmadiyya Building, West Silk Street,
**CALICUT - 673001.**

# BADR

URDU WEEKLY ORGAN

Single Copy: 30 Paise. Annual Subscription: Rs. 15/-

Apply to: **The Manager, Badr Weekly**
**QADIAN - 143516.**

# SATHYADOOTHAN

MALAYALAM FORTNIGHTLY ORGAN

Single Copy: 35 Paise. Annual Subscription: Rs. 8/-

Apply to: **The Manager, Sathyadoothan Fortnightly**
**CANNANORE - 670001.**

# SAMADHANA VAZHI

TAMIL MONTHLY ORGAN

Single Copy: 25 Paise. Annual Subscription: Rs. 3/-

Apply to: **The Manager, Samadhana Vazhi Monthly**
**55, Harris Road, MADRAS - 600002.**

Regd. with the Registrar of Newspapers for India. Regd. No. R. N. 27354/75
YUGARASHMI Kannada Quarterly, Oct.-Dec. 1975 / Ikha-Fatah 1354


# BOOKS ON ISLAM AND CONTEMPORARY RELIGIONS

1. **Holy Quran with Arabic Text and English Translation** — 12-00
2. **Ahmadiyyat or The True Islam** — 8-00
   By Hazrat Mirza Bashiruddin Mahmud Ahmad.
3. **New World Order** — 2-25
   By Hazrat Mirza Bashiruddin Mahmud Ahmad
4. **The Teachings of Islam** — 6-00
   By Hazrat Mirza Ghulam Ahmad
5. **Our Foreigh Missions** — 2-25
   By Mirza Mubarak Ahmad
6. **Where did Jesus Die?** — 2-25
   By J. D. Shams
7. **The Tomb of Jesus** — 0-75
   By Sufi M. R. Bengali
8. **Jesus in India** — 2-25
   By Mirza Ghulam Ahmad
9. **The Christian Doctrine of Atonement** — 1-50
   By Dr Mufti Muhammad Sadiq
10. **An Interpretation of Islam** — 1-50
    By Prof. Dr. Laura Veccia Vaglieri

Write to

**NAZIR DAWAT - O - TABLIGH**

P. O. QADIAN-143516. (Punjab)


Printed by U N Srinivas Bhat, at Aruna Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore at 23/1008 Ansari Road, Bunder, Mangalore-575001.